Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–6 | ಫೆಬ್ರವರಿ 5–11, 2024 | ಪುಟ 16 | ರೂ. 10/–
Volume-18 | Issue-6 | February 5-11, 2024 | Pages:16 | Price: 10/-



ಸೌಹಾರ್ದ ಪರಂಪರೆ ಉಳಿಸುವ ಸಂಕಲ್ಪ: ಬೆಸೆದ ಮಾನವ ಸರಪಳಿ

ಮನು ಸ್ಮೃತಿಯಲ್ಲಿ ದಲಿತರ ಸ್ಥಾನವೇನು?



ಬಡವರನ್ನು ಹಿಂಡಿ ಸಿರಿವಂತರ ಸಂಪತ್ತು ಹೆಚ್ಚಿಸಿದ ಬಜೆಟ್

ನಿತೀಶ್‌ಕುಮಾರ್: ಬಿಹಾರದಲ್ಲಿ ವಿಶ್ವಾಸ ದ್ರೋಹ



ಬಡವರನ್ನು ಹಿಂಡಿ ಶ್ರೀಮಂತರ ಸಂಪತ್ತನ್ನು ಹೆಚ್ಚಿಸುವ ಮೋದಿ 'ಅಭಿವೃದ್ಧಿ ಮಾದರಿ'ಯನ್ನು ಮುಂದಕ್ಕೊಯ್ಯುವ

ಮಧ್ಯಂತರ ಒಕ್ಕೂಟ ಬಜೆಟ್ 2024–25

ಭಾರತದ ಅರ್ಥವ್ಯವಸ್ಥೆಯ ಸ್ಥಿತಿಯ ಬಗ್ಗೆ ಹಣಕಾಸು ಮಂತ್ರಿಗಳ ದೊಡ್ಡ–ದೊಡ್ಡ ಮಾತುಗಳ ಹೊರತಾಗಿಯೂ, 2024–25 ರ ಮಧ್ಯಂತರ ಒಕ್ಕೂಟ ಬಜೆಟ್ ಭಾರತದ ದುಡಿಯುವ ಜನರನ್ನು ಎದುರಿಸುತ್ತಿರುವ ಗಂಭೀರ ಆರ್ಥಿಕ ಪರಿಸ್ಥಿತಿಯನ್ನು ಮತ್ತು ಮೋದಿ ಸರ್ಕಾರದ 'ಅಭಿವೃದ್ಧಿ' ಪರಿಕಲ್ಪನೆಯ ದುಷ್ಟ ಮುಖವನ್ನು ಪ್ರಕಟಪಡಿಸುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ತೀಕ್ಷ್ಣವಾಗಿ ವಿಮರ್ಶಿಸಿದೆ. ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರಾಗಿಸುವುದು, ಬಡವರನ್ನು ಮತ್ತಷ್ಟು ಬಡವರಾಗಿಸುವುದು ಮೋದಿ ಸರ್ಕಾರದ 'ಅಭಿವೃದ್ಧಿ'ಯ ಪರಿಕಲ್ಪನೆ ಎಂದಿರುವ ಸಿಪಿಐ(ಎಂ), 2023–24 ರ ಪರಿಷ್ಕೃತ ಅಂಕಿಅಂಶಗಳು ಇದೇ ಕಥೆಯನ್ನು ಹೇಳುತ್ತವೆ ಎಂದಿದೆ.

2024–25ರ ನಿಜವಾದ ಬಜೆಟ್ 2024 ರ ಚುನಾವಣೆಗಳ ನಂತರ ರಚನೆಯಾಗುವ ಹೊಸ ಸರ್ಕಾರ ಮತ್ತು ಸಂಸತ್ತಿನ ಜವಾಬ್ದಾರಿಯಾಗಿದೆ. ಆದರೆ 2023–24ರ ರೆವಿನ್ಯೂ ಆದಾಯವು ಹಿಂದಿನ ವರ್ಷಕ್ಕೆ ಹೋಲಿಸಿದರೆ 13.3%ದಷ್ಟು ಬೆಳೆದಿದ್ದು, ಬಜೆಟ್ ಅಂದಾಜುಗಳನ್ನು ಮೀರಿದ್ದರೂ, ವಿತ್ತೀಯ ಕೊರತೆಯನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರದ ವೆಚ್ಚಗಳನ್ನು ಹಿಸುಕಿ ಬಜೆಟ್ ಅಂದಾಜುಗಳಿಗಿಂತ ಕೆಳಕ್ಕೆ ಇಳಿಸಲಾಗಿದೆ ಎಂಬುದು ಗಮನಾರ್ಹ. ಈ ವೆಚ್ಚಗಳು ಕೇವಲ 7%ದಷ್ಟು ಬೆಳೆದಿವೆ, ಜಿಡಿಪಿಯ ಬೆಳವಣಿಗೆ ದರಕ್ಕಿಂತಲೂ ಕಡಿಮೆ. ಜಿಡಿಪಿ ಬೆಳವಣಿಗೆ ಅಧಿಕೃತವಾಗಿ 8.9% ಎಂದು ನಿರೀಕ್ಷಿಸಲಾಗಿದೆ. ಸರ್ಕಾರದ ಆಡಳಿತ ವೆಚ್ಚವು ಬಜೆಟ್ ಅಂದಾಜಿಗಿಂತ ಹೆಚ್ಚಿದ್ದರೂ ಅಭಿವೃದ್ಧಿ ವೆಚ್ಚದಲ್ಲಿ ಈ ಕೊರತೆ ಕಂಡುಬಂದಿದೆ. ಅಂದರೆ ಕಲ್ಯಾಣ ಯೋಜನೆಗಳ ವೆಚ್ಚ ಹಾಗೂ ಬಂಡವಾಳ ವೆಚ್ಚದ ಮೇಲೆ ಕೊಡಲಿ ಏಟು ಬಿದ್ದಿದೆ. ಇದು ಭವಿಷ್ಯದ ಬೆಳವಣಿಗೆ ಮತ್ತು ಅರ್ಥವ್ಯವಸ್ಥೆಯ ಮೂಲಭೂತ ಅಂಶಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳು, ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣ, ಮತ್ತು ಪ್ರಧಾನಮಂತ್ರಿ ಕೃಷಿ ನೀರಾವರಿ ಯೋಜನೆ ಹಾಗೂ ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಮತ್ತು ಇತರ ಗುಂಪುಗಳಿಗೆ ಸಂಬಂಧಪಟ್ಟ ಯೋಜನೆಗಳಂತಹ ಹಲವಾರು ಬಾಬ್ತುಗಳ ವೆಚ್ಚಗಳನ್ನು ಬಜೆಟ್ ಮಟ್ಟಕ್ಕಿಂತ ಕೆಳಕ್ಕೆ ಇರಿಸಲಾಗಿದೆ. ಪ್ರಧಾನಮಂತ್ರಿ ಆವಾಸ್ ಯೋಜನಾ, ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನಾ ಮತ್ತು ಪಿಎಂ ಪೋಷಣ್ ಮೇಲಿನ ಪರಿಷ್ಕೃತ ವೆಚ್ಚಗಳು ಬಜೆಟಿನಲ್ಲಿ ಹೇಳಿರುವುದಕ್ಕಿಂತ ಕಡಿಮೆಯಷ್ಟೇ ಅಲ್ಲ, 2022–23ರ ವೆಚ್ಚಕ್ಕಿಂತಲೂ ಕಡಿಮೆಯಾಗಿವೆ. ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳಿಗಾಗಿ ಯೋಜನೆಗಳು ಎರಡೂ ರೀತಿಗಳಲ್ಲಿ ಕಡಿತವನ್ನು ಕಂಡಿವೆ. 2022–23ಕ್ಕಿಂತ 2023–24ರಲ್ಲಿನ ಈ ಕಡಿಮೆ ವೆಚ್ಚಗಳು ರಸಗೊಬ್ಬರ ಮತ್ತು ಆಹಾರ ಸಬ್ಸಿಡಿಗಳು, ಮನರೇಗ ಮತ್ತು ನಗರಾಭಿವೃದಿಂತಹ ಬಾಬ್ತುಗಳನ್ನೂ ಒಳಗೊಂಡಿವೆ. 2022–23 ಮತ್ತು 2023–24 ರ ನಡುವೆ ಆಹಾರ ಸಬ್ಸಿಡಿಗಳು 60470 ಕೋಟಿ ರೂ.ಗಳು ಮತ್ತು ರಸಗೊಬ್ಬರ ಸಬ್ಸಿಡಿಗಳು 62445 ಕೋಟಿ ರೂ.ಗಳ ಕಡಿತ ಕಂಡಿವೆ. 2023–24ರಲ್ಲಿ ಮನರೇಗ ಮೇಲಿನ ವೆಚ್ಚ ಹಿಂದಿನ ವರ್ಷಕ್ಕಿಂತ ರೂ. 4806 ಕೋಟಿಯಷ್ಟು ಕಡಿಮೆಯಾಗಿದೆ. ಗ್ರಾಮೀಣಾಭಿವೃದ್ಧಿ ವೆಚ್ಚಗಳು ಮತ್ತು ರಾಜ್ಯಗಳಿಗೆ ವರ್ಗಾವಣೆಗಳು ವಾಸ್ತವಿಕವಾಗಿ ಸ್ಥಗಿತಗೊಂಡಿವೆ, ಅಂದರೆ ನೈಜ ಬೆಲೆಗಳಲ್ಲಿ ಕಡಿತವನ್ನೇ ಸೂಚಿಸುತ್ತವೆ. ರಾಜ್ಯಗಳನ್ನು ಮತ್ತಷ್ಟು ಹಿಂಡಲಾಗಿದೆ. ಏಕೆಂದರೆ, ಬಂಡವಾಳ ವೆಚ್ಚಗಳಿಗಾಗಿ ನೀಡಿರುವ ಸಾಲಗಳ ಮೊತ್ತ ಈ ಹಿಂದೆ ಜಿಎಸ್‌ಟಿ ಪರಿಹಾರದ ಬದಲಾಗಿ ನೀಡಲಾಗಿದ್ದ ಸಾಲಗಳಿಗಿಂತ ಬಹಳ ಕಡಿಮೆ ಎಂದು 2023–24 ರ ಪರಿಷ್ಕೃತ ಅಂಕಿಅಂಶಗಳಲ್ಲಿರುವ ಸಂಗತಿಯತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ಈ ರೀತಿ ಕೇಂದ್ರ ಸರ್ಕಾರದ ವೆಚ್ಚದಲ್ಲಿ ಹಿಂಡಿಕೆ ಮತ್ತು ಆದಾಯಗಳಲ್ಲಿ ತುಲನಾತ್ಮಕ 'ಸುಧಾರಣೆ' ಅತ್ಯಂತ ಕಳಪೆ ಬೆಳವಣಿಗೆಯ ಹಿನ್ನೆಲೆಯಲ್ಲಿ ನಡೆದಿದೆ. 2023–24ರಲ್ಲಿ ಅಂದಾಜು 7.3 % 'ನೈಜ' ಬೆಳವಣಿಗೆಯಿರುತ್ತದೆ ಎಂಬುದು ಶುದ್ಧ ಕಲ್ಪನೆಯಷ್ಟೇ. ಇದು ಮತ್ತು ಇತರ ವಿಷಯಗಳು, 2023–24 ರಲ್ಲಿ ಹಣದುಬ್ಬರ ದರವು ಕೇವಲ 1.6 %ಕ್ಕೆ ಇಳಿದಿದೆ ಎಂಬ ಅಸಂಬದ್ಧ ಪ್ರತಿಪಾದನೆಯನ್ನು ಆಧರಿಸಿವೆ. ಇದು ಗ್ರಾಹಕ ಬೆಲೆ ಸೂಚ್ಯಂಕ(ಸಿಪಿಐ) ಆಧಾರಿತ ಹಣದುಬ್ಬರ ದರಗಳಿಗೆ ತದ್ವಿರುದ್ಧವಾಗಿದೆ. ಇದು ಸುಮಾರು 6%, ಮತ್ತು ಆಹಾರ ಹಣದುಬ್ಬರ 10% ರಷ್ಟಿದೆ. ರಿಜರ್ವ್ ಬ್ಯಾಂಕ್ ಬೆಲೆ ಏರಿಕೆಯನ್ನು ತಡೆಯಲು ತನ್ನ ರೆಪೋ ದರವನ್ನು ಫೆಬ್ರವರಿ 2023 ರಿಂದಲೂ 6.5% ದಲ್ಲೇ ಹಿಡಿದಿಟ್ಟುಕೊಂಡಿದೆ ಎಂಬುದು ಭಾರತದಲ್ಲಿ ಹಣದುಬ್ಬರದ ನೈಜ ಕಥೆಯನ್ನು ಪ್ರಕಟಪಡಿಸುತ್ತದೆ.

ಕಳಪೆ ಬೆಳವಣಿಗೆಯ ಹೊರತಾಗಿಯೂ, ನಿಧಾನವಾಗಿ ಬೆಳೆಯುತ್ತಿರುವ ಆದಾಯದ ಹಂಚಿಕೆಯನ್ನು ದೊಡ್ಡ ಉದ್ಯಮಿಗಳು, ಶ್ರೀಮಂತರು ಮತ್ತು ಸಂಪನ್ನರ ಪರವಾಗಿ ತೀವ್ರವಾಗಿ ತಿರುಗಿಸಲಾಗಿದೆ. ಕೋವಿಡ್ ಪೂರ್ವದ ಅವಧಿಗೆ ಹೋಲಿಸಿದರೆ ಕಾರ್ಪೊರೇಟ್ ತೆರಿಗೆಗಳು ಮತ್ತು ಆದಾಯ ತೆರಿಗೆಗಳ ಆದಾಯವು ಗಣನೀಯವಾಗಿ ಹೆಚ್ಚಿರುವುದು, ತೆರಿಗೆ ದರಗಳನ್ನು ಹೆಚ್ಚಿಸಿದ್ದರಿಂದ ಅಲ್ಲ, ಬದಲಿಗೆ ಒಟ್ಟು ಆದಾಯದಲ್ಲಿ ಶ್ರೀಮಂತರ ಪಾಲು ಹೆಚ್ಚಾದ ಕಾರಣದಿಂದಾಗಿ. ಇದು K–ಆಕಾರದ ಚೇತರಿಕೆ, ದುಡಿಯುವ ಜನರನ್ನು ಹೆಚ್ಚು ಕೆಲಸ ಮಾಡಿ, ಕಡಿಮೆ ಪಡೆಯುವಂತೆ ಹಿಂಡುವ 'ಅಭಿವೃದ್ಧಿ' ಎಂದು ಪೊಲಿಟ್‌ಬುರೊ ವರ್ಣಿಸಿದೆ.

ಈ ಮಧ್ಯಂತರ ಬಜೆಟ್, ದುಡಿಯುವ ಜನರನ್ನು 'ಬೆಳವಣಿಗೆಯಲ್ಲಿ ಪಾಲುದಾರರು' ಎಂದೆಲ್ಲಾ ಹೇಳುವ, 'ನಿಜವಾದ ಸಾಮಾಜಿಕ ನ್ಯಾಯ' ಎಂದು ಬಿಂಬಿಸುವ ಮೋದಿ ಪ್ರಚಾರ ಯಂತ್ರದ ಅಬ್ಬರದ ಹೇಳಿಕೆಗಳ ಪೊಳ್ಳುತನವನ್ನು ಸಂಪೂರ್ಣವಾಗಿ ಬಯಲಿಗೆಳೆಯುತ್ತದೆ. ಈ ಬಜೆಟ್ ಭಾರತದ ಬಹುಪಾಲು ದುಡಿಯುವ ಜನರ ಜೀವನೋಪಾಯಗಳನ್ನು ಹಿಂಡಿ, ಕೆಲವರು ಗರಿಷ್ಟ ಲಾಭಗಳನ್ನು ಗಿಟ್ಟಿಸುವಂತೆ ಮಾಡುವ ಮೋದಿ ಸರ್ಕಾರದ ದುಷ್ಟ 'ಅಭಿವೃದ್ಧಿ ಮಾದರಿ'ಯನ್ನು ಮುಂದಕ್ಕೆ ಒಯ್ಯುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬುರೊ ತೀಕ್ಷ್ಣವಾಗಿ ಟೀಕಿಸಿದೆ.


ಭಗವಂತಾ, ನಮಗೆ
ಸರಕಾರೀ ದತ್ತಾಂಶಗಳ ಆಚೆ
ನೋಡುವ ಶಕ್ತಿ ಕೊಡು!



ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಸುಳ್ಳಿನ ಕಂತೆ ಮತ್ತು ಖಾಸಗೀಕರಣದ ಹತಾಶ ಪ್ರಯತ್ನ–ಸಿಐಟಿಯು

ಕೇಂದ್ರ ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಮಧ್ಯಂತರ ಬಜೆಟ್ ಸುಳ್ಳಿನ ಕಂತೆ ಮತ್ತು ಖಾಸಗೀಕರಣದ ಹತಾಶ ಪ್ರಯತ್ನ ಎಂದು ಸಿಐಟಿಯು ತೀವ್ರವಾಗಿ ಖಂಡಿಸಿದೆ.



ವ್ಯಂಗ್ಯಚಿತ್ರ ಕೃಪೆ: ಸೊರಿತ್, ಡೌನ್‌ಟುಅರ್ಥ್

ಇದು ಜನರ ಸರಾಸರಿ ಆದಾಯವು 50% ರಷ್ಟು ಹೆಚ್ಚಾಗಿದೆ ಮತ್ತು ಹಣದುಬ್ಬರವು ಮಿತವಾಗಿದೆ ಎಂದು ಹೇಳುವ ಮೂಲಕ ಮತ್ತೆ ಅಧಿಕಾರಕ್ಕೆ ಬರುವ ಪ್ರಯತ್ನವಾಗಿದೆ, ಆದರೆ ಇದೊಂದು ಕಟ್ಟುಕತೆ, ವಾಸ್ತವ ಸಂಗತಿ ಸಂಪೂರ್ಣ ಭಿನ್ನವಾಗಿದೆ. ಅಗತ್ಯ ವಸ್ತುಗಳ ಬೆಲೆಗಳಲ್ಲಿ ಮತ್ತು ನಿರುದ್ಯೋಗದ ಹೆಚ್ಚಳ ಇಡೀ ದೇಶವನ್ನು ಆವರಿಸಿದೆ. ಐಎಲ್‌ಒ(ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ) ವರದಿಯು ಭಾರತ ಸೇರಿದಂತೆ ವಿಶ್ವದಾದ್ಯಂತ ನಿಜವೇತನಗಳು ಕೆಳಗೆ ಬೀಳುತ್ತಿವೆ ಎಂಬುದನ್ನು ಬಿಚ್ಚಿಟ್ಟಿದೆ ಮತ್ತು ಬಡತನ ಸೂಚ್ಯಂಕ ಶ್ರೇಯಾಂಕ ಕುರಿತ ವಿಶ್ವಸಂಸ್ಥೆಯ ವರದಿಯು ಭಾರತದ ಸ್ಥಿತಿ ಹಿಂದೆಂದಿಗಿಂತಲೂ ಅತ್ಯಂತ ಕೆಟ್ಟದಾಗಿದೆ ಎಂದು ಬಯಲು ಮಾಡಿದೆ. ತಮ್ಮ ಬದುಕಿನ ಅಗತ್ಯಗಳನ್ನು ಪೂರೈಸಿಕೊಳ್ಳಲು ಹೆಣಗಾಡುತ್ತಿರುವ ಜನರಲ್ಲಿ ಆತ್ಮವಿಶ್ವಾಸ ತುಂಬುವ ಬದಲು ಮಧ್ಯಂತರ ಬಜೆಟ್ ವಾಸ್ತವತೆಯ ಕ್ರೂರ ತಮಾಷೆಗೆ ಇಳಿದಿದೆ ಎಂದು ಸಿಐಟಿಯು ತೀವ್ರ ಖೇದ ವ್ಯಕ್ತಪಡಿಸಿದೆ.

ಹಣಕಾಸು ಮಂತ್ರಿಗಳು ತಮ್ಮ ಅತಿ ಚಿಕ್ಕ ಬಜೆಟ್ ಭಾಷಣದಲ್ಲಿ

ಪುಟ 4 ಕ್ಕೆ

ಸತತ 10ನೇ ರೈತ–ವಿರೋಧಿ ಬಜೆಟ್ ಕೊಟ್ಟಿರುವ ದಾಖಲೆ–ಎಐಕೆಎಸ್

ಸಿ2+50% ಸೂತ್ರದಂತೆ ಎಂಎಸ್‌ಪಿ ಯ ಕಾನೂನಾತ್ಮಕ ಖಾತ್ರಿಯ ಕ್ರಮವಿಲ್ಲ, ರೈತರಿಗೆ ದುಪ್ಪಟ್ಟು ಆದಾಯದ ಭರವಸೆ ಒಂದು ಪ್ರಹಸನ

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಕೇಂದ್ರ ಬಜೆಟ್ 2024–25 (ಮಧ್ಯಂತರ) "ನಾವೀನ್ಯತೆ ಮತ್ತು ಒಳಗೊಳ್ಳುವ" ಬಜೆಟ್ ಎಂದು ನಕಲಿ ಕಥನವನ್ನು ಸೃಷ್ಟಿಸಿದೆ, ಆದರೆ ಕಟುವಾಸ್ತವವೆಂದರೆ 2023–24 ಮತ್ತು 2024–25 ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳ ಮೇಲೆ ಕಳೆದ ಐದು ವರ್ಷಗಳಲ್ಲೇ ಅತ್ಯಂತ ಕಡಿಮೆ ವೆಚ್ಚದ ವರ್ಷಗಳು. ಚುನಾವಣಾ ವರ್ಷದಲ್ಲಿಯೂ, ಕೇಂದ್ರ ಬಜೆಟ್ 2024–25 (ಮಧ್ಯಂತರ) ಗ್ರಾಮೀಣ ಅರ್ಥವ್ಯವಸ್ಥೆ ಮತ್ತು ಕೃಷಿ ಕ್ಷೇತ್ರಕ್ಕೆ ಗಣನೀಯವಾಗಿ ಏನನ್ನೂ ನೀಡುವುದಿಲ್ಲ ಎಂದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಬಲವಾಗಿ ಟೀಕಿಸಿದೆ.

2022–23ಕ್ಕೆ ಹೋಲಿಸಿದರೆ, 2024–25ರ ಬಜೆಟ್‌ನಲ್ಲಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ 81 ಸಾವಿರ ಕೋಟಿ ರೂ.ಗಳಷ್ಟು ನೀಡಿಕೆಗಳನ್ನು ಕಡಿತಗೊಳಿಸಲಾಗಿದೆ. 2022–23ರಲ್ಲಿನ ವಾಸ್ತವಿಕ ವೆಚ್ಚಕ್ಕೆ ಹೋಲಿಸಿದರೆ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳಿಗೆ ಒಟ್ಟಾರೆ ಹಂಚಿಕೆಗಳಲ್ಲಿ 22.3% ಇಳಿಕೆಯಾಗಿದೆ ಮತ್ತು 2023–24ರ ಪರಿಷ್ಕೃತ ಬಜೆಟ್‌ಗೆ ಹೋಲಿಸಿದರೆ 6% ಇಳಿಕೆಯಾಗಿದೆ. ಇದು ತನ್ನ ಕಾರ್ಪೊರೇಟ್ ಬಂಟರ ಆದೇಶದಂತೆ ಸಣ್ಣ ಪ್ರಮಾಣದ ಕೃಷಿಯನ್ನು ಮತ್ತು ಕೋಟ್ಯಂತರ ರೈತರು ಮತ್ತು ಕೃಷಿ ಕಾರ್ಮಿಕರ ಜೀವನೋಪಾಯವನ್ನು ವ್ಯವಸ್ಥಿತವಾಗಿ ಕಳಚಿ ಹಾಕಲು ಪ್ರಯತ್ನಿಸುತ್ತಿರುವ ಮೋದಿ ಆಳ್ವಿಕೆಯ "ಎಲ್ಲರನ್ನೂ ಒಳಗೊಳ್ಳುವ" ಕ್ರಮದ ವರ್ಗ ಸ್ವರೂಪದ ಒಂದು ಸ್ಪಷ್ಟ ಸೂಚನೆಯಾಗಿದೆ ಎಂದಿರುವ ಎಐಕೆಎಸ್, ಮೋದಿ ಆಡಳಿತವು ಕಂಡುಹಿಡಿದಿರುವ ರೈತಾಪಿಗಳನ್ನು ನಾಶಮಾಡುವ "ನವೀನ"

ಪುಟ 10 ಕ್ಕೆ

ಸಂಪಾದಕೀಯ

ಅನುದಾನ ಹಂಚಿಕೆಯಲ್ಲಿ ರಾಜ್ಯಗಳಿಗೆ ಅನ್ಯಾಯ: ವಂಚಿಸುವ ವರಸೆಗಳು

ಕರ್ನಾಟಕದ ಸಂಸತ್ ಸದಸ್ಯರಾದ ಡಿ.ಕೆ. ಸುರೇಶ್ ರವರು ಭಾರತ ಒಕ್ಕೂಟ ಸರಕಾರವು ತನ್ನ ಬಜೆಟ್ ನಲ್ಲಿ ಹಣ ಹಂಚಿಕೆಯಲ್ಲಿ ಮಾಡಿರುವ ತಾರತಮ್ಯಗಳನ್ನು ವಿರೋಧಿಸಿ ಆಡಿದ ಮಾತು ತೀವ್ರವಾದ ಚರ್ಚೆಗೆ ಮತ್ತು ಟೀಕೆಗಳಿಗೆ ಕಾರಣವಾಗಿದೆ.

"ಕೇಂದ್ರವು ದಕ್ಷಿಣ ಭಾರತದ ರಾಜ್ಯಗಳಿಗೆ ಜಿ.ಎಸ್.ಟಿ. ಮತ್ತು ನೇರ ತೆರಿಗೆಗಳ ಸರಿಯಾದ ಪಾಲನ್ನು ಹಂಚಿಕೆ ಮಾಡುತ್ತಿಲ್ಲ. ದಕ್ಷಿಣ ಭಾರತದ ರಾಜ್ಯಗಳಿಗೆ ಎಲ್ಲಾ ವಿಷಯಗಳಲ್ಲಿ ಅನ್ಯಾಯವಾಗುತ್ತಿದೆ ಎಂಬ ಭಾವನೆ ಇದೆ. ದಕ್ಷಿಣದ ರಾಜ್ಯಗಳಿಂದ ಸಂಗ್ರಹಿಸಲಾದ ಹಣವನ್ನು ಉತ್ತರ ಭಾರತದ ರಾಜ್ಯಗಳಿಗೆ ಅಸಮಾನವಾಗಿ ಮರು ನಿರ್ದೇಶಿಸಲಾಗುತ್ತಿದೆ. ಇದೇ ರೀತಿ ಮುಂದುವರಿದರೆ ದಕ್ಷಿಣದ ರಾಜ್ಯಗಳು ಪ್ರತ್ಯೇಕ ರಾಷ್ಟ್ರ ರಚನೆಗೆ ಒತ್ತಾಯಿಸಬಹುದು" ಎಂದು ಕಾಂಗ್ರೆಸ್ ಸಂಸದ ಡಿ.ಕೆ.ಸುರೇಶ್ ಹೇಳಿದ್ದಾರೆಂದು ವರದಿಯಾಗಿದೆ.

ಒಕ್ಕೂಟ ಸರಕಾರದ ಬಜೆಟ್ ಹಂಚಿಕೆ, ಅನುದಾನ ನೀಡಿಕೆಯಲ್ಲಿ ರಾಜ್ಯಗಳಿಗೆ ಏನೇ ತಾರತಮ್ಯ, ಅನ್ಯಾಯಗಳಾಗಿರಲಿ ಒಕ್ಕೂಟ ವ್ಯವಸ್ಥೆಯಲ್ಲಿ ಅದನ್ನು ವಿರೋಧಿಸಲು ಹಲವು ಪ್ರಜಾಸತ್ತಾತ್ಮಕ ವಿಧಾನಗಳು ಮತ್ತು ದಾರಿಗಳಿವೆ. ಜನಸಾಮಾನ್ಯರಲ್ಲಿ ಗೊಂದಲವುಂಟು ಮಾಡುವುವಂತಹ ಪ್ರತ್ಯೇಕ ರಾಷ್ಟ್ರದ ಒಡಕು ಮಾತುಗಳನ್ನು ಸಂಸದ ಡಿ.ಕೆ.ಸುರೇಶ್ ರವರು ಆಡುವುದು ಅಗತ್ಯವಿರಲಿಲ್ಲ. ಜವಾಬ್ದಾರಿ ಸ್ಥಾನಗಳಲ್ಲಿರುವವರ ಮಾತುಗಳು ಜವಾಬ್ದಾರಿಯಿಂದಲೇ ಕೂಡಿರಬೇಕಾಗುತ್ತದೆ.

ಆದರೆ ಇದರ ಅರ್ಥ ಭಾರತ ಒಕ್ಕೂಟ ಸರಕಾರದ ಬಜೆಟ್ ನೀಡಿಕೆ ಮತ್ತು ತೆರಿಗೆ ಮತ್ತು ಅನುದಾನ ಹಂಚಿಕೆಗಳು ರಾಜ್ಯಗಳಿಗೆ ಸಮಾಧಾನಕರವಾಗಿವೆ, ನ್ಯಾಯಯುತವಾಗಿವೆ ಎಂದು ಅಲ್ಲ. ಒಕ್ಕೂಟ ಸರಕಾರದ ಅನುದಾನ ಹಂಚಿಕೆ, ಜಿ.ಎಸ್.ಟಿ. ತೆರಿಗೆ ಹಂಚಿಕೆ, ಜಿ.ಎಸ್.ಟಿ. ಪರಿಹಾರ, ನೈಸರ್ಗಿಕ ವಿಕೋಪಗಳ ಪರಿಹಾರ ಹಂಚಿಕೆ ಮುಂತಾದ ವಿಷಯಗಳಲ್ಲಿ ಹಲವು ರಾಜ್ಯಗಳು ತಮಗಾಗುತ್ತಿರುವ ಅನ್ಯಾಯ, ತಾರತಮ್ಯಗಳ ಬಗ್ಗೆ ನಿರಂತರವಾಗಿ ತಮ್ಮ ಆಕ್ಷೇಪಗಳನ್ನು ಎತ್ತುತ್ತಲೇ ಬರುತ್ತಿವೆ.

ಕರ್ನಾಟಕ ರಾಜ್ಯಕ್ಕೆ 14 ನೇ ಹಣಕಾಸು ಆಯೋಗದ ಶಿಫಾರಸ್ಸಿನ ಆಧಾರದಲ್ಲಿ 4.71 ಶೇ. ತೆರಿಗೆ ಪಾಲು ಸಿಗುತ್ತಿದ್ದುದು 15 ನೇ ಹಣಕಾಸು ಆಯೋಗದ ಶಿಫಾರಸ್ಸಿನ ನಂತರ 3.64 ಕ್ಕೆ ಕುಸಿದಿದೆ. ಇದರಿಂದ ಕಳೆದ 5 ವರ್ಷಗಳಲ್ಲಿ ರಾಜ್ಯಕ್ಕೆ ಸುಮಾರು 62 ಸಾವಿರ ಕೋಟಿಯಷ್ಟು ನಷ್ಟವಾಗಿದೆ ಎಂಬ ಅಂಕಿ-ಅಂಶಗಳನ್ನು ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಂದಿಟ್ಟಿದ್ದು ಫೆಬ್ರವರಿ 7 ರಂದು ದೆಹಲಿಯಲ್ಲಿ ಪ್ರತಿಭಟನೆ ನಡೆಸುವುದಾಗಿ ಸಹ ತಿಳಿಸಿದ್ದಾರೆ. ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯನನವರು , ತೀವ್ರ ಬರ ಪರಿಸ್ಥಿತಿಯನ್ನು ಎದುರಿಸುತ್ತಿರುವ ರಾಜ್ಯಕ್ಕೆ ಎನ್.ಡಿ.ಆರ್. ಎಫ್.ನಿಂದ 4,663 ಕೋಟಿ ರೂಪಾಯಿ ಬರ ಪರಿಹಾರ ನೀಡಲು ಮನವಿ ಮಾಡಿದ್ದರೂ ಒಂದು ರೂಪಾಯಿಯೂ ಪರಿಹಾರ ಸಿಕ್ಕಿಲ್ಲ ಎಂದು ಪ್ರತಿಭಟನೆಯನ್ನು ಸಮರ್ಥಿಸಿಕೊಂಡಿದ್ದಾರೆ.

ತೆರಿಗೆ ಹಂಚಿಕೆಗೆ 2011 ರ ಜನಗಣತಿಯ ಅಂಕಿ-ಸಂಖ್ಯೆಗಳು ಮತ್ತು ರಾಜ್ಯಗಳ ಸಾಮಾಜಿಕ ಕ್ಷೇತ್ರದ ಪ್ರಗತಿಯನ್ನು ಆಧಾರವಾಗಿ ತೆಗೆದುಕೊಳ್ಳುತ್ತಿರುವುದರಿಂದ ಕೇರಳ ರಾಜ್ಯಕ್ಕೆ ತೆರಿಗೆ ಹಂಚಿಕೆಯಲ್ಲಿ ಬಾರಿ ಅನ್ಯಾಯವಾಗಿದೆ ಎಂದು ಕೇರಳ ರಾಜ್ಯ ಸಹ ಗಂಭೀರವಾದ ಆಕ್ಷೇಪವನ್ನು ಎತ್ತಿದೆ. ಈ ನೀತಿಯಿಂದ ಕೇರಳ ರಾಜ್ಯದ ತೆರಿಗೆ ಪಾಲು ಶೇ.3.87 ರಿಂದ ಶೇ.1.9 ಕ್ಕೆ ಕುಸಿದಿದೆ ಎಂದು ಕೇರಳ ಅಂಕಿ ಅಂಶಗಳನ್ನು ಮುಂದಿಟ್ಟಿದೆ.

ಕೇರಳ ರಾಜ್ಯಕ್ಕೆ ಅನುದಾನದಲ್ಲಿ ಬಾರಿ ಕಡಿತವಾಗಿದ್ದು, ರಿಸರ್ವ್ ಬ್ಯಾಂಕ್ ವರದಿಯ ಪ್ರಕಾರ, ಕೇಂದ್ರದಿಂದ ಕೇರಳ ರಾಜ್ಯಕ್ಕೆ ಒಟ್ಟು ಅನುದಾನವು 2021-22 ರಲ್ಲಿ 30,01,712 ಕೋಟಿಗಳಿದ್ದದ್ದು, 2023-24 ರಲ್ಲಿ 15,86,603 ಕೋಟಿಗಳಿಗೆ ಕುಸಿದಿದೆ ಎಂದು ಕೇರಳವು ನಿಖರ ಅಂಕಿ-ಸಂಖ್ಯೆಗಳನ್ನು ಉಲ್ಲೇಖಿಸಿ ಆಕ್ಷೇಪವೆತ್ತಿದೆ.

ಇಲ್ಲಿ ಕೇವಲ ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಶ್ನೆಗಳು, ಅನುದಾನ ಹಂಚಿಕೆ ನೀತಿಗಳು ಮಾತ್ರವೇ ಇಲ್ಲ. ಒಕ್ಕೂಟ ಸರಕಾರವು ತನ್ನ ಸಂಕುಚಿತ ರಾಜಕೀಯ ಕಾರಣಗಳಿಗಾಗಿ ವಿರೋಧ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ತಾರತಮ್ಯ ತೋರುವುದು, ಅನುದಾನ ಕಡಿತ ಮಾಡುವುದು, ಸಮಸ್ಯೆಗಳಿಗೆ ಸ್ಪಂದಿಸದೇ ನಿರ್ದಯವಾಗಿ ವರ್ತಿಸುತ್ತಿರುವುದನ್ನು ಯಾರಾದರೂ ಗುರುತಿಸಬಹುದು. ದಕ್ಷಿಣ ಭಾರತದಲ್ಲಿ ಎಲ್ಲಿಯೂ ಬಿಜೆಪಿ ಸರಕಾರ ಇಲ್ಲ. ಇರುವ ಸರಕಾರಗಳೆಲ್ಲವೂ ಬಿಜೆಪಿಯೇತರ ಸರಕಾರಗಳು. ಈ ಹಿನ್ನೆಲೆಯಲ್ಲಿಯೂ ವಿರೋಧ ಪಕ್ಷಗಳೇ ಅಧಿಕಾರದಲ್ಲಿರುವ ದಕ್ಷಿಣದ ರಾಜ್ಯಗಳಿಗೆ ಅನುದಾನ ನೀಡಿಕೆ, ತೆರಿಗೆ ಹಂಚಿಕೆಯಲ್ಲಿ ಅನ್ಯಾಯ ಮಾಡುತ್ತಿರುವುದು ಸುಳ್ಳಲ್ಲ.

ಉತ್ತರ ಭಾರತಕ್ಕೆ ಹೋಲಿಸಿದಾಗ ನಾನಾ ಕಾರಣಗಳಿಗಾಗಿ ದಕ್ಷಿಣ ಭಾರತದ ರಾಜ್ಯಗಳು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದಿವೆ ಎಂಬುದು ವಾಸ್ತವ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಭಿವೃದ್ಧಿ ಅಥವಾ ಬೆಳವಣಿಗೆ ಎನ್ನುವುದು ಅಸಮಾನತೆಯಿಂದ ಕೂಡಿರುತ್ತದೆ ದೇಶ ಮಟ್ಟದಲ್ಲಿಯೂ ಅದು ರಾಜ್ಯಮಟ್ಟದಲ್ಲಿಯೂ ನಿಜ. ದೇಶ ಮತ್ತು ರಾಜ್ಯಗಳಲ್ಲಿಯೂ ಪ್ರಾದೇಶಿಕ ಅಸಮಾನತೆಯಿಂದ ಕೂಡಿರುತ್ತದೆ ಎಂಬುದು ಈ ವಿಷಯದ ಹಿಂದಿನ ಒಂದು ಸತ್ಯ. ಇದಲ್ಲದೇ ಹಲವು ಐತಿಹಾಸಿಕ ಹಿನ್ನೆಲೆಗಳು ಮತ್ತು ಕೈಗಾರಿಕರಣ, ಶಿಕ್ಷಣದ ವಿಸ್ತರಣೆ ಮುಂತಾದ ಹಲವು ಕಾರಣಗಳಿಗಾಗಿ ದಕ್ಷಿಣದ ರಾಜ್ಯಗಳು ಆರ್ಥಿಕ ಪ್ರಗತಿ ಮತ್ತು ಮಾನವ ಅಭಿವೃದ್ಧಿಯಲ್ಲಿ ಮುಂದಿವೆ. ಜನಸಂಖ್ಯೆ ನಿಯಂತ್ರಣದಲ್ಲಿಯೂ ಹೋಲಿಕೆಯಲ್ಲಿ ಉತ್ತರ ರಾಜ್ಯಗಳಿಗಿಂತಲೂ ಹೆಚ್ಚು ಪ್ರಗತಿ ಸಾಧಿಸಿವೆ. ಆದರೆ ಈ ಪ್ರಗತಿಯು ದಕ್ಷಿಣದ ರಾಜ್ಯಗಳಿಗೆ ತಮ್ಮ ನ್ಯಾಯಬದ್ಧ ಪಾಲನ್ನು ಪಡೆದುಕೊಳ್ಳಲು ತಡೆಯಾಗುವುದನ್ನು ಕೆಲವು ರಾಜ್ಯಗಳಿಗೆ ಅನುದಾನದಲ್ಲಿ ತೀವ್ರವಾದ ಕಡಿತವಾಗುವುದನ್ನು ಒಪ್ಪುವುದು

ಪುಟ 14 ಕ್ಕೆ



ಮರವಂತೆ: ಬಸ್ ನಿಲ್ಲಿಸಿದ ಮಹಿಳೆಯರು

ಗ್ರಾಮಾಭಿವೃದ್ಧಿ ಎಂಬ ಶಬ್ದದ ಅರ್ಥ-ವ್ಯಾಖ್ಯಾನಗಳೇನೇ ಇರಲಿ, ಊರ ತುಂಬಾ ಉದ್ದಕ್ಕೆ ಮಲಗಿರುವ ಕಾಂಕ್ರೀಟ್ ರಸ್ತೆಗಳೇ ಅಭಿವೃದ್ಧಿಯ ಪರಮೋಚ್ಚ ಉದಾಹರಣೆ ಎಂಬಂತೆ ನಮ್ಮೂರ ಹಳ್ಳಿ ಗಲ್ಲಿಗಳಲ್ಲಿ ತೆರೆದುಕೊಂಡ ಶಾಸಕರ ನಿಧಿ ಅವರುಗಳ ಆಪ್ತ ವಲಯದ ಹಿರಿ ಕಿರಿ ಕಂಟ್ರಾಕ್ಟರ್ ಗಳ ಅಭಿವೃದ್ಧಿ ಮಾಡಿದ್ದಂತೂ ಸುಳ್ಳಲ್ಲ! ಶಾಸಕರ ಸಾಧನೆಗಳು ಕೂಡಾ ಅವರು ಎಷ್ಟು ಕಿಲೋ ಮೀಟರ್ ರಸ್ತೆ ನಿರ್ಮಾಣ ಮಾಡಿಸಿದ್ದಾರೆ ಎಂಬುದರ ಮೇಲೆ ನಿರ್ಧಾರವಾಗುವುದು ಒಂದು ವ್ಯಂಗ್ಯ!

ಆದರೆ ಸಂಪರ್ಕ ಕ್ರಾಂತಿಯ ವಿಚಾರಕ್ಕೆ ಬಂದರೆ ಮನೆ ಮನೆಗಳ ಮಗುವಿನ ಕೈಗೂ ತಲುಪಿರುವ ಮೊಬೈಲು ಮತ್ತು "ನೀವು ಕರೆ ಮಾಡಿರುವ ಚಂದಾದಾರರು ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ" ಎಂಬ ಇಂಪಾದ ದನಿ ಪರಸ್ಪರ ಹೊಂದಾಣಿಕೆ ಆಗದೇ ಇರುವುದು ಪ್ರಗತಿಯ ಪಥದ ಕರಿ ಚುಕ್ಕಿಯಂತಿದೆ!

ಅಂದರೆ ಮನೆ ಬಾಗಿಲಿಗೆ ಬಂದಿರುವ ರಸ್ತೆಗಳು ಮತ್ತು ಮೊಬೈಲ್ ಫೋನುಗಳು ಅತ್ಯವಶ್ಯಕ ಸಂದರ್ಭದಲ್ಲಿ ನೆರವಿಗೆ ಬಾರದೆ ಇದ್ದರೆ ಅವೆರಡನ್ನೂ ಅಭಿವೃದ್ಧಿಯ ಕೊಡುಗೆಗಳು ಎಂದು ಉಲ್ಲೇಖಿಸುವುದು ಸಾಧ್ಯವೇ ಎಂಬುದು ಪ್ರಶ್ನೆ!

ಪ್ರಸ್ತುತ ರಾಜ್ಯ ಸರ್ಕಾರ "ಶಕ್ತಿ" ಯೋಜನೆಯನ್ನು ಜಾರಿಗೆ ತಂದಾಗ ನಾಡಿನ ಮಹಿಳೆಯರು ತೋರಿದ ಪ್ರತಿಕ್ರಿಯೆಯನ್ನು ಗಮನಿಸಿ. ಸರ್ಕಾರಿ ಬಸ್ಸುಗಳು ತುಂಬಿ ತುಳುಕಿದಂತೆ ಹಲವು ದೇವಸ್ಥಾನಗಳ ಹುಂಡಿಗಳೂ ತುಂಬಿ ತುಳುಕಿದವು ಎಂಬುದು ವಿಡಂಬನೆ ಹೌದಾದರೂ ಮಾಸಿಕ ಮೂರೂ ನಾಲ್ಕು ಸಾವಿರ ಸಂಬಳಕ್ಕೆ ದುಡಿಯಲು ನಗರಗಳಿಗೆ ತೆರಳುತ್ತಿದ್ದ ಮಹಿಳೆಯರನೇಕರು ತಮ್ಮ ದುಡಿಮೆಯ ಬಹುಪಾಲನ್ನು ಪ್ರಯಾಣ ವೆಚ್ಚಕ್ಕೆ ಬಳಸುತಿದ್ದಾಗ ಶಕ್ತಿ ಯೋಜನೆ ಅವರಿಗೆ ಆಸರೆಯಾಗಿ ಬಂದುದನ್ನು ನಿರಾಕರಿಸಲಾಗುವುದಿಲ್ಲ. ಆದರೆ ಇಂತಹ ಯೋಜನೆಗಳು ನಮ್ಮ ಹಳ್ಳಿಗಳನ್ನು ತಲುಪಲು ಸಾಧ್ಯವಾಯಿತೇ ಎಂಬುದು ಗಮನಿಸಬೇಕಾದ ಅಂಶ. ರಸ್ತೆಗಳಿವೆ ಆದರೆ ಪಯಣಿಸಲು ವಾಹನಗಳಿಲ್ಲ ಎಂಬ ವಾಸ್ತವ! ಹಳ್ಳಿಗರಿಗೆ ದುಬಾರಿಯಾಗುವ ಆಟೋ, ಕಾರುಗಳು ಇತ್ಯಾದಿಗಳ ಬದಲಿಗೆ ತಮ್ಮೂರಿಗೂ ಸರ್ಕಾರಿ ಬಸ್ಸುಗಳು ಬಂದರೆ ತಾವೂ "ಶಕ್ತಿ"ಪಡೆಯಬಹುದು ಎಂದು ಆಶಿಸಿದ ಊರುಗಳು ಹಲವು. ಹೀಗಾಗಿ "ನಮ್ಮೂರಿಗೂ ಸರ್ಕಾರಿ ಬಸ್ಸುಗಳು ಬರಲಿ" ಎಂದು ಹಲವೆಡೆ ಹಕ್ಕೊತ್ತಾಯ ಪ್ರದರ್ಶನಗಳು ನಡೆದವು.

ಉಡುಪಿ ಜಿಲ್ಲೆಯ ಮರವಂತೆಯ ಕಥೆ

ನಮ್ಮ ಪ್ರಧಾನಿಗಳು ಮಾಲ್ಡೀವ್ಸ್ ಬಗ್ಗೆ ಮಾತಾಡಿದಾಗ ಮುನ್ನೆಲೆಗೆ ಬಂದ "ಮರವಂತೆ" ಸುಪ್ರಸಿದ್ಧ ಪ್ರವಾಸೀ ತಾಣ. ಇಲ್ಲಿನ ಸುಂದರ ಕಡಲ ತೀರದಲ್ಲಿ ವಿಹರಿಸಲು ರಾಜ್ಯ-ಪರ ರಾಜ್ಯಗಳ ಪ್ರವಾಸಿಗರು ನಿತ್ಯವೂ ಬರುತ್ತಿರುತ್ತಾರೆ. ಕಡಲ ದಡದಲ್ಲಿರುವ "ಮಾರಸ್ವಾಮಿ ದೇವಸ್ಥಾನ"ಕ್ಕೆ ಬರುವ ಭಕ್ತಾದಿಗಳೂ ಅಪಾರ. ಭಕ್ತಿಯಿಂದ ದೈವ ದರ್ಶನ ಮಾಡಿ ಪವಿತ್ರ ಸ್ನಾನಕ್ಕಾಗಿ ಸಮುದ್ರಕ್ಕಿಳಿಯುತ್ತಾರೆ ಕೂಡಾ. ರಾಷ್ಟ್ರೀಯ ಹೆದ್ದಾರಿ ಇಲ್ಲೇ ಹಾದು ಹೋಗುತ್ತದೆ. ಆದರೆ ಅದರ ಮೇಲೆ ಹೋಗುವ ಸರ್ಕಾರಿ ಬಸ್ಸುಗಳಿಗೆ ಮಾತ್ರ ಇಲ್ಲಿ ನಿಲುಗಡೆ ಇಲ್ಲ!

ಅದೇನೂ ಅಷ್ಟೊಂದು ಗಂಭೀರ ವಿಷಯವಾಗಿ ಯಾರೂ ಗಮನಿಸಿಯೂ ಇರಲಿಲ್ಲ! ಆದರೆ ಯಾವಾಗ ಶಕ್ತಿ ಯೋಜನೆ ಜಾರಿಯಾಯಿತೋ ಇದೇ ಮಾರಸ್ವಾಮಿ ನಿಲ್ದಾಣದೊಂದಿಗೆ ಸಂಪರ್ಕ ಹೊಂದಿರುವ ಹಡವು, ಪಡುಕೋಣೆ, ನಾಡಾ, ಕೋಣ್ಕಿ, ಕಡ್ಕೆ ಇತ್ಯಾದಿ ಇತ್ಯಾದಿ ಗ್ರಾಮಗಳ ಮಹಿಳೆಯರು ತಮ್ಮ ಊರಿಗೂ ಸರ್ಕಾರಿ ಬಸ್ಸುಗಳು ಇದ್ದಿದ್ದರೆ ತಾವೂ ಅದರ ಪ್ರಯೋಜನ ಪಡೆಯಬಹುದಿತ್ತು ಎಂದು ಪರಿತಪಿಸಿ ಕೊಂಡರು.

ತಮ್ಮೂರಿಂದ ಹಣ ಉಳ್ಳವರು ಆಟೋದಲ್ಲೋ ಇಲ್ಲದವರು ಕಾಲ್ನಡಿಗೆಯಲ್ಲೋ ಮಾರಸ್ವಾಮಿಗೆ



ತಲುಪಿದರೆ ಅಲ್ಲಿಯೂ ಸರ್ಕಾರಿ ಬಸ್ಸು ತಮಗೆ ನಿಲುಕುತ್ತಿಲ್ಲವಲ್ಲಾ ಎಂಬ ಹತಾಶೆ ಹಠವಾಗಿ ಬದಲಾದದ್ದು ಒಂದು ಮಹತ್ತರ ಬದಲಾವಣೆಗೆ ಹಾದಿ ತೋರಿಸಿತು!

ಮಹಿಳೆಯರ ಬೆಂಬಲಕ್ಕೆ ಬಂದ ಜನವಾದಿ

ಮಹಿಳೆಯರ ಹತ್ತು ಹಲವು ಸಮಸ್ಯೆ-ಅವಶ್ಯಕತೆಗಳ ಜೊತೆಗೆ ಸ್ಪಂದಿಸುತ್ತಾ ಅವರಿಗೆ ಸಂಘಟನೆಯ ಅಗತ್ಯದ ಅರಿವು ನೀಡುವ ಜನವಾದಿ ವ ಂ ಹಿ ಳ ಾ

ಪುಟ 14 ಕ್ಕೆ

ಮಧ್ಯಂತರ ಬಜೆಟಿನಲ್ಲಿ ಮಹಿಳೆಯರಿಗೆ ನಿರಾಸೆ–ಎಐಡಿಡಬ್ಲ್ಯುಎ ‘ನಾರಿ ಶಕ್ತಿಯನ್ನು ಪೋಷಿಸಲಾಗುತ್ತಿದೆ ಎಂಬ ದಾವೆಯ ಅಣಕ’

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಕೇಂದ್ರ ಸರಕಾರದ 2024–25ರ ಮಧ್ಯಂತರ ಬಜೆಟ್ ಬಗ್ಗೆ ತೀವ್ರ ನಿರಾಶೆಯನ್ನು ವ್ಯಕ್ತಪಡಿಸಿದ್ದು, ಇದು ಚುನಾವಣಾ ಪೂರ್ವ ಪ್ರಚಾರದ ದಾಖಲೆಯಾಗಿದೆ ಎಂದು ಟೀಕಿಸಿದೆ. ‘ಮಹಿಳಾ ಸಬಲೀಕರಣ’ದಲ್ಲಿ ಯಶಸ್ಸುಗಳೆಂದು ಸಾರುವುದನ್ನು ಮುಂದುವರಿಯುತ್ತಿರುವ ಆರ್ಥಿಕ ಸಂಕಷ್ಟ ಮಹಿಳೆಯರ ವೇತನಸಹಿತ ಉದ್ಯೋಗದಲ್ಲಿ ಕುಸಿತ ಮತ್ತು ಹೆಚ್ಚುತ್ತಿರುವ ಹಸಿವಿನ ಸಂದರ್ಭದಲ್ಲಿ ನೋಡಬೇಕು, ಇವೆಲ್ಲ ಮಹಿಳೆಯರ ಬದುಕುಗಳಲ್ಲಿ ಅಪಾರ ಸಂಕಟಗಳನ್ನು ಸೃಷ್ಟಿಸಿವೆ ಎಂದು ಅದು ಹೇಳಿದೆ.

ಹಣಕಾಸು ಸಚಿವರು ವಾಸ್ತವತೆಗಿಳಿದು ದೇಶದ ಮಹಿಳೆಯರಿಗೆ ಮೋಸ ಮಾಡುವುದನ್ನು ನಿಲ್ಲಿಸಬೇಕು. ವಿಶ್ವ ಆರ್ಥಿಕ ವೇದಿಕೆ (ಡಬ್ಲ್ಯುಇಎಫ್)ನ ಲಿಂಗ ಸಮಾನತೆ ಸೂಚ್ಯಂಕದಲ್ಲಿ ಭಾರತದ ಸ್ಥಾನವು 2023 ರಲ್ಲಿ 146 ದೇಶಗಳಲ್ಲಿ 127 ಆಗಿದೆ; ಜಾಗತಿಕ ಹಸಿವು ಸೂಚ್ಯಂಕದಲ್ಲಿ ಅದರ ಸ್ಥಾನವು ನಿರಂತರವಾಗಿ ಇಳಿಯುತ್ತಿದೆ, 2022 ರಲ್ಲಿ 125 ದೇಶಗಳಲ್ಲಿ 111 ಆಗಿದೆ. ಇದಲ್ಲದೆ, ಇತ್ತೀಚಿನ 2021 ರ ಎನ್‌ಸಿಆರ್‌ಬಿ ವರದಿಯ ಪ್ರಕಾರ, 2014 ಮತ್ತು 2021 ರ ನಡುವೆ ದಿನಕೂಲಿ ಕಾರ್ಮಿಕರ ಆತ್ಮಹತ್ಯೆಗಳು ಪುರುಷ ಕಾರ್ಮಿಕರಲ್ಲಿ 170% ಮತ್ತು ಮಹಿಳೆಯರಲ್ಲಿ 137%ದಷ್ಟು ಹೆಚ್ಚಾಗಿದೆ; ಇದು ಪ್ರಸ್ತುತ ಕಾಲದಲ್ಲಿ ಮಹಿಳೆಯರು ಮತ್ತು ಅವರ ಕುಟುಂಬಗಳ ಸಂಕಷ್ಟದ ಪ್ರಮಾಣವನ್ನು ತೋರಿಸುತ್ತದೆ.

ಮಹಿಳಾ ಸಬಲೀಕರಣವು ‘ಫಲಿತಾಂಶಗಳ ಮೇಲೆ ಅವಲಂಬಿತವಾಗಿದೆಯೇ ಹೊರತು ವೆಚ್ಚಗಳ ಮೇಲೆ ಅಲ್ಲ’ ಎಂಬ ಹಣಕಾಸು ಮಂತ್ರಿಗಳ ದಾವೆಯು ಮಹಿಳಾ ಅಭಿವೃದ್ಧಿಗೆ ಬಜೆಟ್ ಹಂಚಿಕೆಗಳು ಮುಖ್ಯವಲ್ಲ ಎಂದು ಸೂಚಿಸುತ್ತದೆ. ಆದ್ದರಿಂದ ಸಾರ್ವಜನಿಕ ವೆಚ್ಚಗಳು ನಿರಂತರವಾಗಿ ಹೀನಾಯ ಮಟ್ಟದಲ್ಲೇ ಮುಂದುವರೆಯುತ್ತಿರುವುದನ್ನು ಬಿಂಬಿಸುವಂತೆ ಜನರಿಗೆ ತಕ್ಷಣದ ಪರಿಹಾರದ ಬಗ್ಗೆ ಯಾವುದೇ ಪ್ರಕಟಣೆಗಳು ಬಜೆಟ್ ಭಾಷಣದಲ್ಲಿ ಇಲ್ಲದಿರುವುದರಲ್ಲಿ ಆಶ್ಚರ್ಯವೇನಲ್ಲ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ.

ದಾವೆಗಳು ಮತ್ತು ಹಂಚಿಕೆಗಳು

ಸರಕಾರದ ಯೋಜಿತ ಒಟ್ಟು ವೆಚ್ಚವು ಜಿಡಿಪಿಯ 14.54%ಕ್ಕೆ ಇಳಿದಿದೆ, ಅದರಲ್ಲಿ ಸುಮಾರು 24% ಬಡ್ಡಿ ಪಾವತಿಗಳೇ.. ಲಿಂಗ ಬಜೆಟ್‌ನ ಅಡಿಯಲ್ಲಿರುವ ಹಂಚಿಕೆಗಳನ್ನು ಒಟ್ಟು ವೆಚ್ಚದ ಸುಮಾರು 5–6 ಶೇ. ಎಂದು ತೋರಿಸಲಾಗಿದೆ, ಇದು ಸುಮಾರಾಗಿ ಕಳೆದ ವರ್ಷದಷ್ಟಕ್ಕೇ ನಿಂತಿದೆ. ಆದರೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ಹಂಚಿಕೆಗಳು ಒಟ್ಟು ವೆಚ್ಚದ ಶೇಕಡಾ 0.5 ರಷ್ಟೇ ಇದೆ. ಈ ಹಂಚಿಕೆಗಳು ‘ನಾರಿ ಶಕ್ತಿ’ಯನ್ನು ಪೋಷಿಸಲಾಗುತ್ತಿದೆ ಎಂಬ ಸರ್ಕಾರದ ದಾವೆಯನ್ನು ಅಪಹಾಸ್ಯ ಮಾಡುತ್ತವೆ.

ಗಮನಾರ್ಹ ಸಂಖ್ಯೆಯಲ್ಲಿ ಮಹಿಳಾ ಫಲಾನುಭವಿಗಳನ್ನು ಹೊಂದಿರುವ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ(ಮನರೇಗ) ಬಗ್ಗೆ ಭಾಷಣದಲ್ಲಿ ಯಾವುದೇ ಉಲ್ಲೇಖವಿಲ್ಲ. ಇದು ಯೋಜನೆಯನ್ನು ಕೊಲ್ಲಲು ಸರ್ಕಾರದ ನಿರಂತರ ಪ್ರಯತ್ನಗಳನ್ನು ಬಿಂಬಿಸುತ್ತದೆ. 2024–25 ರ ಬಜೆಟ್ ಅಂದಾಜು 2023–24 ರ ಪರಿಷ್ಕೃತ ಅಂದಾಜಿನಂತೆಯೇ ಇದೆ, ಇದು 2022–23 ರ ವಾಸ್ತವಿಕ ವೆಚ್ಚಕ್ಕಿಂತ ಸುಮಾರು 5% ದಷ್ಟು ಇಳಿಕೆಯನ್ನು ತೋರಿಸುತ್ತದೆ. ಇದರಲ್ಲಿ ಸರ್ಕಾರ ಪಾವತಿಸದ ಕಾರ್ಮಿಕರ ಬಾಕಿ ವೇತನವೂ ಸೇರಿದೆ. 2022–2023ರಲ್ಲಿ 5.48 ಕೋಟಿಗೂ ಹೆಚ್ಚು ಮನರೇಗ ಕೆಲಸಗಾರರ ಜಾಬ್ ಕಾರ್ಡ್‌ಗಳನ್ನು ಅಳಿಸಲಾಗಿದ್ದು, ಕೆಲಸಕ್ಕೆ ಅರ್ಜಿ ಸಲ್ಲಿಸುವ 5.6 ಕೋಟಿ ಕುಟುಂಬಗಳಲ್ಲಿ 1%ಕ್ಕಿಂತ ಕಡಿಮೆ ಜನರು 100 ದಿನಗಳ ಕೆಲಸವನ್ನು ಪಡೆದುಕೊಂಡಿದ್ದಾರೆ ಎಂಬುದನ್ನು ಎತ್ತಿ ತೋರಿಸಬೇಕಾಗಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಹಾಗೆಯೇ, ಸರ್ಕಾರವು 80 ಕೋಟಿ ಜನರಿಗೆ ಉಚಿತ ಆಹಾರವನ್ನು ಒಂದು ಸಾಧನೆ ಎಂದು ಉಲ್ಲೇಖಿಸುತ್ತದೆ; ಆದರೆ ಮೋದಿ ಸರಕಾರ ಹಸಿದವರ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎಂಬುದನ್ನು ಬಜೆಟ್ ದಾಖಲೆ ತೋರಿಸುತ್ತದೆ. ಆಹಾರ ಸಬ್ಸಿಡಿಗೆ 2022–23 ರಲ್ಲಿ ಮಾಡಿದ ನಿಜವಾದ ವೆಚ್ಚಕ್ಕಿಂತ ಸುಮಾರು 25% ಕಡಿಮೆ ಮತ್ತು 2023–24 ರ ಪರಿಷ್ಕೃತ ಅಂದಾಜಿಗಿಂತ 5% ಕಡಿಮೆಯಾಗಿದೆ. ಅಪೌಷ್ಟಿಕತೆ ನಿವಾರಣೆಗೆ ನಿರ್ಣಾಯಕವಾಗಿರುವ ಮಿಳನ್ ಅಂಗನವಾಡಿ ಸಕ್ಷಮ್ ಮತ್ತು ಪೋಷಣ್ ಕೆಲವು ವರ್ಷಗಳಿಂದ ಕಡಿತವನ್ನು ಎದುರಿಸುತ್ತಿದೆ. ಈ ಬಜೆಟ್‌ನಲ್ಲಿ, 2023–2024ರ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ ಸರ್ಕಾರವು ಹಂಚಿಕೆಯನ್ನು ಶೇಕಡಾ 1.5 ರಷ್ಟು ಕಡಿತ ಮಾಡಿದೆ. ಸರ್ಕಾರವು ಈ ವಲಯವನ್ನು ಖಾಸಗಿ ಕಂಪನಿಗಳಿಗೆ ಮತ್ತು ಕಾರ್ಪೊರೇಟ್ ಎನ್‌ಜಿಒಗಳಿಗೆ ತೆರೆಯುತ್ತಿದೆ ಎಂಬುದು ಸ್ಪಷ್ಟವಾಗಿದೆ, ಏಕೆಂದರೆ ಈ ಬಾಬ್ತಿನಲ್ಲಿ ಖರ್ಚು ಕಡಿಮೆಯಾಗುತ್ತ ಬರುತ್ತಿದೆ.

70% ಫಲಾನುಭವಿಗಳು ಮಹಿಳೆಯರೇ ಆಗಿರುವ ಪ್ರಧಾನಮಂತ್ರಿ ಆವಾಸ್ ಯೋಜನೆಯಿಂದ ಮಹಿಳೆಯರಿಗೆ ಬಹಳ ಲಾಭವಾಗುತ್ತಿದೆ ಎಂಬುದು ಈ ಸರಕಾರದ ಮತ್ತೊಂದು ದಾವೆ. ಇದರ ಪರಿಷ್ಕೃತ ಅಂದಾಜು 2022–23ರ ವಾಸ್ತವಿಕ ವೆಚ್ಚಕ್ಕಿಂತ ಶೇಕಡ 26.5ರಷ್ಟು ಕಡಿಮೆಯಾಗಿದೆ ಎಂಬ ಅಂಶ ಇದರ ನಿಜಚಿತ್ರವನ್ನು ಬಯಲು ಮಾಡುತ್ತದೆ ಎಂದು ಎಐಡಿಡಬ್ಲ್ಯುಎ ಹೇಳಿದೆ. 53 ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿ ಹೊಂದಿದ್ದರೂ 13 ಲಕ್ಷ ಮಾತ್ರ ಪೂರ್ಣಗೊಂಡಿದೆ ಎಂದು ಸರ್ಕಾರವೇ ಅನುಷ್ಠಾನ ದಾಖಲೆಯಲ್ಲಿ ಹೇಳುತ್ತದೆ. ಇದಲ್ಲದೆ, ಸರ್ಕಾರವು ಎನ್‌ಆರ್‌ಎಲ್‌ಎಂ ಮೂಲಕ ‘ಲಖ್‌ಪತಿ ದೀದಿ’ ಬಗ್ಗೆ ದೊಡ್ಡ–ದೊಡ್ಡ ಮಾತುಗಳನ್ನಾಡಿದೆ, ಆದರೆ ಅದಕ್ಕೆ ಹಂಚಿಕೆಯು ತೀರಾ ಕಳಪೆಯಾಗಿದೆ, ಅದು ಯಾವುದೇ ಗಮನಾರ್ಹ ಹೆಚ್ಚಳವನ್ನು ಕಂಡಿಲ್ಲ. ವಾಸ್ತವವಾಗಿ, ಪ್ರಧಾನ ಮಂತ್ರಿಯವರ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಹೇಳಿರುವಂತೆ 1261 ಕೋಟಿ ರೂಪಾಯಿಗಳ ಹಂಚಿಕೆಯೊಂದಿಗೆ ಕೃಷಿಗಾಗಿ ಡ್ರೋನ್‌ಗಳ ಉತ್ಪಾದನೆ ಮತ್ತು ಕಾರ್ಯಾಚರಣೆಗೆ ಮಹಿಳೆಯರನ್ನು ಪ್ರಲೋಭಿಸಲು ಈ ಯೋಜನೆಯನ್ನು ಬಳಸಲಾಗುತ್ತಿದೆ. ಎನ್‌ಆರ್‌ಎಲ್‌ಎಂ ನ್ನು ಗ್ರಾಮೀಣ ಮಹಿಳೆಯರು ಮತ್ತು ಕೃಷಿ–ಉದ್ಯಮಗಳ((ನಾಮೊ ಡ್ರೋನ್ ದೀದಿ ಸ್ಕೀಮಿನಂತಹದ್ದು) ನಡುವೆ ಸಂಪರ್ಕವನ್ನು ಸೃಷ್ಟಿಸಲು ಸಾಧನವಾಗಿ ಬಳಸಲಾಗುತ್ತಿದೆ ಎಂದು ಇದು ತೋರಿಸುತ್ತದೆ ಎಂದಿದೆ ಎಐಡಿಡಬ್ಲ್ಯುಎ.

ಸಬ್ಕಾ ಸಾಥ್ ಕೇವಲ ಭ್ರಮೆ

ಕಳೆದ ಬಜೆಟ್‌ನಲ್ಲಿ ಘೋಷಿಸಿದ ಹೆಣ್ಣು ಮಕ್ಕಳ ಉಳಿತಾಯ ಯೋಜನೆ ಪ್ರಾರಂಭವಾಗಿಯೇ ಇಲ್ಲ. ಮತ್ತು ಜನ್‌ಧನ್ ಯೋಜನೆಯಲ್ಲಿನ ವಂಚನೆಗಳನ್ನು ಸಿಎಜಿ ಬಹಿರಂಗಪಡಿಸಿದೆ. ಹಾಗಾಗಿ, ಇವು ‘ಮಹಿಳಾ ಸಬಲೀಕರಣ’ದ ಯೋಜನೆಗಳು ಎಂಬ ಸರಕಾರದ ಪ್ರಚಾರ ಅಸಮರ್ಥನೀಯವಾಗಿದೆ.

ಸಾಮಾಜಿಕ ವಲಯದ ವೆಚ್ಚಗಳು ಸ್ಥಗಿತಸ್ಥಿತಿಯಲ್ಲಿವೆ ಅಥವ ಇಳಿಮುಖ ಪ್ರವೃತ್ತಿಯನ್ನು ಕಂಡಿವೆ. ಡಿಸೆಂಬರ್ 2023 ರ ವೇಳೆಗೆ ನಿರ್ಭಯಾ ನಿಧಿಯ 70% ದಷ್ಟು ಖರ್ಚು ಮಾಡಲಾಗಿಲ್ಲ ಮತ್ತು ಮಿಷನ್ ಶಕ್ತಿ ಯೋಜನೆಗಳ ವೆಚ್ಚದ ಮಟ್ಟವು ಹೆಚ್ಚು ಕಡಿಮೆ ಸ್ಥಗಿತಗೊಂಡಿದೆ. ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಕಾಯಮಾತಿ ಮತ್ತು ವೇತನ ಹೆಚ್ಚಳದ ಬೇಡಿಕೆಗಳನ್ನು ಕಡೆಗಣಿಸಲಾಗಿದೆ; ಬದಲಿಗೆ ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ಅವುಗಳನ್ನು ಲಿಂಕ್ ಮಾಡುವ ಭರವಸೆ ನೀಡಲಾಗಿದೆಯಷ್ಟೇ. ದುರ್ಬಲ ಗುಂಪುಗಳ ಹುಡುಗಿಯರು ಮತ್ತು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ವೆಚ್ಚದಲ್ಲಿ ಯಾವುದೇ ಗಮನಾರ್ಹ ಬದಲಾವಣೆಗಳಿಲ್ಲ. ಅಲ್ಪಸಂಖ್ಯಾತರಿಗೆ ಹಂಚಿಕೆಯಲ್ಲಿ ಇಳಿಮುಖ ಪ್ರವೃತ್ತಿ ಮುಂದುವರಿದಿದೆ ಮತ್ತು ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಗೆ ಹಂಚಿಕೆ ಸ್ಥಗಿತವಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಮತ್ತು ಇತರ ದುರ್ಬಲ ಗುಂಪುಗಳ ಅಭಿವೃದ್ಧಿಯ ಸಂದರ್ಭದಲ್ಲಿ, 2023–24ರ ಪರಿಷ್ಕೃತ ಅಂದಾಜುಗಳು ಬಜೆಟ್ ಅಂದಾಜುಗಳ ಶೇಕಡಾ 30–40 ರಷ್ಟಿದ್ದು, ಕಾರ್ಯಕ್ರಮಗಳ ಅನುಷ್ಠಾನವು ನಡೆಯುತ್ತಿಲ್ಲ ಎಂದು ಸೂಚಿಸುತ್ತದೆ. ‘ಸಬ್ಕಾ ಸಾಥ್, ಸಬ್ಕಾ ವಿಕಾಸ್ ಮತ್ತು ಸಬ್ಕಾ ವಿಶ್ವಾಸ್’ ಎಂಬ ಅದರ ಪ್ರಚಾರವು ಕೇವಲ ಭ್ರಮೆ ಎಂದು ಇದು ತೋರಿಸುತ್ತದೆ.

ಅಂತಿಮವಾಗಿ, ‘ನಾರಿ ಶಕ್ತಿಗೆ’ ತನ್ನ ಬದ್ಧತೆಯ ಪುರಾವೆಯಾಗಿ ತ್ರಿವಳಿ ತಲಾಖ್ ಮತ್ತು ಮಹಿಳಾ ಕೋಟಾ ಮಸೂದೆಯನ್ನು ಅಂಗೀಕರಿಸಲಾಗಿದೆ ಎಂದು ಸರ್ಕಾರ ಹೇಳಿಕೊಂಡಿದೆ. ಈ ಹಿಂದೆ ಈ ಹಕ್ಕುಗಳ ಬಗ್ಗೆ ವ್ಯಾಪಕ ಟೀಕೆಗಳನ್ನು ಸಂಘಟನೆ ಮಾಡಿದೆ ಮತ್ತು ಈ ಮಹಿಳಾ ವಿರೋಧಿ ಸರ್ಕಾರವನ್ನು ಬಯಲಿಗೆಳೆಯುವುದನ್ನು ಮುಂದುವರಿಸುತ್ತೇವೆ ಎಂದಿರುವ ಎಐಡಿಡಬ್ಲ್ಯುಎ 2024 ರ ಸಾರ್ವತ್ರಿಕ ಚುನಾವಣೆಯಲ್ಲಿ ಈ ನಿರಂಕುಶ ಮತ್ತು ಮನುವಾದಿ ಸರ್ಕಾರವನ್ನು ಸೋಲಿಸಲು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಮತ್ತು ಮಹಿಳೆಯರು ಒಂದಾಗಬೇಕೆಂದು ಕರೆ ನೀಡಿದೆ.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್, ಫೇಸ್‌ಬುಕ್



ಜಿಎಸ್‌ಟಿ ಕಲೆಕ್ಷನ್ 2 ಪಟ್ಟು
ಕಾರ್ಪೊರೇಟ್ ತೆರಿಗೆ 30% ದಿಂದ 22%ಕ್ಕೆ

.. ..ಮಧ್ಯಮ ವರ್ಗಧವರಿಗೆ ‘ಮಥುರಾ ಕಾಶಿ ಬಾಕೀ ಹೈ’ ಹೇಳಿ, ‘ಜೈಶ್ರೀರಾಮ್’ನ ಘೋಷಣೆ ಹಾಕಿ ಮುಂದೆ ಹೊರಡಿ... ಅವರಿಗೆ ಇದಕ್ಕಿಂತ ಹೆಚ್ಚೇನು ಬೇಕಾಗಿದೆ!

ವ್ಯಂಗ್ಯಚಿತ್ರ ಕೃಪೆ: ಶೇಖರ್ ಗುರೇರ, ಎಕ್ಸ್

ಸುಳ್ಳಿನ ಕಂತೆ ಮತ್ತು... ಪುಟ 2 ರಿಂದ

ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಸಾಧನೆಗಳನ್ನು ಹಿಂದಿನ ಸರಕಾರಗಳೊಂದಿಗೆ ಹೋಲಿಸುವ ಹತಾಶ ಪ್ರಯತ್ನ ಮಾಡಿದ್ದಾರೆ. ಆದರೆ ನಿಜಸಂಗತಿಯೆಂದರೆ, ಇದು ದೇಶದಲ್ಲೇ ಅತ್ಯಂತ ಹೆಚ್ಚಿನ ಮಟ್ಟದಲ್ಲಿ, ಅಂದರೆ 4.09ಲಕ್ಷ ಕೋಟಿ ರೂ.ಗಳಷ್ಟು ಬೃಹತ್ ಪ್ರಮಾಣದಲ್ಲಿ ಖಾಸಗೀಕರಣವನ್ನು ಮಾಡಿರುವ ಆಳ್ವಿಕೆ. ಇದು ಹಣಕಾಸು ವರ್ಷ 24ರಲ್ಲಿ ರೂ.30000 ಕೋಟಿಗಳ ಗುರಿಗೆ ಎದುರಾಗಿ ಹಣಕಾಸು ವರ್ಷ 25 ರಲ್ಲಿ ರೂ.50000 ಕೋಟಿ ಮೌಲ್ಯದ ಸಾರ್ವಜನಿಕ ವಲಯದ ಷೇರುಗಳನ್ನು ಹಿಂತೆಗೆದುಕೊಳ್ಳುವ ಗುರಿಯನ್ನು ಹೊಂದಿದೆ. ಮಧ್ಯಂತರ ಬಜೆಟ್ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಖಾಸಗಿಯವರಿಗೆ ಮತ್ತಷ್ಟು ತೆರೆದು ಕೊಟ್ಟಿದೆ ಮತ್ತು ಅದಕ್ಕೆ ಅನುವು ಮಾಡಿಕೊಡಲು ರೂ.1 ಲಕ್ಷ ಕೋಟಿಗಳ ನಿಧಿಯನ್ನು ಸ್ಥಾಪಿಸಲಾಗಿದೆ ಎಂದಿದೆ, ನಾವೀನ್ಯತೆಗಳ ಸೋಗಿನಲ್ಲಿ ಅದನ್ನು ಸಾಧಿಸಲು ಖಾಸಗಿ ವಲಯಕ್ಕೆ 50 ವರ್ಷಗಳ ಬಡ್ಡಿ ರಹಿತ ಸಾಲಗಳನ್ನು ಒದಗಿಸಲಾಗುತ್ತದೆ ಎಂದಿದೆ.

ಕಾರ್ಪೊರೇಟ್–ಪರ, ಶ್ರೀಮಂತ ಪರವಾದ ‘ವಿಕಸಿತ್ ಭಾರತ್’ನ ನೀಲನಕ್ಷೆ

ಬಜೆಟ್ ಸಲ್ಲಿಸುವಾಗ ದೊಡ್ಡ–ದೊಡ್ಡ ಮಾತುಗಳನ್ನಾಡುತ್ತ ವಿವಿಧ ಕಲ್ಯಾಣ ಕ್ರಮಗಳಿಗೆ ಹಂಚಿಕೆ ನೀಡಿದರೂ, 2019–20 ರಿಂದ 2022–23 ರ ನಡುವೆ ಕೃಷಿಗೆ, ರೈತರ ಕಲ್ಯಾಣಕ್ಕೆ ಎಂದು ಮೀಸಲಿಟ್ಟ 1 ಲಕ್ಷ ಕೋಟಿ ರೂಪಾಯಿ ಖರ್ಚು ಮಾಡದೆ ಹಿಂದಕ್ಕೆ ಕೊಟ್ಟಿರುವುದು ಬಿಜೆಪಿ ಸರ್ಕಾರದ ಡಂಗುರಗಳ ವಂಚಕ ಸ್ವರೂಪವನ್ನು ಮತ್ತು ಅದು ಜನರಿಗೆ ಮಾಡುವ ಮೋಸವನ್ನು ಬಯಲಿಗೆ ತಂದಿದೆ ಎಂದು ಸಿಐಟಿಯು ಹೇಳಿದೆ.

ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಒಕ್ಕೂಟದ ಪರಿಕಲ್ಪನೆಯನ್ನೇ ಕಳಚಿ ಹಾಕಲು ಸರ್ವಪ್ರಯತ್ನ ಮಾಡುತ್ತಿರುವಾಗ, ರಾಜ್ಯಗಳೊಂದಿಗೆ ಸಮಾಲೋಚಿಸಿ ಮುಂದಿನ ಪೀಳಿಗೆಯ ಸುಧಾರಣೆಗಳಿಗೆ ನೀಲನಕ್ಷೆಯನ್ನು ರೂಪಿಸುವುದಾಗಿ ಬಜೆಟ್‌ನಲ್ಲಿ ಹೇಳಿರುವುದು ಒಂದು ಅಣಕವೇ ಸರಿ. ಈ ಸರ್ಕಾರದ ಕಳೆದ 10 ವರ್ಷಗಳ ಆಳ್ವಿಕೆಯ ದಾಖಲೆಯು ಅದರ ಕಾರ್ಮಿಕ ವಿರೋಧಿ, ರೈತ ವಿರೋಧಿ, ಜನವಿರೋಧಿ ಮತ್ತು ರಾಷ್ಟ್ರವಿರೋಧಿ ಸ್ವರೂಪವನ್ನು ಸ್ಪಷ್ಟವಾಗಿ ಪ್ರದರ್ಶಿಸಿರುವಾಗ, ಅದಕ್ಕನುಗುಣವಾಗಿಯೇ, ಈ ಮಧ್ಯಂತರ ಬಜೆಟ್ ಕಾರ್ಮಿಕರು, ರೈತರು ಮತ್ತು ಜನರಿಗೆ ಯಾವುದೇ ಸಕಾರಾತ್ಮಕ ಹೆಜ್ಜೆಗಳ ಬಗ್ಗೆ ಏನೂ ಹೇಳಿಲ್ಲ, ಬದಲಿಗೆ, ಜೂನ್ 2024ರಲ್ಲಿ ಮತ್ತೆ ಅಧಿಕಾರಕ್ಕೆ ಬಂದು ತನ್ನ ‘ವಿಕಸಿತ್ ಭಾರತ್’ನ ನೀಲನಕ್ಷೆಯನ್ನು ಕೊಟ್ಟಿರುವುದಾಗಿ ಹೇಳಿಕೊಂಡಿದೆ. ಅದರ ನವ ಉದಾರವಾದಿ ನೀತಿಗಳಿಗೆ ಅನುಗುಣವಾಗಿ ಅದು 2047 ರ ವೇಳೆಗೆ ನಿರ್ಮಿಸ ಬಯಸುತ್ತಿರುವುದು ಕಾರ್ಪೊರೇಟ್–ಪರ ಮತ್ತು ಶ್ರೀಮಂತ ಪರವಾದ ‘ವಿಕಸಿತ್ ಭಾರತ’ವನ್ನೇ.

ಈ ಹಿನ್ನೆಲೆಯಲ್ಲಿ ಸಿಐಟಿಯು ಮತ್ತು ಅದಕ್ಕೆ ಸಂಯೋಜಿತವಾದ ಸಂಘಟನೆಗಳು ಮತ್ತು ಅದರ ಸದಸ್ಯರು ಫೆಬ್ರವರಿ 16ರ ದೇಶವ್ಯಾಪಿ ಕೈಗಾರಿಕಾ/ವಲಯವಾರು ಮುಷ್ಕರ ಮತ್ತು ಗ್ರಾಮೀಣ ಬಂದ್ ಸೇರಿದಂತೆ ಜನಸಮೂಹಗಳನ್ನು ವ್ಯಾಪಕವಾಗಿ ಅಣಿನೆರೆಸಬೇಕು ಎಂಬ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕೇಂದ್ರೀಯ ಕಾರ್ಮಿಕ ಸಂಘಗಳ ಜಂಟಿ ವೇದಿಕೆಯ ಕರೆಯನ್ನು ಯಶಸ್ವಿಗೊಳಿಸಬೇಕೆಂದು ಸಿಐಟಿಯು ಕರೆ ನೀಡಿದೆ.

ಕೋಮುವಾದಿ ಧ್ರುವೀಕರಣದೊಂದಿಗೆ ಇ.ಡಿ. + ಧನಬಲದ ಭ್ರಷ್ಟ ಕಾಕ್‌ಟೇಲನ್ನು ಮುಖಾಮುಖಿಯಾಗಿ ಎದುರಿಸಬೇಕಾಗಿದೆ–ಯೆಚುರಿ

2024ರಲ್ಲಿ ಮತ್ತೆ ತಮ್ಮದೇ ಸರಕಾರ ಎಂದು ಮೋದಿ ಮತ್ತು ಬಿಜೆಪಿ ಪ್ರಚಾರ ನಡೆಸುತ್ತಿದ್ದರೂ, ಆ ಬಗ್ಗೆ ಅವರಿಗೇ ಖಾತ್ರಿಯಿಲ್ಲ. ಆದ್ದರಿಂದಲೇ ಹಿಂದುತ್ವ ಮತಗಳನ್ನು ಕ್ರೋಢೀಕರಿಸಲು ಕೋಮುವಾದಿ ಧ್ರುವೀಕರಣದ ಶತಪ್ರಯತ್ನಗಳೊಂದಿಗೆ ಕಳೆದ ಹತ್ತು ವರ್ಷಗಳಲ್ಲಿ ಬೆಳೆಸಿ ಪೇಟೆಂಟ್ ಮಾಡಿಕೊಂಡಿರುವ ಇ.ಡಿ. ಮತ್ತು ಧನಬಲದ ಭ್ರಷ್ಟ ಮಾಧಕ ಮಿಶ್ರಣವನ್ನು ಭಂಡತನದಿಂದ ಬಳಸುತ್ತಿದ್ದಾರೆ. ಮುಖ್ಯವಾಗಿ ಪ್ರತಿಪಕ್ಷಗಳ ಮುಖಂಡರ ಮೇಲೆ, ಪ್ರತಿಪಕ್ಷಗಳ ಸರಕಾರಗಳ ಮೇಲೆ ಮತ್ತು ಪ್ರಾದೇಶಿಕ ಪಕ್ಷಗಳನ್ನು ಒಡೆಯುವ ಪ್ರಯತ್ನ ನಡೆಯುತ್ತದೆ. ಇದನ್ನು ಮುಖಾಮುಖಿಯಾಗಿ ಎದುರಿಸಬೇಕಾಗಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಅವರು ತಿರುವನಂತಪುರದಲ್ಲಿ ಪಕ್ಷದ ಕೇಂದ್ರ ಸಮಿತಿಯ ಮೂರು ದಿನಗಳ ಸಭೆಯ ನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಸ್ಪರ್ಧಾತ್ಮಕ ಮೃದು ಹಿಂದುತ್ವ ಮತ್ತು ತೆಳು ಕೇಸರಿ ನಿಲುವುಗಳನ್ನು ಆಶ್ರಯಿಸಿದರೆ ಇದು ಸಾಧ್ಯವಿಲ್ಲ, ಅದು ಜನಗಳ ಒಂದು ಗಮನಾರ್ಹ ವಿಭಾಗದ ಮೇಲೆ ಹಿಂದುತ್ವದ ಹಿಡಿತವನ್ನು ಮತ್ತಷ್ಟು ಬಲಪಡಿಸಲು ಕಾರಣವಾಗುತ್ತದೆ, ಆರೆಸ್ಸೆಸ್/ಬಿಜೆಪಿ ಮತ್ತು ಇತರ ಎಲ್ಲಾ ಹಿಂದುತ್ವ ಸಂಘಟನೆಗಳಿಗೆ ಸಮಾಜವನ್ನು ಮತ್ತಷ್ಟು ಕೋಮುಗ್ರಸ್ತಗೊಳಿಸಲು ಮತ್ತು ಅಲ್ಪಸಂಖ್ಯಾತರನ್ನು ಗುರಿಯಾಗಿಸಲು ಅವಕಾಶವನ್ನು ಒದಗಿಸುತ್ತದೆ. ಇದು ಇತ್ತೀಚೆಗೆ ಮಧ್ಯಪ್ರದೇಶ ಮತ್ತು ಛತ್ತಿಸ್‌ಗಡದ ವಿಧಾನಸಭಾ ಚುನಾವಣೆಗಳಲ್ಲಿಯೂ ಕಾಣ ಬಂತು. 2024ರ ಚುನಾವಣೆಗಳಲ್ಲಿ ಗೆಲ್ಲುವ ಮತ್ತು ತಮ್ಮ ಸರಕಾರವನ್ನು ಉಳಿಸಿಕೊಳ್ಳುವ ಬಗ್ಗೆ ಅವರಿಗೇ ಖಾತ್ರಿಯಿಲ್ಲವಾದ್ದರಿಂದ ಅವರು ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ಸರ್ವಪ್ರಯತ್ನಗಳನ್ನೂ ಮಾಡುತ್ತಾರೆ, ಈ ಎಲ್ಲ ಕುತಂತ್ರಗಳನ್ನು ನೇರವಾಗಿ ಎದುರಿಸಲೇ ಬೇಕಾಗಿದೆ. ಇದಕ್ಕಾಗಿ 'ಇಂಡಿಯ' ಬಣವನ್ನು ಬಲಪಡಿಸಬೇಕು, ಸಿಪಿಐ(ಎಂ) ಇದರಲ್ಲಿ ತನ್ನ ಪಾತ್ರವನ್ನು ವಹಿಸುತ್ತದೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಿಪಿಐ(ಎಂ) ಕೇರಳ ರಾಜ್ಯ ಕಾರ್ಯದರ್ಶಿ ಮತ್ತು ಪೊಲಿಟ್ ಬ್ಯುರೊ ಸದಸ್ಯ ಎಂ.ವಿ.ಗೋವಿಂದನ್ ಮಾಸ್ಟರ್ ಮತ್ತು ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯರಾದ ಎಂ.ಎ.ಬೇಬಿ ಇದ್ದರು.



ಜನವರಿ 28 ರಿಂದ 30 ರ ವರೆಗೆ ತಿರುವನಂತಪುರದಲ್ಲಿ ನಡೆದ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆಯ ನಂತರ ನೀಡಿರುವ ಪತ್ರಿಕಾ ಹೇಳಿಕೆಯ ಪೂರ್ಣಪಾಟವನ್ನು ಈ ಮುಂದೆ ಕೊಡಲಾಗಿದೆ:

ಅಯೋಧ್ಯೆ: ದೇವಾಲಯ ಉದ್ಘಾಟನೆ

ಜನವರಿ 22, 2024 ರಂದು ಅಯೋಧ್ಯೆಯಲ್ಲಿ ನಡೆದ ದೇವಾಲಯದ ಉದ್ಘಾಟನೆಯು ಮತಧರ್ಮವನ್ನು ಪ್ರಭುತ್ವ, ಆಡಳಿತ ಮತ್ತು ರಾಜಕೀಯದಿಂದ ಪ್ರತ್ಯೇಕಿಸುವುದು ಎಂದು ನಿರೂಪಿಸುವ ಜಾತ್ಯತೀತತೆಯ ಸಾವಿನ ಗಂಟೆ ಬಾರಿಸಿದೆ, ಇಡೀ ಕಾರ್ಯಕ್ರಮವು ಪ್ರಧಾನ ಮಂತ್ರಿ, ಉತ್ತರಪ್ರದೇಶ ಮುಖ್ಯಮಂತ್ರಿ, ರಾಜ್ಯಪಾಲರು ಮತ್ತು ಇಡೀ ಪ್ರಭುತ್ವಯಂತ್ರವನ್ನು ನೇರವಾಗಿ ಒಳಗೊಂಡ ಪ್ರಭುತ್ವ–ಪ್ರಾಯೋಜಿತ ಕಾರ್ಯಕ್ರಮವಾಗಿತ್ತು. ಭಾರತದ ರಾಷ್ಟ್ರಪತಿಗಳು ಮತ್ತು ಉಪರಾಷ್ಟ್ರಪತಿಗಳು ಪ್ರಧಾನಿಯವರಿಗೆ 'ಪ್ರತಿಜ್ಞೆಯನ್ನು ಈಡೇರಿಸಿರುವುದಕ್ಕೆ' 'ಅಭಿನಂದನಾ ಸಂದೇಶಗಳನ್ನು ಕಳುಹಿಸಿದ್ದಾರೆ, "ತನ್ನ ನಾಗರಿಕತೆಯ ಪಥದಲ್ಲಿ ಅದೃಷ್ಟದೊಂದಿಗೆ ಭಾರತದ ಸಮಾಗಮ" ಎಂದೆಲ್ಲ ಪ್ರಶಂಸಿಸಿದ್ದಾರೆ. ಈ ಇಡೀ ಸಮಾರಂಭ ಸಂವಿಧಾನದ ಅಡಿಯಲ್ಲಿ ಪ್ರಭುತ್ವಕ್ಕೆ ಯಾವುದೇ ಮತ–ಧರ್ಮದೊಂದಿಗೆ ಸಂಯೋಜಿತವಾಗಿರಬಾರದು ಅಥವಾ ಆದ್ಯತೆಯನ್ನು ಹೊಂದಿರಬಾರದು ಎಂದು ಸುಪ್ರಿಂ ಕೋರ್ಟ್ ಪುನರುಚ್ಚರಿಸಿರುವ ಮೂಲಭೂತ ತತ್ವದ ನೇರ ಉಲ್ಲಂಘನೆಯಾಗಿದೆ.

ಇದು ನೇರವಾಗಿ ರಾಜಕೀಯ ಮತ್ತು ಚುನಾವಣಾ ಲಾಭಗಳನ್ನು ಗಳಿಸುವ ಗುರಿಯಿಟ್ಟುಕೊಂಡಿರುವ ಒಂದು ಸಮಾರಂಭವಾಗಿತ್ತು. ಇದಕ್ಕೆ ಪೂರ್ವಭಾವಿಯಾಗಿ ಆರ್‌ಎಸ್‌ಎಸ್/ಬಿಜೆಪಿ ರಾಷ್ಟ್ರವ್ಯಾಪಿ ಬೃಹತ್ ಅಭಿಯಾನವನ್ನೇ ಹಮ್ಮಿಕೊಂಡಿತ್ತು.. ವಿವಿಧ ಸ್ಥಳಗಳಲ್ಲಿ ದೈತ್ಯ ಪರದೆಗಳ ಮೇಲೆ ನೇರ ಪ್ರಸಾರದ ಸಾರ್ವಜನಿಕ ಪ್ರದರ್ಶನಗಳನ್ನು ಆಯೋಜಿಸಲಾಯಿತು. ಶಿಕ್ಷಣ ಸಂಸ್ಥೆಗಳನ್ನು ಆ ದಿನದ ಮಟ್ಟಿಗೆ ಮುಚ್ಚಿಸಲಾಯಿತು. ನೌಕರರು ಭಾಗವಹಿಸಲು ಅನುಕೂಲವಾಗುವಂತೆ ಎಲ್ಲಾ ಕೇಂದ್ರ ಸರ್ಕಾರಿ ಕಚೇರಿಗಳನ್ನು ಮಧ್ಯಾಹ್ನ 2.30 ರವರೆಗೆ ಮುಚ್ಚಲಾಯಿತು. ಬ್ಯಾಂಕುಗಳು ಸೇರಿದಂತೆ ಅನೇಕ ಸಾರ್ವಜನಿಕ ವಲಯದ ಸಂಸ್ಥೆಗಳು ಮತ್ತು ಸಂಸ್ಥೆಗಳನನ್ನೂ ಅದೇ ರೀತಿ ಮುಚ್ಚಲಾಯಿತು. ಪ್ರತಿ ರಾಜ್ಯ ಮತ್ತು ಸಂಸದೀಯ ಕ್ಷೇತ್ರದಿಂದ ದೇವಸ್ಥಾನಕ್ಕೆ ಭೇಟಿ ನೀಡಲು ಜನರನ್ನು ಸಜ್ಜುಗೊಳಿಸಲು ಯೋಜಿಸಲಾಗಿದೆ. ಇದು ಮಾರ್ಚ್ 2024 ರವರೆಗೆ ಅಂದರೆ ಚುನಾವಣೆಯ ಮುನ್ನಾದಿನದ ವರೆಗೆ ಇರುತ್ತದೆ.

ಅಯೋಧ್ಯೆಯನ್ನು ಹೊರತುಪಡಿಸಿ ಎಲ್ಲಾ ಧಾರ್ಮಿಕ ಸ್ಥಳಗಳ ಯಥಾಸ್ಥಿತಿಯು ಆಗಸ್ಟ್ 15, 1947 ರಂದು ಇದ್ದಂತೆಯೇ ಇರುತ್ತದೆ ಎಂದು ಆದೇಶಿಸುವ 1991 ರ ಪೂಜಾ ಸ್ಥಳಗಳ ಕಾಯಿದೆಯನ್ನು ಈಗ ಪೆಟ್ಟಿಗೆಯೊಳಕ್ಕೆ ಹಾಕಿ ಬೀಗ ಜಡಿಯಲಾಗುತ್ತದೆ ಎಂಬ ಸಂಕೇತವನ್ನು ಇದು ನೀಡಿದೆ. ಕಾಶಿ ಮತ್ತು ಮಥುರಾದಲ್ಲಿನ ವಿವಾದಗಳು ಮತ್ತೊಮ್ಮೆ ನ್ಯಾಯಾಂಗದ ಶಾಮೀಲಿನಿಂದ ತಲೆಯೆತ್ತಿವೆ. ಅಯೋಧ್ಯಾ ತೀರ್ಪಿಗೆ ಸುಪ್ರೀಂ ಕೋರ್ಟಿಗೆಗೆ ಮೋದಿ ಧನ್ಯವಾದ ಸುರಿಸಿದ್ದಾರೆ.



ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ಆಯ್ಕೆಯಾಗಿರುವ ಧಾರ್ಮಿಕ ನಂಬಿಕೆಗಳನ್ನು ಗೌರವಿಸುವುದು ಸಿಪಿಐ(ಎಂ) ನೀತಿಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ನಂಬಿಕೆಯನ್ನು ಅನುಸರಿಸುವ ಹಕ್ಕನ್ನು ಪಕ್ಷವು ದೃಢವಾಗಿ ಎತ್ತಿಹಿಡಿದಿದೆ. ಆದರೆ ಅದೇ ಸಮಯದಲ್ಲಿ ರಾಜಕೀಯ ಲಾಭಕ್ಕಾಗಿ ಜನರ ಧಾರ್ಮಿಕ ನಂಬಿಕೆಯನ್ನು ದುರುಪಯೋಗಪಡಿಸಿಕೊಳ್ಳುವ ಮತ್ತು ಅದನ್ನು ರಾಜಕೀಯ ಲಾಭದ ಸಾಧನವಾಗಿ ಪರಿವರ್ತಿಸುವ ಪ್ರಯತ್ನಗಳನ್ನು ಮತ್ತು ಮತಧರ್ಮವನ್ನು ಪ್ರಭುತ್ವದೊಂದಿಗೆದೊಂದಿಗೆ ವಿಲೀನಗೊಳಿಸುವುದನ್ನು ಅದು ಸತತವಾಗಿ ವಿರೋಧಿಸಿದೆ.

ವಿಧಾನಸಭೆ ಚುನಾವಣೆಗಳು

ವಿಧಾನಸಭೆ ಚುನಾವಣೆಯ ಕಳೆದ ಎರಡು ಸುತ್ತುಗಳಲ್ಲಿ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸ್‌ಗಢದಲ್ಲಿ ಬಿಜೆಪಿ ಗೆಲುವು ದಾಖಲಿಸಿದರೆ, ಕರ್ನಾಟಕ, ಹಿಮಾಚಲ ಪ್ರದೇಶ ಮತ್ತು ತೆಲಂಗಾಣದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ.

ಬಿಜೆಪಿಯ ವಿಜಯಗಳು ಮುಖ್ಯವಾಗಿ ಹಿಂದುತ್ವದ ಕೋಮುವಾದಿ ಮತಗಳ ಕ್ರೋಢೀಕರಣದ ಜತೆಗೆ ಜಾತಿ ಭಾವನೆಗಳ ದುಷ್ಟ ದುರುಪಯೋಗದಿಂದ ಪಡೆದವುಗಳು.

ಹಿಂದುತ್ವ ಕೋಮುವಾದಿ ಕ್ರೋಢೀಕರಣವನ್ನು ನೇರವಾಗಿ ಎದುರಿಸಬೇಕು. ಸ್ಪರ್ಧಾತ್ಮಕ ಮೃದು ಹಿಂದುತ್ವ ಮತ್ತು ತೆಳು ಕೇಸರಿ ನಿಲುವುಗಳನ್ನು ಆಶ್ರಯಿಸಿದರೆ, ಅದು ಜನಗಳ ಒಂದು ಗಮನಾರ್ಹ ವಿಭಾಗದ ಮೇಲೆ ಹಿಂದುತ್ವದ ಹಿಡಿತವನ್ನು ಮತ್ತಷ್ಟು ಬಲಪಡಿಸಲು ಕಾರಣವಾಗುತ್ತದೆ. ಇದು ಆರೆಸ್ಸೆಸ್/ಬಿಜೆಪಿ ಮತ್ತು ಇತರ ಎಲ್ಲಾ ಹಿಂದುತ್ವ ಸಂಘಟನೆಗಳಿಗೆ ಸಮಾಜವನ್ನು ಮತ್ತಷ್ಟು ಕೋಮುಗ್ರಸ್ತಗೊಳಿಸಲು ಮತ್ತು ಅಲ್ಪಸಂಖ್ಯಾತರನ್ನು ಗುರಿಯಾಗಿಸಲು ಅವಕಾಶವನ್ನು ಒದಗಿಸುತ್ತದೆ.

ಬಿಜೆಪಿ: ಇ.ಡಿ. ಮತ್ತು ಹಣಶಕ್ತಿಯ ದುರುಪಯೋಗ



ಅಯೋಧ್ಯೆಯ ಸುತ್ತ ಕೇಂದ್ರೀಕೃತವಾಗಿರುವ ಧಾರ್ಮಿಕ ಭಾವನೆಗಳ ನಗ್ನ ದುರುಪಯೋಗ ಮತ್ತು ಇತ್ತೀಚಿನ ಚುನಾವಣಾ ವಿಜಯಗಳ ಹೊರತಾಗಿಯೂ, ಬಿಜೆಪಿಗೆ 2024 ರ ಚುನಾವಣೆಯ ಫಲಿತಾಂಶದ ಬಗ್ಗೆ ಖಾತ್ರಿಯಿಲ್ಲ ಎಂಬಂತೆ ಕಾಣುತ್ತದೆ.

ಬಿಜೆಪಿಯು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ ವಿರೋಧ ಪಕ್ಷಗಳ ಪಕ್ಷಾಂತರಗಳನ್ನು ಸೃಷ್ಟಿಸಲು ಮತ್ತು ಲೋಕಸಭಾ ಚುನಾವಣೆಗಳಲ್ಲಿ ಗೆಲ್ಲುವ ಸಂಭವವನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ಹಿಂದಿನ ಪ್ರತಿಸ್ಪರ್ಧಿಗಳೊಂದಿಗೆ ಮೈತ್ರಿಗಳನ್ನು ಬೆಸೆಯಲು ಇ.ಡಿ. ಮತ್ತು ಹಣಬಲದ ಲಜ್ಜೆಗೆಟ್ಟ ಮತ್ತು ಆಕ್ರಮಣಕಾರಿ ದುರುಪಯೋಗಕ್ಕೆ ಇಳಿದಿದೆ.. ಇದನ್ನು ಮೊದಲು ಮಹಾರಾಷ್ಟ್ರದಲ್ಲಿ, ನಂತರ ಕರ್ನಾಟಕದಲ್ಲಿ ಮಾಡಿದೆ ಮತ್ತು ಈಗ ಬಿಹಾರದಲ್ಲಿ ಜೆಡಿ(ಯು) ಅತಿ ಹೆಚ್ಚು ತಿಪ್ಪರಲಾಗಗಳಲೊಂದು ಅದ್ಭುತ ದಾಖಲೆಯನ್ನೇ ರಚಿಸಿದೆ. ನಿತೀಶ್ ಕುಮಾರ್ ಅವರು ಈ ಬಾರಿ ಬಿಜೆಪಿ ಬೆಂಬಲದೊಂದಿಗೆ ಬಿಹಾರದ ಮುಖ್ಯಮಂತ್ರಿಯಾಗಿ ಆಗಿ ದಾಖಲೆಯ 9 ನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿ ದಾಖಲೆ ನಿರ್ಮಿಸಿದ್ದಾರೆ. ಬಿಜೆಪಿಯನ್ನು ಸೋಲಿಸಿದ ಈ ರಾಜ್ಯಗಳ ಜನತೆ ಇಂತಹ ಗೋಸುಂಬೆಗಳಿಗೆ ತಕ್ಕ ಪಾಠ ಕಲಿಸಲಿದ್ದಾರೆ.

ಸಿಎಎ: ಡಿಸೆಂಬರ್ 2019 ರಿಂದ, ಮೋದಿ ಸರ್ಕಾರವು ಈ ಕಾಯಿದೆ ಅಡಿಯಲ್ಲಿ ನಿಯಮಗಳನ್ನು ರೂಪಿಸಿಲ್ಲ. ಈಗ, ಸಾರ್ವತ್ರಿಕ ಚುನಾವಣೆಯ ಮುನ್ನಾದಿನದಂದು, ಕೋಮು ಧ್ರುವೀಕರಣವನ್ನು ಮತ್ತಷ್ಟು ತೀಕ್ಷ್ಣಗೊಳಿಸುವ ದೃಷ್ಟಿಯಿಂದ ಮತ್ತು ವಿಶೇಷವಾಗಿ ಪೂರ್ವ ಭಾರತದಲ್ಲಿ ಚುನಾವಣಾ ಲಾಭವನ್ನು ಪಡೆಯುವ ಆಶಯದೊಂದಿಗೆ ಅದರ ಅನುಷ್ಠಾನಕ್ಕೆ ಮಂದೊತ್ತುತ್ತಿದೆ.

'ಇಂಡಿಯ' ಬಣ

ಜೆಡಿ(ಯು) 'ಇಂಡಿಯ' ಬಣಕ್ಕೆ ಕೈಕೊಟ್ಟು ಬಿಜೆಪಿಯೊಂದಿಗೆ ಕೈಜೋಡಿಸಿದರೂ, ಸಿಪಿಐ(ಎಂ) ಇದನ್ನು ಇನ್ನಷ್ಟು ಬಲಪಡಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ ಮತ್ತು ನಮ್ಮ ಸಾಂವಿಧಾನಿಕ ಗಣರಾಜ್ಯದ ಜಾತ್ಯತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಕಾಪಾಡುವ ಸಲುವಾಗಿ ಬಿಜೆಪಿಯನ್ನು ಸೋಲಿಸುವ ಚಟುವಟಿಕೆಗಳನ್ನು ಮುಂದುವರಿಸುತ್ತದೆ.

ಅದರಲ್ಲಿ ಭಾಗಿಯಾದವರ ನಡುವೆ ಸೀಟು ಹಂಚಿಕೆ ಕುರಿತು ನಡೆಯುತ್ತಿರುವ ರಾಜ್ಯ ಮಟ್ಟದ ಮಾತುಕತೆಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವುದು ಮತ್ತು ನಂತರ ಜನಗಳ ಜೀವನೋಪಾಯಗಳನ್ನು ಉತ್ತಮ ಪಡಿಸುವ ಮತ್ತು ಸಾಂವಿಧಾನಿಕ ಮೌಲ್ಯಗಳನ್ನು ರಕ್ಷಿಸುವ ಗುರಿಯನ್ನು ಪುಟ 12 ಕ್ಕೆ

ಭಾರತದ ಒಕ್ಕೂಟ ಸ್ವರೂಪವನ್ನು ರಕ್ಷಿಸಲು ದೆಹಲಿಯಲ್ಲಿ ಕೇರಳ ಸಚಿವ ಸಂಪುಟದ ಪ್ರತಿಭಟನೆ

ಪಿ. ರಾಜೀವ್
ಕೈಗಾರಿಕಾ, ಕಾನೂನು ಮತ್ತು
ನಾರು ಉದ್ಯಮ ಸಚಿವರು, ಕೇರಳ ಸರ್ಕಾರ

ಕೇರಳದ ಅಭಿವೃದ್ಧಿ ಮಾದರಿಯು ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಮತ್ತು ಕಲ್ಯಾಣ ಚಟುವಟಿಕೆಗಳಲ್ಲಿನ ಪ್ರಗತಿಯಿಂದಾಗಿ ಜಗತ್ತಿಗೆ ಚಿರಪರಿಚಿತವಾಗಿದೆ. ಹಿಂದಿನ ಎಲ್.ಡಿ.ಎಫ್. ಸರ್ಕಾರವು ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆಯ ಗುಣಮಟ್ಟವನ್ನು ಹೆಚ್ಚಿಸಲು ರಚನಾತ್ಮಕ ಕ್ರಮಗಳನ್ನು ತೆಗೆದುಕೊಂಡಿತು, ಕಲ್ಯಾಣ ಆಧಾರಿತ ಚಟುವಟಿಕೆಗಳನ್ನು ಪರಿಚಯಿಸಿತು ಮತ್ತು ಮೂಲಸೌಕರ್ಯ ಸೌಲಭ್ಯಗಳನ್ನು ಸುಧಾರಿಸಲು ಕ್ರಮಗಳನ್ನು ತೆಗೆದುಕೊಂಡಿತು. ಕೇರಳದ ಜನರು ಈ ಪ್ರಗತಿಯನ್ನು ಗುರುತಿಸಿದ್ದಾರೆ ಮತ್ತು ಎಲ್ಡಿಎಫ್ ಪರವಾಗಿ ಮತ ಚಲಾಯಿಸಿದ್ದಾರೆ ಮತ್ತು ಎಲ್ಡಿಎಫ್ ಸರ್ಕಾರವು ಇದೇ ಮೊದಲ ಬಾರಿಗೆ ಸತತವಾಗಿ ಎರಡನೇ ಅವಧಿಗೆ ಸತತವಾಗಿ ಚುನಾಯಿತರಾಗಿದೆ. ಪರ್ಯಾಯ ಅಭಿವೃದ್ಧಿ ನೀತಿಯನ್ನು ಜಾರಿಗೊಳಿಸುವ ಮೂಲಕ ಇವೆಲ್ಲವನ್ನೂ ಸಾಧಿಸುವುದು ಸಾಧ್ಯವಾಗಿದೆ. ಕೇಂದ್ರ ಸರ್ಕಾರವು ಯೋಜನಾ ಆಯೋಗವನ್ನು ವಿಸರ್ಜಿಸಿದಾಗ, ಕೇರಳ ರಾಜ್ಯವು ರಾಜ್ಯದಲ್ಲಿ ಯೋಜನಾ ವ್ಯವಸ್ಥೆಯನ್ನು ಮುಂದುವರಿಸಲು ನಿರ್ಧರಿಸಿತು. ಈ ಯೋಜನೆಯ ಆಧಾರದ ಮೇಲೆ, ರಾಜ್ಯ ಶಾಸಕಾಂಗವು ಪ್ರತಿ ಹಣಕಾಸು ವರ್ಷಕ್ಕೆ ಬಜೆಟ್ ಅನ್ನು ಅಂಗೀಕರಿಸಿದೆ.

ಭಾರತದ ಜನಸಂಖ್ಯೆಯ 2.8 ಶೇಕಡಾ ಮತ್ತು ಅದರ ಭೂಪ್ರದೇಶದ ಶೇಕಡಾ 1.2 ರಷ್ಟಿರುವ ಕೇರಳವು ಭಾರತದ GDP ಗೆ 4 ಶೇಕಡಾಕ್ಕಿಂತ ಹೆಚ್ಚಿನ ಕೊಡುಗೆಯನ್ನು ನೀಡುತ್ತದೆ ಮತ್ತು ಅದರ ತಲಾ ಆದಾಯವು ಭಾರತದ ಸರಾಸರಿಗಿಂತ 60 ಶೇಕಡಾ ಹೆಚ್ಚಾಗಿದೆ. ಸ್ಥಿರ ಬೆಲೆಗಳಲ್ಲಿ ಕೇರಳದ GDP ಶೇಕಡಾ 12.01 ರಷ್ಟು ಬೆಳೆದಿದೆ ಮತ್ತು ಉದ್ಯಮ ಮತ್ತು ಸಂಬಂಧಿತ ವಲಯವು 2022–23 ರಲ್ಲಿ 17.3 ಶೇಕಡಾ ಬೆಳವಣಿಗೆ ದರವನ್ನು ಸಾಧಿಸಿದೆ. ಉತ್ಪಾದನಾ ವಲಯದಲ್ಲಿ 18.9 ರಷ್ಟು ನಿರ್ಣಾಯಕ ಬೆಳವಣಿಗೆ ದರವನ್ನು ಸಾಧಿಸಲಾಗಿದೆ.

ಶಿಕ್ಷಣ ಕ್ಷೇತ್ರದ ಸುಧಾರಣೆಯಿಂದಾಗಿ ಖಾಸಗಿ ಅನುದಾನ ರಹಿತ ಶಾಲೆಗಳಿಂದ ಲಕ್ಷಾಂತರ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಿಗೆ ವಲಸೆ ಹೋಗಿದ್ದಾರೆ. ಶಾಲೆಗಳಲ್ಲಿ ಮೂಲಸೌಕರ್ಯಗಳನ್ನು ಉನ್ನತೀಕರಿಸಿ ಉತ್ಕೃಷ್ಟ ಕೇಂದ್ರಗಳನ್ನಾಗಿಸಲು ಸರ್ಕಾರವು 4000 ಕೋಟಿ ರೂ.ಗೂ ಹೆಚ್ಚು ಹಣವನ್ನು ವ್ಯಯಿಸಿದೆ. ವಿದ್ಯಾರ್ಥಿಗಳ ದಾಖಲಾತಿಯಲ್ಲಿನ ದೊಡ್ಡ ಜಿಗಿತದಿಂದಾಗಿ ಶಾಲೆಗಳಲ್ಲಿ ಸಾವಿರಾರು ಶಿಕ್ಷಕರ ಹುದ್ದೆಗಳು ಸೃಷ್ಟಿಯಾದವು. ಸರ್ಕಾರಿ ವೈದ್ಯಕೀಯ ಕಾಲೇಜುಗಳು ಮತ್ತು ಆಸ್ಪತ್ರೆಗಳು ಅಂಗಾಂಗ ಕಸಿ ಮತ್ತು ತೆರೆದ ಹೃದಯ ಶಸ್ತ್ರಚಿಕಿತ್ಸೆ ಸೇರಿದಂತೆ ಎಲ್ಲಾ ಸೂಪರ್ ಸ್ಪೆಷಾಲಿಟಿಗಳನ್ನು ಹೊಂದಿವೆ. ಕೇರಳ 60 ಲಕ್ಷಕ್ಕೂ ಹೆಚ್ಚು ಜನರಿಗೆ ತಲಾ 1600 ರೂಪಾಯಿಗಳ ಕಲ್ಯಾಣ ಪಿಂಚಣಿ ನೀಡುತ್ತಿದೆ. ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ವಿಸ್ತರಿಸಲು ಭೂಸ್ವಾಧೀನ ವೆಚ್ಚಕ್ಕಾಗಿ ಖರ್ಚು ಮಾಡಿದ್ದರೆ, ಕೇರಳ ಸರ್ಕಾರವು ಭೂ ಸ್ವಾಧೀನ ವೆಚ್ಚದ 25 ಪ್ರತಿಶತವನ್ನು ಖರ್ಚು ಮಾಡುವಂತೆ ಒತ್ತಾಯಿಸಲಾಯಿತು. ಇವು ಕೆಲವು ನಿದರ್ಶನಗಳು. ಇವೆಲ್ಲವೂ ಹೆಚ್ಚಿನ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತಾಯಿಸಿದವು. ಆದರೆ ಜಿಎಸ್ಟಿ ಜಾರಿಯಾದ ನಂತರ ತೆರಿಗೆ ಆದಾಯವನ್ನು ನಿರ್ಧರಿಸುವ ರಾಜ್ಯ ಸರ್ಕಾರದ ಅಧಿಕಾರವನ್ನು ಕೊನೆಗೊಳಿಸಲಾಗಿದೆ....



ಅದೇ ಸಮಯದಲ್ಲಿ, ಕೇಂದ್ರ ಸರ್ಕಾರವು ಕೇರಳ ರಾಜ್ಯಕ್ಕೆ ಆರ್ಥಿಕ ಬೆಂಬಲವನ್ನು ತೀವ್ರವಾಗಿ ಕಡಿಮೆ ಮಾಡಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ರಾಜ್ಯ ಹಣಕಾಸು ಕುರಿತ ಇತ್ತೀಚಿನ ವರದಿಯ ಪ್ರಕಾರ, ರಾಜ್ಯಗಳು ಸಾಮಾನ್ಯ ಸರ್ಕಾರಿ ತೆರಿಗೆಗಳ 37 ಪ್ರತಿಶತವನ್ನು ಸಂಗ್ರಹಿಸಿದರೆ ಒಟ್ಟು ವೆಚ್ಚದ 64 ಪ್ರತಿಶತವನ್ನು ಖರ್ಚು ಮಾಡುತ್ತವೆ. ಕೇಂದ್ರದಿಂದ ರಾಜ್ಯಗಳಿಗೆ ಸಂಪನ್ಮೂಲಗಳ ವರ್ಗಾವಣೆಯು ಮೂರು ಮಾರ್ಗಗಳ ಮೂಲಕ ನಡೆಯುತ್ತದೆ:

270 ನೇ ವಿಧಿಯ ಅಡಿಯಲ್ಲಿ ಹಣಕಾಸು ಆಯೋಗವು ಶಿಫಾರಸು ಮಾಡಿದ ತೆರಿಗೆ ಹಂಚಿಕೆ; ಆರ್ಟಿಕಲ್ 275 ರ ಅಡಿಯಲ್ಲಿ ಹಣಕಾಸು ಆಯೋಗವು ಶಿಫಾರಸು ಮಾಡಿದ ಅನುದಾನಗಳು ಮತ್ತು ಕೇಂದ್ರದಿಂದ ಪ್ರಾಯೋಜಿತ ಯೋಜನೆಗಳಿಗೆ ಬೆಂಬಲ ಮತ್ತು ಬಂಡವಾಳ ವೆಚ್ಚಕ್ಕಾಗಿ ರಾಜ್ಯಗಳಿಗೆ ಬಡ್ಡಿ ರಹಿತ ಸಾಲಗಳಂತಹ ಆರ್ಟಿಕಲ್ 282 ಮತ್ತು 293 ರ ಅಡಿಯಲ್ಲಿ ಹಣಕಾಸು ಆಯೋಗದ ಶಿಫಾರಸುಗಳ ಹೊರಗಿನ, ರಾಜ್ಯಗಳಿಗೆ ಕೇಂದ್ರದಿಂದ ನೀಡುವ ಅನುದಾನ ಮತ್ತು ಸಾಲಗಳು.

ರಾಜ್ಯಕ್ಕೆ ತೆರಿಗೆ ಹಂಚಿಕೆ ತೀವ್ರವಾಗಿ ಕಡಿಮೆಯಾಗುತ್ತಿದೆ. 2011 ರ ಜನಗಣತಿಯ ಪ್ರಕಾರ ಜನಸಂಖ್ಯೆ ಮತ್ತು ಸಾಮಾಜಿಕ ಕ್ಷೇತ್ರದ ಪ್ರಗತಿಯನ್ನು ಮಾನದಂಡವಾಗಿ ತೆಗೆದುಕೊಳ್ಳಲಾಗಿದೆ, ಇದು ಕೇರಳದಂತಹ ಕಲ್ಯಾಣ ರಾಜ್ಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ರಾಜ್ಯಕ್ಕೆ ನೀಡಲಾಗಿದ್ದ ಪಾಲು ಶೇ.3.875ರಿಂದ ಶೇ.1.9ಕ್ಕೆ ಇಳಿದಿದೆ (10ನೇ ಹಣಕಾಸು ಆಯೋಗ ನಿರ್ಧರಿಸಿದಂತೆ). ಯುಪಿಯ ಪಾಲು ಶೇಕಡಾ 18 ರಷ್ಟಿದೆ ಮತ್ತು ಇದು ಎಲ್ಲಾ ರಾಜ್ಯಗಳಲ್ಲಿ ಅತ್ಯಧಿಕವಾಗಿದೆ. ಬಿಹಾರಕ್ಕೆ ಶೇ.10.05, ಮಧ್ಯಪ್ರದೇಶ ಶೇ.7.85, ಪಶ್ಚಿಮ ಬಂಗಾಳ ಶೇ.7.12, ಮಹಾರಾಷ್ಟ್ರ ಶೇ.6.31 ಹೀಗೆ ಶೇ.1ರಷ್ಟು ಕಡಿಮೆ ಪಾಲು ಪಡೆಯುತ್ತಿರುವ ರಾಜ್ಯಗಳ ಗುಂಪಿನಲ್ಲಿ ಕೇರಳವಿದೆ.

ಇದಲ್ಲದೆ, ಕೇಂದ್ರ ಸರ್ಕಾರವು ಉದ್ದೇಶಪೂರ್ವಕವಾಗಿ ಸೆಸ್ ಮತ್ತು ಹೆಚ್ಚುವರಿ ಶುಲ್ಕಗಳನ್ನು ವಿಧಿಸುವ ಮೂಲಕ ಭಾಗಿಸಬಹುದಾದ ಪೂಲ್ (divisible pool– ಅಂದರೆ, ಕೇಂದ್ರ ರಾಜ್ಯಗಳ ನಡುವೆ ವಿತರಿಸಲಾದ ಒಟ್ಟು ತೆರಿಗೆ ಆದಾಯದ ಭಾಗ. ಇದು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ.) ಅನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ. ಸಂವಿಧಾನದ 270 ನೇ ವಿಧಿಯ ಅಡಿಯಲ್ಲಿ, ಸೆಸ್ ಮತ್ತು ಸರ್ಚಾರ್ಜ್ ಎರಡರಿಂದಲೂ ಸಂಗ್ರಹಿಸಲಾದ ಆದಾಯವು ಕೇಂದ್ರ ಸರ್ಕಾರದ ವಿಶೇಷ ವಿಲೇವಾರಿಯಲ್ಲಿದೆ. ಕೇಂದ್ರ ಸರ್ಕಾರವು ಸೆಸ್ನಿಂದ ಸಂಗ್ರಹಿಸುವ ಆದಾಯವು 2011–12 ರಲ್ಲಿ ಅದರ ಒಟ್ಟು ತೆರಿಗೆ ಆದಾಯದ 6.4 ಪ್ರತಿಶತದಿಂದ 2021–22 ರಲ್ಲಿ 17.7 ಕ್ಕೆ ಏರಿತು, ಈ ಮೊತ್ತ 4,78,680 ಕೋಟಿ ರೂ. ಈ ಮೊತ್ತವನ್ನು ತೆರಿಗೆಯಾಗಿ ವಿಧಿಸಿ ಸಂಗ್ರಹಿಸಿದ್ದರೆ ರಾಜ್ಯ ಸರ್ಕಾರಗಳಿಗೆ ಈ ಮೊತ್ತದ ಪಾಲು ಸಿಗುತ್ತಿತ್ತು. ವಾಸ್ತವಿಕವಾಗಿ ಇದು ಒಕ್ಕೂಟ ತತ್ವಕ್ಕೆ ವಿರುದ್ಧವಾಗಿದೆ. ಬಿಜೆಪಿಯೇತರ ಸರ್ಕಾರಗಳ ಆಡಳಿತವಿರುವ ರಾಜ್ಯಗಳಿಗೆ ಕೇಂದ್ರ ಸರ್ಕಾರದ ಧೋರಣೆ ಕೆಟ್ಟದಾಗಿದೆ. ಹೊಸ ಮಾನದಂಡಗಳನ್ನು ಹೇರುವ ಮೂಲಕ ಈ ರಾಜ್ಯಗಳಿಗೆ ನ್ಯಾಯ ಹಂಚಿಕೆಯನ್ನು ಮೊಟಕುಗೊಳಿಸಲಾಗಿದೆ.

ಕೇರಳ ರಾಜ್ಯಕ್ಕೆ ಅನುದಾನದ ಸ್ಥಿತಿಗತಿಯನ್ನು ನೋಡಿದಾಗ ಇಳಿಮುಖವಾಗುತ್ತಿರುವುದನ್ನು ಕಾಣಬಹುದಾಗಿದೆ. ರಿಸರ್ವ್ ಬ್ಯಾಂಕ್ ವರದಿಯ ಪ್ರಕಾರ, ಕೇಂದ್ರದಿಂದ ಕೇರಳ ರಾಜ್ಯಕ್ಕೆ ಒಟ್ಟು ಅನುದಾನವು 2021–22 ರಲ್ಲಿ 30,01,712 ಕೋಟಿಗಳಿಂದ 2023–24 ರಲ್ಲಿ 15,86,603 ಕೋಟಿಗಳಿಗೆ ಕಡಿಮೆಯಾಗಿದೆ. ಈಗ ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ಹಣವನ್ನು ನಿರಾಕರಿಸಲು ಬ್ರ್ಯಾಂಡಿಂಗ್ನ ಹೊಸ ಯೋಜನೆಯನ್ನು ಸಹ ಬಳಸಲಾಗುತ್ತದೆ. ಉದಾಹರಣೆಗೆ, ಕೇರಳ ಸರ್ಕಾರವು ಲೈಫ್ ಯೋಜನೆಯಡಿ ಎಲ್ಲಾ ನಿರಾಶ್ರಿತರಿಗೆ ಮನೆಗಳನ್ನು ಒದಗಿಸುತ್ತಿದೆ. ರಾಜ್ಯ ಸರಕಾರ ಪ್ರತಿ ಮನೆಗೆ 4 ಲಕ್ಷ ರೂ., ಪರಿಶಿಷ್ಟ ಪಂಗಡದ ಕುಟುಂಬಗಳಿಗೆ 6 ಲಕ್ಷ ರೂ. ಸರ್ಕಾರ ಈಗಾಗಲೇ ನಾಲ್ಕು ಲಕ್ಷ ಮನೆಗಳನ್ನು ಹಸ್ತಾಂತರಿಸಿದ್ದು, ಒಂದು ಲಕ್ಷ ಮನೆಗಳು ನಿರ್ಮಾಣ ಹಂತದಲ್ಲಿವೆ. ಈ ಪೈಕಿ ಕೇಂದ್ರ ಸರ್ಕಾರವು ಪಂಚಾಯಿತಿಗಳಲ್ಲಿ 32,171 ಫಲಾನುಭವಿಗಳಿಗೆ ರೂ 72,000 ಮತ್ತು ಪುರಸಭೆ ಮತ್ತು ಮಹಾನಗರ ಪಾಲಿಕೆಗಳಲ್ಲಿ 79,860 ಫಲಾನುಭವಿಗಳಿಗೆ ರೂ 1.5 ಲಕ್ಷ ಆರ್ಥಿಕ ನೆರವು ನೀಡುತ್ತಿದೆ.

ಈಗ ಕೇಂದ್ರ ಸರ್ಕಾರವು ಈ ಎಲ್ಲಾ ಮನೆಗಳನ್ನು ಕೇಂದ್ರ ಸರ್ಕಾರದ ಯೋಜನೆಯಾದ ಕಬಂಜ (ಪ್ರಧಾನ ಮಂತ್ರಿ ಆವಾಸ್ ಯೋಜನೆ) ಅಡಿಯಲ್ಲಿ ಬ್ರ್ಯಾಂಡ್ ಮಾಡಲು ಒತ್ತಾಯಿಸುತ್ತಿದೆ. ರಾಜ್ಯ ಸರ್ಕಾರವು ಈ ನಿರ್ದೇಶನಗಳ ವಿರುದ್ಧ ಬಲವಾದ ನಿಲುವನ್ನು ತೆಗೆದುಕೊಂಡಿದೆ ಏಕೆಂದರೆ ಇದು ಫಲಾನುಭವಿಗಳ ಘನತೆಗೆ ಧಕ್ಕೆ ತರುತ್ತದೆ, ಏಕೆಂದರೆ ಸುರಕ್ಷಿತ ವಾಸದ ಮನೆ ಮೂಲಭೂತ ಹಕ್ಕು ಮತ್ತು ಉಡುಗೊರೆಯಲ್ಲ. ರಾಜ್ಯ ಸರ್ಕಾರವು ಈ ಮನೆಗಳ ಮೇಲೆ ಲೈಫ್ನ ಯಾವುದೇ ಲೋಗೋವನ್ನು ಸಹ ಪ್ರದರ್ಶಿಸುತ್ತಿಲ್ಲ. ರಾಜ್ಯ ಸರ್ಕಾರದ ನಿಲುವಿನಿಂದಾಗಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಕೇಂದ್ರದ ಇತರ ಅನುದಾನಗಳನ್ನು ನಿರಾಕರಿಸುತ್ತಿದೆ. ಇದರೊಂದಿಗೆ ಕೇಂದ್ರ ಸರ್ಕಾರವು ರಾಜ್ಯಗಳಿಗೆ ಜಿಎಸ್ಟಿ ಪರಿಹಾರವನ್ನು ನಿಲ್ಲಿಸಿದೆ.

ಹಣಕಾಸಿನ ಫೆಡರಲಿಸಂ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಕೇರಳ ರಾಜ್ಯದ ಸ್ವಂತ ಆದಾಯವು 78.7 ಶೇಕಡಾ. ಈ ಮೊದಲು ಇದು ಶೇ.52ರಷ್ಟಿದ್ದು, ಉಳಿದದ್ದು ಕೇಂದ್ರ ಬೆಂಬಲದಿಂದ ಬರುತ್ತಿತ್ತು. ಆದರೆ ಬಿಹಾರಕ್ಕೆ ರಾಜ್ಯದ ಸ್ವಂತ ಸಂಪನ್ಮೂಲಗಳು ಕೇವಲ ಶೇ.29.4 ಮತ್ತು ಯುಪಿಗೆ ಶೇ.54, ಮಧ್ಯಪ್ರದೇಶ ಶೇ.51 ಮತ್ತು ಪಶ್ಚಿಮ ಬಂಗಾಳ ಶೇ.54.2. ಇದು ಎರಡು ವಿಷಯಗಳನ್ನು ಪ್ರತಿಬಿಂಬಿಸುತ್ತದೆ. ಕೇರಳ ರಾಜ್ಯದ ಸಂಪನ್ಮೂಲಗಳಲ್ಲಿನ ಸುಧಾರಣೆ ಮತ್ತು ಕೇಂದ್ರದ ಬೆಂಬಲದ ಕುಸಿತ.

ಸಂವಿಧಾನದ 131 ನೇ ವಿಧಿಯ ಪ್ರಕಾರ ಕೇರಳ ರಾಜ್ಯವು ಸುಪ್ರೀಂ ಕೋರ್ಟ್ನಲ್ಲಿ ಪ್ರಶ್ನಿಸಿರುವ ಪ್ರಮುಖ ವಿಷಯವೆಂದರೆ ರಾಜ್ಯದ ಸಾಲದ ಮಿತಿಯನ್ನು ನಿಗದಿಪಡಿಸುವ ಕೇಂದ್ರ ಸರ್ಕಾರದ ಏಕಪಕ್ಷೀಯ ಧೋರಣೆ. ಆರ್ಟಿಕಲ್ 293 ರ ಪ್ರಕಾರ, ರಾಜ್ಯ ಶಾಸಕಾಂಗಗಳು ರಾಜ್ಯಗಳಿಗೆ ಸಾಲದ ಮಿತಿಯನ್ನು ನಿಗದಿಪಡಿಸುವ ಅಧಿಕಾರವನ್ನು ಹೊಂದಿವೆ. ರಾಜ್ಯ ಪಟ್ಟಿಯ ನಮೂದು 43 ರ ಪ್ರಕಾರ, ಸಾರ್ವಜನಿಕ ಸಾಲವು ರಾಜ್ಯಗಳ ಹಕ್ಕಾಗಿರುತ್ತದೆ. ಕೇಂದ್ರ ಸರ್ಕಾರವು 293 ನೇ ವಿಧಿಯ ಅಡಿಯಲ್ಲಿ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವ ಸಂವಿಧಾನಾತ್ಮಕ ಹಕ್ಕು ಅಥವಾ ಅಧಿಕಾರವನ್ನು ಹೊಂದಿಲ್ಲ, ಇದು ರಾಜ್ಯದ ವಿಶೇಷ ಹಣಕಾಸಿನ ಕ್ಷೇತ್ರವ್ಯಾಪ್ತಿ(ಡೊಮೈನ್) ಅನ್ನು ಉಲ್ಲಂಘಿಸುವ ಮೂಲಕ ಒಕ್ಕೂಟದ ರಚನೆಗೆ ಹಾನಿ ಮಾಡುವ ಸಾಮರ್ಥ್ಯವನ್ನು ಹೊಂದಿದೆ.

ಆರ್ಟಿಕಲ್ 293 ರ ಅನುಸಾರವಾಗಿ, ರಾಜ್ಯ ಶಾಸಕಾಂಗವು ಕೇರಳ ಹಣಕಾಸಿನ ಜವಾಬ್ದಾರಿ ಕಾಯಿದೆ 2003 ಅನ್ನು ಅಂಗೀಕರಿಸಿದೆ ಮತ್ತು ಎರವಲು ಮಿತಿಗಳು ಅಥವಾ ಸಾಲದ ಪ್ರಮಾಣವನ್ನು ಈ ಕಾಯಿದೆಯಿಂದ ನಿಯಂತ್ರಿಸಲಾಗುತ್ತದೆ. ಆದರೆ ಕೇಂದ್ರ ಸರ್ಕಾರವು ಹಲವಾರು ಆದೇಶಗಳ ಮೂಲಕ ಇದನ್ನು ನಿಯಂತ್ರಿಸಲು ಮಧ್ಯಪ್ರವೇಶಿಸುತ್ತಿದೆ. ಇದು ಕೇಂದ್ರ ಸರ್ಕಾರವು ಸೂಕ್ತವೆಂದು ಪರಿಗಣಿಸುವ ರೀತಿಯಲ್ಲಿ ರಾಜ್ಯದ ಮೇಲೆ ನಿವ್ವಳ ಎರವಲು ಮೇಲ್ ಮಿತಿ ಅಥವಾ ಗರಿಷ್ಠ ಮಿತಿಯನ್ನು ಹೇರುವುದನ್ನು ಒಳಗೊಂಡಿದೆ. ಇದು ಮುಕ್ತ ಮಾರುಕಟ್ಟೆಯ ಎರವಲು ಸೇರಿದಂತೆ ಎಲ್ಲಾ ಮೂಲಗಳಿಂದ ಸಾಲವನ್ನು ಮಿತಿಗೊಳಿಸುತ್ತದೆ; ಮತ್ತು ಎರಡು, ಸಾಂವಿಧಾನಿಕ ನಿಬಂಧನೆಗಳ ಪ್ರಕಾರ 'ಎರವಲು' ಮಾಡದಿರುವ ರಾಜ್ಯದ 'ಎರವಲು' ಅಂಶಗಳನ್ನು ಸೇರಿಸುವ ಮೂಲಕ ನಿವ್ವಳ ಎರವಲು ಗರಿಷ್ಠ ಮಿತಿಯನ್ನು ಮತ್ತಷ್ಟು ಕಡಿಮೆಗೊಳಿಸುವುದು. ಈ ಮಧ್ಯಪ್ರವೇಶಗಳಿಂದ, 2016–23ರ ಆರ್ಥಿಕ ವರ್ಷದಲ್ಲಿ ರಾಜ್ಯವು 1,07,513.09 ಕೋಟಿ ರೂ.ಗಳ ಸಂಚಿತ ನಷ್ಟ ಅಥವಾ ಸಂಪನ್ಮೂಲ ಕೊರತೆಯನ್ನು ಅನುಭವಿಸಿದೆ. ಇದರಿಂದಾಗಿ ರಾಜ್ಯವು ತನ್ನ ವಾರ್ಷಿಕ ಬಜೆಟ್ನಲ್ಲಿನ ಭರವಸೆಗಳನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ.

ಈ ಘಟಕಗಳ ಪ್ರಭಾವವನ್ನು ಪರಿಗಣಿಸುವಾಗ, ಈ ಆರ್ಥಿಕ ವರ್ಷದಲ್ಲಿಯೇ, ಸಂಪನ್ಮೂಲ ಕೊರತೆ ತುಂಬಾ ಹೆಚ್ಚಾಗಿದೆ. ರಾಜ್ಯದ ಪಾಲು ಶೇ.3.89ರಿಂದ ಶೇ.1.92ಕ್ಕೆ ಇಳಿಕೆಯಾಗಿದ್ದು, ಕಡಿಮೆಯಾದ ಮೊತ್ತವು 18,000 ಕೋಟಿ ರೂಗಳಷ್ಟಾಗುತ್ತದೆ. ಉಖಖಿ ಪರಿಹಾರವನ್ನು ನಿಲ್ಲಿಸಿದ ಪರಿಣಾಮವಾಗಿ 12,000 ಕೋಟಿ ರೂಪಾಯಿಗಳ ಕೊರತೆ ಮತ್ತು ಸಾಲವನ್ನು ನಿರಾಕರಿಸಿದ ಪರಿಣಾಮವಾಗಿ 19,600 ಕೋಟಿ ರೂಪಾಯಿಗಳ ಕೊರತೆ ಉಂಟಾಗಿದೆ. ಸಂಚಿತ ಪರಿಣಾಮವು ಸುಮಾರು 1.50 ಲಕ್ಷ ಕೋಟಿ ರೂಪಾಯಿಗಳ ವಾರ್ಷಿಕ ವೆಚ್ಚವನ್ನು ಹೊಂದಿರುವ ರಾಜ್ಯಕ್ಕೆ 57,000 ಕೋಟಿ ರೂಪಾಯಿಗಳ ➚

ಬಿಹಾರದಲ್ಲಿ ವಿಶ್ವಾಸದ್ರೋಹ

ಪ್ರಕಾಶ್ ಕಾರತ್

ಬಿಹಾರ ಮುಖ್ಯಮಂತ್ರಿ ಹಾಗೂ ಸಂಯುಕ್ತ ಜನತಾ ದಳ (ಜೆಡಿ–ಯು) ನಾಯಕ ನಿತೀಶ್ ಕುಮಾರ್ ಮತ್ತೊಮ್ಮೆ ಲಾಗ ಹಾಕಿದ್ದಾರೆ. 2022ರ ಆಗಸ್ಟ್‌ನಲ್ಲಿ ಬಿಜೆಪಿ ಸಖ್ಯ ಬಿಟ್ಟು ಆರ್‌ಜೆಡಿ ಜೊತೆ ಸೇರಿ ಮಹಾ ಘಟಬಂಧನ್ ಸರ್ಕಾರ ರಚಿಸಿದ್ದ ನಿತೀಶ್ ಈಗ ಮತ್ತೆ ಬಿಜೆಪಿ ಕಡೆ ಪಕ್ಷಾಂತರ ಮಾಡಿದ್ದಾರೆ.

ಐದು ಬಾರಿ ನಿಷ್ಠೆ ಬದಲಾಯಿಸಿ, ಹಾಗೂ ಒಂಬತ್ತು ಸಲ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಭಾರತದ ಸಂಸದೀಯ ಇತಿಹಾಸದಲ್ಲಿ ನಿತೀಶ್ ಕುಖ್ಯಾತ ದಾಖಲೆ ನಿರ್ಮಿಸಿದ್ದಾರೆ.

ಅತ್ಯಂತ ಕುತೂಹಲಕಾರಿ ಸನ್ನಿವೇಶದಲ್ಲಿ ಈ ಸಲದ ಯೂ–ಟರ್ನ್ ನಡೆದಿದೆ. ಕಳೆದ ವರ್ಷ ಮಧ್ಯ ಭಾಗದಿಂದೀಚೆಗೆ ಬಿಜೆಪಿ–ವಿರೋಧಿ ಗುಂಪನ್ನು ಒಟ್ಟಿಗೆ ತರುವ ಕಾರ್ಯದಲ್ಲಿ ನಿತೀಶ್ ತೊಡಗಿಸಿಕೊಂಡಿದ್ದರು. ಅವರ ಉಪಕ್ರಮದ ಮೇರೆಗೆ ಜುಲೈನಲ್ಲಿ ಬಿಹಾರ ರಾಜಧಾನಿ ಪಾಟ್ನಾದಲ್ಲಿ ಪ್ರತಿಪಕ್ಷಗಳ ಮೊದಲ ಸಮಾವೇಶ ನಡೆದಿತ್ತು. ಆದರೆ, ಪ್ರತಿಪಕ್ಷಗಳ ಒಗ್ಗಟ್ಟನ್ನು ರೂಪಿಸಿದ ನಿತೀಶ್, ಅದಾದ ಕೇವಲ ಆರು ತಿಂಗಳಲ್ಲಿ ಅದ್ಹೇಗೆ ಬಿಜೆಪಿಯ ಆಸ್ಥಾನಿಕರಾದರು ಎನ್ನುವುದು ಪ್ರಶ್ನೆಯಾಗಿದೆ.

ಜನವರಿ 13ರಂದು ನಡೆದ ಪ್ರತಿಪಕ್ಷಗಳ ಸಭೆ, ನಿತೀಶ್‌ರನ್ನು ಐಎನ್‌ಡಿಐಎ (ಇಂಡಿಯಾ) ಮೈತ್ರಿಕೂಟದ ಸಂಚಾಲಕರನ್ನಾಗಿ ನೇಮಿಸಲು ವಿಫಲರಾದ್ದರಿಂದ ನಿತೀಶ್ ಹತಾಶರಾಗಿದ್ದರು ಎಂಬುದು ಅವರ ಆಪ್ತರು ಉಲ್ಲೇಖಿಸಿರುವ ಕಾರಣಗಳಲ್ಲಿ ಒಂದಾಗಿದೆ. ನಿತೀಶ್ ಕೆಲವು ತಿಂಗಳಿಂದ ಈ ಹುದ್ದೆಯನ್ನು ನಿರೀಕ್ಷಿಸುತ್ತಿದ್ದರು.

ಈ ಹಿನ್ನೆಲೆಯಲ್ಲಿ ನೋಡಿದರೆ, ನಿತೀಶ್‌ರನ್ನು ಸಂಚಾಲಕರನ್ನಾಗಿ ಮಾಡದಿದ್ದುದು ಇಂಡಿಯಾ ಕೂಟದ ಅದೃಷ್ಟವೇ ಆಗಿದೆ. ಒಂದು ವೇಳೆ ಏಕೈಕ ಸಂಚಾಲಕರನ್ನಾಗಿ ಮಾಡಿದ ನಂತರ ನಿತೀಶ್ ತನ್ನ ಪಾಲುದಾರರಿಗೆ ದ್ರೋಹ ಬಗೆದು ಬಿಜೆಪಿಯೊಂದಿಗೆ ಕೈಜೋಡಿಸಿದ್ದರೆ ಪರಿಣಾಮ ಏನಾಗುತ್ತಿತ್ತು ಎಂಬುದನ್ನು ಊಹಿಸಿಕೊಳ್ಳಿ. ಹೀಗಾಗಿ ನಿತೀಶ್‌ಗೆ ಸಂಚಾಲಕರ ಪ್ರಮುಖ ಸ್ಥಾನ ನೀಡಿ ಪ್ರತಿಪಕ್ಷಗಳ ಬೆನ್ನಿಗೆ ಚೂರಿ ಹಾಕುವ ಅವಕಾಶ ನೀಡದೇ ಇದ್ದುದು ಅದೃಷ್ಟದ ವಿಷಯವೇ ಆಗಿದೆ. ಒಂದು ವೇಳೆ ಸಮಯಸಾಧಕನಾಗಿರುವ ನಿತೀಶ್‌ಗೆ ಅಪ್ಪಿತಪ್ಪಿಯೂ ಸಂಚಾಲಕತ್ವ ಕೊಟ್ಟಿದ್ದರೆ ಬಿಜೆಪಿಯೊಂದಿಗೆ ಚೌಕಾಸಿ ಮಾಡಲು ಅವರು ಆ ಅವಕಾಶವನ್ನು ಬಳಸಿಕೊಳ್ಳುತ್ತಿದ್ದರು.

ನಿತೀಶ್‌ರ 'ಪಲ್ಟಿ' ಮತ್ತು ಸಮಯಸಾಧಕತನದ ವಿರುದ್ಧ ದನಿಯೆತ್ತುವಾಗಲೇ ಈ ಸಮಯಸಾಧಕ ಮೈತ್ರಿಗೆ ಇನ್ನೊಂದು ಮುಖವಿರುವುದನ್ನೂ ಗಮನಿಸಬೇಕು. ಪಕ್ಷಾಂತರಕ್ಕೆ ಪ್ರೋತ್ಸಾಹ ನೀಡುವಲ್ಲಿ; ಹಾಗೂ ಭ್ರಷ್ಟರು ಹಾಗೂ ಸಿದ್ಧಾಂತಹೀನರು ಎಂದು ತಾನೇ ಖಂಡಿಸಿದ್ದ ನಾಯಕರನ್ನು ಒ(ಅ)ಪ್ಪಿಕೊಂಡು ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಬಿಜೆಪಿ ಕೂಡ ಅಷ್ಟೇ ಸರಿಸಮಾನ ಸಮಯಸಾಧಕತನದ ದಾಖಲೆಯನ್ನು ಹೊಂದಿದೆ.

ಸಾಯುವುದೇ ಮೇಲೆಂದಿದ್ದ ನಿತೀಶ್

ಮತ್ತೆ ಬಿಜೆಪಿಗೆ ಹೋಗುವುದಕ್ಕಿಂತ ಸಾಯುವುದೇ ಮೇಲು ಎಂದು ಕಳೆದ ವರ್ಷ ಜನವರಿಯಲ್ಲಿ ನಿತೀಶ್ ಘೋಷಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಅಮಿತ್ ಷಾ, ನಿತೀಶ್‌ಗೆ ಬಿಜೆಪಿ ಬಾಗಿಲು ಸಂಪೂರ್ಣವಾಗಿ ಮುಚ್ಚಿದೆ ಎಂದಿದ್ದರು. ಈ ಉಡಾಳನಿಗೆ ಅದೇ ಬಾಗಿಲುಗಳನ್ನು ಪುನಃ ತೆರೆಯಲು ಷಾಗೆ ಕೆಲವು ಗಂಟೆ ಕೂಡ ಬೇಕಾಗಲಿಲ್ಲ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ.

ಪಕ್ಷಾಂತರಿಗಳಿಂದಲೇ ತುಂಬಿವೆ...

ಬಿಜೆಪಿ ಮತ್ತು ಮೋದಿ ಸರಕಾರ ಪಕ್ಷಾಂತರಿಗಳಿಂದಲೇ ತುಂಬಿಕೊಂಡಿವೆ.

ಮತ್ತೆ ಬಿಜೆಪಿಗೆ ಹೋಗುವುದಕ್ಕಿಂತ ಸಾಯುವುದೇ ಮೇಲು ಎಂದು ಕಳೆದ ವರ್ಷ ಜನವರಿಯಲ್ಲಿ ನಿತೀಶ್ ಘೋಷಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಅಮಿತ್ ಷಾ, ನಿತೀಶ್‌ಗೆ ಬಿಜೆಪಿ ಬಾಗಿಲು ಸಂಪೂರ್ಣವಾಗಿ ಮುಚ್ಚಿದೆ ಎಂದಿದ್ದರು. ನಿತೀಶ್ ಕುಮಾರಗೆ ಅದೇ ಬಾಗಿಲುಗಳನ್ನು ಪುನಃ ತೆರೆಯಲು ಷಾಗೆ ಕೆಲವು ಗಂಟೆ ಕೂಡ ಬೇಕಾಗಲಿಲ್ಲ ಎನ್ನುವುದು ಇಲ್ಲಿ ಗಮನಾರ್ಹವಾಗಿದೆ.



ಪ್ರತಿಪಕ್ಷದಲ್ಲಿದ್ದಾಗ ಭ್ರಷ್ಟರೆಂಬ ಹಣೆಪಟ್ಟಿ ಕಟ್ಟಿಕೊಂಡವರು ಬಿಜೆಪಿಗೆ ಸೇರಿದ ತಕ್ಷಣವೇ ಭ್ರಷ್ಟತೆಯ ಕಳಂಕದಿಂದ ಮುಕ್ತರಾಗುತ್ತಾರೆ. ಅವರ ವಿರುದ್ಧದ ಸಿಬಿಐ ಮತ್ತು ಇಡಿ ಕೇಸ್‌ಗಳನ್ನು ವಾಪಸ್ ಪಡೆಯಲಾಗುತ್ತದೆ. ಬಿಜೆಪಿಯ ಒತ್ತಡ ತಂತ್ರಗಳಿಗೆ ಮಣಿಯದವರ ವಿರುದ್ಧ ಸಿಬಿಐ ಮತ್ತು ಇ.ಡಿ. ಬೆನ್ನು ಹತ್ತುತ್ತವೆ. ನಿತೀಶ್–ಬಿಜೆಪಿ ಸರಕಾರ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ ಆರ್‌ಜೆಡಿ ಮುಖಂಡರಾದ ಲಾಲು ಯಾದವ್ ಮತ್ತು ತೇಜಸ್ವಿ ಯಾದವ್‌ರಿಗೆ ವಿಚಾರಣೆಗೆ ಹಾಜರಾಗುವಂತೆ ಇ.ಡಿ. ಸಮನ್ಸ್ ಕಳಿಸಿದ್ದು ಇದರ ಸಂಕೇತವಾಗಿದೆ.

ಲೋಕಸಭೆ ಚುನಾವಣೆಗಳಲ್ಲಿ ತನ್ನ ಅದೃಷ್ಟ ಹೇಗಿರುತ್ತದೆಯೋ ಏನೋ ಎಂದು ಬಿಜೆಪಿಗೆ ಅಭದ್ರತೆ ಮತ್ತು ಅನುಮಾನ ಕಾಡುತ್ತಿರುವುದು ಮುಂದುವರಿದಿರುವ ಹಿನ್ನೆಲೆಯಲ್ಲಿ ಬಿಹಾರ ಕಾರ್ಯಾಚರಣೆ ಮಹತ್ವ ಪಡೆದಿದೆ.

ಬಿಜೆಪಿ ಮಸಕು ಭವಿಷ್ಯ

ಮಹಾ ಘಟಬಂಧನದ ವಿರುದ್ಧ ಬಿಜೆಪಿ ಭವಿಷ್ಯ ಮಸಕಾಗಿರುವ ಉತ್ತರ ಭಾರತದ ಪ್ರಮುಖ ರಾಜ್ಯಗಳಲ್ಲಿ ಬಿಹಾರವೂ ಒಂದಾಗಿದೆ. ಜೆಡಿಯುವನ್ನು ತನ್ನೆಡೆ ಸೆಳೆದುಕೊಂಡರೆ ತನ್ನ ಹಾದಿಯಲ್ಲಿರುವ ಅಡ್ಡಿಯನ್ನು ನಿವಾರಿಸಲು ಸಾಧ್ಯವೆಂಬುದು ಬಿಜೆಪಿ ಲೆಕ್ಕಾಚಾರವಾಗಿದೆ. ಆದರೆ ಕಳೆದ ವಿಧಾನಸಭೆ ಚುನಾವಣೆಗಳಲ್ಲಿ ಒಂದಾಗಿ ಬಿಜೆಪಿ–ಜೆಡಿಯು ವಿರುದ್ಧ ಹೋರಾಡಿದ್ದ ಆರ್‌ಜೆಡಿ–ಎಡಪಕ್ಷಗಳು–ಕಾಂಗ್ರೆಸ್ ಕೂಟ ಇನ್ನೂ ಅಭೇದ್ಯ ಶಕ್ತಿಯಾಗಿದೆ. ಅದು ಕೂದಲೆಳೆ ಅಂತರದಲ್ಲಿ ಚುನಾವಣೆಯನ್ನು ಸೋತಿತ್ತು. ಜೆಡಿಯು ಕೇವಲ 43 ಸ್ಥಾನಗಳನ್ನು ಗೆದ್ದು ನೆಲೆಯನ್ನು ಕಳೆದುಕೊಂಡಿತ್ತು. ಬಿಜೆಪಿಯೊಂದಿಗೆ ಸಖ್ಯ ಬೆಳೆಸಿದ ಅಸ್ಸಾಂ ಗಣ ಪರಿಷತ್‌ನಂಥ ಪ್ರಾದೇಶಿಕ ಪಕ್ಷಗಳಿಗೆ ಆದ ಗತಿಯೇ ಜೆಡಿಯುಗೂ ಒದಗುತ್ತದೆ. ಅದೊಂದು ನಿರ್ಲಕ್ಷಿತ ಪಾಲುದಾರ ಪಕ್ಷದ ಮಟ್ಟಕ್ಕೆ ಇಳಿಯಲಿದೆ ಹಾಗೂ ಅದರ ನೆಲೆಯನ್ನು ಹಿಂದೂತ್ವ ಪಕ್ಷ ಬಳಸಿಕೊಳ್ಳಲಿದೆ.

ನಿತೀಶ್‌ರ ತತ್ವರಹಿತ ಪಕ್ಷಾಂತರವು ಈ ನಾಚಿಕೆಗೇಡಿನ ಗ್ಯಾಂಗ್ ಸೋಲಿಸುವ ಮಹಾ ಘಟಬಂಧನದ ಸಂಕಲ್ಪವನ್ನು ಇನ್ನಷ್ಟು ಗಟ್ಟಿಗೊಳಿಸುತ್ತದೆ.

ಅನು: ವಿಶ್ವ

➘ ಸಂಪನ್ಮೂಲ ಕೊರತೆಯಾಗಿದೆ.

ಇದು ರಾಜ್ಯದ ಆರ್ಥಿಕ ಸ್ವಾಯತ್ತತೆ ಮತ್ತು ಸಂವಿಧಾನದ ಮೂಲ ರಚನೆಯಾದ ಒಕ್ಕೂಟ ತತ್ವ(ಫೆಡರಲಿಸಂ)ದ ಮೇಲಿನ ದಾಳಿಯಾಗಿದೆ. ಅದಕ್ಕಾಗಿಯೇ ಕೇರಳದ ಶಾಸಕರು ಮತ್ತು ಸಂಸದರೊಂದಿಗೆ ದೇಶದ ರಾಜಧಾನಿಯಲ್ಲಿ ಪ್ರತಿಭಟನೆ ನಡೆಸಲು ಕೇರಳ ಸಚಿವ ಸಂಪುಟ ನಿರ್ಧರಿಸಿದೆ. ಪ್ರತಿಭಟನೆಯ ದಿನಾಂಕವನ್ನು ಅಂತಿಮಗೊಳಿಸುವ ಮೊದಲು, ಕೇರಳದ ಮುಖ್ಯಮಂತ್ರಿಗಳು ಕ್ರಮವಾಗಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಅನ್ನು ಪ್ರತಿನಿಧಿಸುತ್ತಿರುವ ವಿರೋಧ ಪಕ್ಷದ ನಾಯಕ ಮತ್ತು ಉಪ ನಾಯಕರೊಂದಿಗೆ ಸಮಾಲೋಚಿಸಿದರು. ಆದರೆ ಅವರು ಕೇಂದ್ರ ಸರ್ಕಾರದ ವಿರುದ್ಧದ ಪ್ರತಿಭಟನೆಯಲ್ಲಿ ಭಾಗಿಯಾಗಿ ಸರ್ಕಾರದೊಂದಿಗೆ ಸಹಕರಿಸಲು ಸಿದ್ಧರಿಲ್ಲ. ಕೇರಳದ ಹಕ್ಕುಗಳ ಮೇಲೆ ಕೇಂದ್ರದ ದಾಳಿಯ ಬಗ್ಗೆ ಅವರು ಮೌನವಾಗಿರುತ್ತಾರೆ. ಅದು ಕೇರಳ ರಾಜ್ಯದ ಕಾಂಗ್ರೆಸ್ ನಾಯಕತ್ವದ ಲಕ್ಷಣ.

ಆಂದೋಲನದ ಉದ್ಘಾಟನಾ ಅಧಿವೇಶನಕ್ಕೆ ಆಗಮಿಸಿ ಮಾತನಾಡುವಂತೆ ಕೇರಳದ ಮುಖ್ಯಮಂತ್ರಿಯವರು ಎನ್.ಡಿ.ಎ. ಆಡಳಿತದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಮತ್ತು ವಿರೋಧ ಪಕ್ಷಗಳ ನಾಯಕರಿಗೆ ಪತ್ರ ಬರೆದಿದ್ದಾರೆ. ಇದು ತನ್ನದೇ ಆದ ಸಾಂವಿಧಾನಿಕ ಬೇಡಿಕೆಗಳಿಗಾಗಿ ಮಾತ್ರವಲ್ಲದೆ ಒಕ್ಕೂಟ ರಚನೆಯಲ್ಲಿ ಎಲ್ಲಾ ರಾಜ್ಯಗಳ ಹಕ್ಕುಗಳಿಗಾಗಿ ರಾಜ್ಯದ ಪ್ರಜಾಪ್ರಭುತ್ವದ ಪ್ರತಿಭಟನೆಯ ಒಂದು ನವೀನ ಮಾರ್ಗವಾಗಿದೆ.

ದೇಶ ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳ ಬಗ್ಗೆ ಯಾವುದೇ ಉಲ್ಲೇಖವಿಲ್ಲದ ರಾಷ್ಟ್ರಪತಿ ಭಾಷಣ ಸುಳ್ಳಿನಿಂದ ಕೂಡಿದೆ–ಸಿಪಿಎಂ ಎಂಪಿ ಎಳಮರಮ್ ಕರೀಂ ಟೀಕೆ

ಬುಧವಾರ (ಜನವರಿ 31 ರಂದು) ಸಂಸತ್ತಿನ ಬಜೆಟ್ ಅಧಿವೇಶನದ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಅವರ ಭಾಷಣವು ದೇಶದ ಸಾಮಾಜಿಕ ವಾಸ್ತವಿಕತೆಗೆ ಯಾವುದೇ ಸಂಬಂಧವಿಲ್ಲ ಎಂದು ಸಿಪಿಎಂ ಸಂಸದೀಯ ಪಕ್ಷದ ನಾಯಕ ಎಳಮರಮ್ ಕರೀಂ ಟೀಕಿಸಿದ್ದಾರೆ. ಬುಧವಾರ ಸಂಸತ್ ಆವರಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಎಳಮರಮ್ ಕರೀಂ ಅವರು, ಇದು ಅಂಕಿ-ಸಂಖ್ಯೆಯ ಭಾಷಣವೇ ಹೊರತು ಬೇರೇನೂ ಅಲ್ಲ, ಸರ್ಕಾರದ ನೀತಿ ಹೇಳಿಕೆಯಲ್ಲಿ ನಮ್ಮ ದೇಶ ಈಗ ಎಲ್ಲಿದೆ? ಭವಿಷ್ಯಕ್ಕಾಗಿ ಸರ್ಕಾರವು ಹೇಗೆ ನೀತಿಗಳನ್ನು ರೂಪಿಸಬಹುದು ಎಂಬುದನ್ನು ಇದು ವಿವರಿಸುತ್ತದೆ. ಆದರೆ ರಾಷ್ಟ್ರಪತಿಗಳ ಭಾಷಣದಲ್ಲಿ ಅಂಥದ್ದೇನೂ ಆಗಿಲ್ಲ ಎಂದು ದೂರಿದರು.

ಜನರ ಸಮಸ್ಯೆಗಳು ಈ ಭಾಷಣದಲ್ಲಿಲ್ಲ

ಅಯೋಧ್ಯೆಯಲ್ಲಿ ರಾಮಮಂದಿರವನ್ನು ಸರ್ಕಾರದ ಶ್ರೇಷ್ಠತೆಗೆ ಉದಾಹರಣೆಯಾಗಿ ಉಲ್ಲೇಖಿಸುವ ಈ ಭಾಷಣವು ಪ್ರಜಾಪ್ರಭುತ್ವ, ಜಾತ್ಯತೀತ ರಾಷ್ಟ್ರದ ನೀತಿ ಹೇಳಿಕೆಯೇ ಎಂಬ ಅನುಮಾನ ಮೂಡಿಸುತ್ತಿದೆ. ಸರ್ಕಾರದ ಸಾಧನೆಗಳನ್ನು ಉಲ್ಲೇಖಿಸಿದ ರಾಷ್ಟ್ರಪತಿಗಳು, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣದ ಜನರ ಶತಮಾನಗಳ ಹಿಂದಿನ ಆಸೆ ಇಂದು ಈಡೇರಿದೆ ಎಂದು ಹೇಳುತ್ತಿರುವುದು ಅತಿರೇಕದ ಸಂಗತಿ. ಬಿಜೆಪಿ ಆಡಳಿತದಲ್ಲಿ ದೇಶ ಹೇಗೆ ಮುನ್ನಡೆಯುತ್ತಿದೆ ಎಂಬುದನ್ನು ಈ ಹೇಳಿಕೆ ಸ್ಪಷ್ಟವಾಗಿ ತೋರಿಸುತ್ತದೆ. ಪೌರತ್ವ ತಿದ್ದುಪಡಿ ಕಾಯ್ದೆ, ಸಂವಿಧಾನದ 370ನೇ ವಿಧಿ ರದ್ದತಿ, ಸಂಸದೀಯ ಕಲಾಪಗಳನ್ನು ತುಳಿಯುವುದು ಸೇರಿದಂತೆ ಮೋದಿ ಸರ್ಕಾರದ ಸಾಧನೆಗಳನ್ನು ಪಟ್ಟಿ ಮಾಡಿದ ರಾಷ್ಟ್ರಪತಿಗಳು, ಪ್ರಜಾಪ್ರಭುತ್ವವನ್ನು ನಾಶ ಮಾಡುವುದೇ ಈ ಸರ್ಕಾರದ ಮುಖ್ಯ ಲಕ್ಷಣವಾಗಿದೆ. ದೇಶದ ಅಲ್ಪಸಂಖ್ಯಾತ ಮತ್ತು ಹಿಂದುಳಿದ ಸಮುದಾಯದ ಬಡವರ ಮತ್ತು ಜನರ ಸಮಸ್ಯೆಗಳು ಮತ್ತು ಕಷ್ಟಗಳು ಈ ಭಾಷಣದಲ್ಲಿಲ್ಲ. ಬಡವರು, ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಸರ್ಕಾರದ ನೀತಿ ನಿರೂಪಣೆಗೆ ಧಕ್ಕೆಯಾಗುತ್ತಿಲ್ಲ ಎಂಬುದು ರಾಷ್ಟ್ರಪತಿಯವರ ಭಾಷಣದಿಂದ ಸ್ಪಷ್ಟವಾಗಿದೆ.

ಕಾರ್ಮಿಕರು ಎಂಬ ಒಂದು ಪದವೂ ಇಲ್ಲ

32 ಪುಟಗಳ ನೀತಿ ನಿರೂಪಣೆ ಭಾಷಣದಲ್ಲಿ ಕಾರ್ಮಿಕರು ಎಂಬ ಒಂದು ಪದವೂ ಇಲ್ಲ. ಮೂಲಸೌಕರ್ಯ ಅಭಿವೃದ್ಧಿ, ಬಡತನ ನಿರ್ಮೂಲನೆ, ಮಹಿಳಾ ಸಬಲೀಕರಣ ಕ್ಷೇತ್ರಗಳಲ್ಲಿ ಸರ್ಕಾರದ ಮಧ್ಯಸ್ಥಿಕೆಯನ್ನು ಶ್ಲಾಘಿಸುತ್ತಾ ಭಾಷಣದಲ್ಲಿ ಪ್ರಸ್ತಾಪಿಸಿದ ಹಲವು ಯೋಜನೆಗಳು ಸಾಮಾನ್ಯ ಜನರಿಗೆ ಉಪಯುಕ್ತವಲ್ಲದ ಹೇಳಿಕೆಗಳು ಮತ್ತು ಈ ನೀತಿ ಹೇಳಿಕೆಯು ಸುಳ್ಳನ್ನು ಹರಡಲು ಉದ್ದೇಶಿಸಲಾಗಿದೆ. ಸಾರ್ವಜನಿಕ ವಲಯದ ಕೈಗಾರಿಕೆಗಳು ಮತ್ತು ರಾಷ್ಟ್ರೀಯ ಸಂಪತ್ತನ್ನು ಮಾರಾಟ ಮಾಡುವ ನೀತಿ ಅನುಸರಿಸುತ್ತಿರುವ ಕೇಂದ್ರ ಸರ್ಕಾರವು ದೇಶವನ್ನು ಪ್ರಗತಿಯ ಪಥದಲ್ಲಿ ಮುನ್ನಡೆಸುವುದು ಹೇಗೆ? ಪ್ರಸ್ತುತ ದೇಶ ಎದುರಿಸುತ್ತಿರುವ ಸವಾಲುಗಳು ಹಾಗೂ ಪ್ರಮುಖ ಸಮಸ್ಯೆಗಳ ಬಗ್ಗೆ ಪ್ರಸ್ತಾಪಿಸದ ರಾಷ್ಟ್ರಪತಿಗಳ ನೀತಿ ನಿರೂಪಣಾ ಭಾಷಣ ಅತ್ಯಂತ ನಿರಾಶಾದಾಯಕವಾಗಿದೆ. ಕೇಂದ್ರ ಸರ್ಕಾರ ಜನ ಸಾಮಾನ್ಯರನ್ನು ದೋಚಿ ಕಾರ್ಪೋರೇಟ್‌ಗಳ ಜೇಬು ತುಂಬಲು ಯತ್ನಿಸುತ್ತಿದೆ, ಇದಲ್ಲದೇ ಸರ್ಕಾರ ಜಾರಿಗೆ ತಂದಿರುವ ಅತಿರೇಕದ ವಿಭಜನೆ ನೀತಿ ದೇಶವನ್ನು ಕರಾಳ ಯುಗಕ್ಕೆ ಕೊಂಡೊಯ್ಯುತ್ತಿದೆ ಎಂದಿರುವ ಎಳಮರಮ್ ಕರೀಂ ಅವರು, ಮೋದಿ ಸರ್ಕಾರವನ್ನು ಹೊಗಳಿ ರಾಷ್ಟ್ರಪತಿ ಭಾಷಣ ಮಾಡಬೇಕಾಗಿರುವುದು ದೊಡ್ಡ ವಿಪರ್ಯಾಸ ಎಂದಿದ್ದಾರೆ.



ಮನುಸ್ಮೃತಿಯಲ್ಲಿ ದಲಿತರ ಸ್ಥಾನವೇನು?

"ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿವದ್ಧಿ, ಜಾತಿ ನಿರ್ಮೂಲನೆ ಹಾಗೂ ಐಕ್ಯತೆ" ಈ ಘೋಷಣೆಗಳೊಂದಿಗೆ 'ದಲಿತ ಹಕ್ಕುಗಳ ಸಮಿತಿ' (ಡಿ ಎಚ್ ಎಸ್) 3ನೇ ರಾಜ್ಯ ಸಮಾವೇಶವು 2024ರ ಫೆಬ್ರವರಿ 4 ಮತ್ತು 5 ಎರಡು ದಿನಗಳ ಕಾಲ ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ದಲಿತರ ಕುರಿತಾದ ವಿಶೇಷ ಲೇಖನಗಳು ಇಲ್ಲಿವೆ.

ಸಿ. ಸಿದ್ದಯ್ಯ

ಭಾರತೀಯ ಸಮಾಜದಲ್ಲಿ ಅಸ್ಪೃಶ್ಯತೆ ಆಚರಣೆ ಮತ್ತು ಜಾತಿ ತಾರತಮ್ಯ ವ್ಯವಸ್ಥೆಯು ಶತಮಾನಗಳಿಂದ ಉಳಿದುಕೊಂಡು ಬಂದಿದೆ. ಇದಕ್ಕೆ ಮೂಲ ಕಾರಣ ಮನುಸ್ಮೃತಿ. ಮನುಸ್ಮೃತಿಯು ಶತಮಾನಗಳಿಂದ ದಲಿತರ ಮೇಲಿನ ಅಮಾನವೀಯ ಶೋಷಣೆಯನ್ನು ನ್ಯಾಯಸಮ್ಮತಗೊಳಿಸಲು ಬಳಸಲ್ಪಟ್ಟ ಒಂದು ವಿವಾದಾತ್ಮಕ ದಾಖಲೆಯಾಗಿದೆ. ಮನುಸ್ಮೃತಿಯು ಶೂದ್ರರು, ಅತಿಶೂದ್ರರು ಮತ್ತು ಮಹಿಳೆಯರಿಗಾಗಿ ಅನೇಕ ಅಮಾನವೀಯ ಕಾನೂನುಗಳನ್ನು ರೂಪಿಸಿತ್ತು. ಶೂದ್ರರು ಯವುದೇ ಸ್ವಂತ ಆಸ್ತಿಯನ್ನು ಹೊಂದಲು ಅವಕಾಶ ಇರಲಿಲ್ಲ. ಏಕೆಂದರೆ ಅವರು ಸ್ವತಃ ಮೇಲಿನ ಮೂರು ವರ್ಣಗಳ ಆಸ್ತಿಯಾಗಿದ್ದರು; ಶೂದ್ರನು ಬ್ರಾಹ್ಮಣನನ್ನು ನಿಂದಿಸಿದರೆ ಅವನ ನಾಲಿಗೆಯನ್ನು ಕತ್ತರಿಸಬೇಕು, ಆದರೆ ಬ್ರಾಹ್ಮಣನು ಶೂದ್ರನನ್ನು ನಿಂದಿಸಿದರೆ, ಬಹಳ ಸಣ್ಣ ಶಿಕ್ಷೆಯನ್ನು ಸೂಚಿಸುತ್ತದೆ; ಶೂದ್ರನು ಬ್ರಾಹ್ಮಣನನ್ನು ಹೊಡೆದರೆ ಅವನ ತೋಳುಗಳನ್ನು ಕತ್ತರಿಸಬೇಕು; ಅವನು ವೇದವನ್ನು ಕೇಳಿದರೆ, ಕರಗಿದ ಬಿಸಿ ಸೀಸವನ್ನು ಅವನ ಕಿವಿಗೆ ಸುರಿಯಬೇಕು; ಅವನು ವೇದವನ್ನು ಹೇಳಿದರೆ ಅವನ ನಾಲಿಗೆಯನ್ನು ಕತ್ತರಿಸಬೇಕು; ಶೂದ್ರನು ಯಾವುದೇ ವಿವಾದ ಅಥವಾ ಪ್ರಕರಣದಲ್ಲಿ ಸಾಕ್ಷಿಯಾಗಿದ್ದರೆ, ಅವನು ವಿಷ ಕುಡಿದು ಸಾಯದಿದ್ದರೆ ಅಥವಾ ಬೆಂಕಿಗೆ ಎಸೆದರೂ ಸುಡದಿದ್ದರೆ ಮಾತ್ರ ಅವನ ಸಾಕ್ಷ್ಯವನ್ನು ನಂಬಬಹುದು. ದಲಿತರನ್ನು ನಾಲ್ಕು ವರ್ಣಗಳಿಂದಲೂ ದೂರ ಇಡಲಾಗಿದೆ ಎಂಬುದನ್ನು ಇಲ್ಲಿ ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ. ಆದ್ದರಿಂದ, ದಲಿತರನ್ನು ಮನುಷ್ಯರೆಂದು ಪರಿಗಣಿಸಲಾಗುವುದಿಲ್ಲ ಮತ್ತು ಶೋಷಣೆಗೆ ಮಾತ್ರ ಅರ್ಹರು.

ಎಲ್ಲವೂ ಬ್ರಹ್ಮ ಲಿಖಿತ ಎಂದು ನಂಬಿಸಿದರು

ತನಗೆ ಎದುರಾದ ಸಂಕಷ್ಟಗಳಿಂದ ಬಳಲುತ್ತಿರುವ ವ್ಯಕ್ತಿಯು, ಅದಕ್ಕೆ ಕಾರಣವಾದ ಮಾನವ ಶೋಷಣೆಯ ವಿರುದ್ಧ ಹೋರಾಡಲು ಯೋಚಿಸಬಹುದು. ಆದರೆ ಈ ಶೋಷಣೆಯ ನಿಯಮವು ಬ್ರಹ್ಮ ಲಿಖಿತವಾಗಿರುವಾಗ ಮತ್ತು ಅವನ ಮಗ ಮನು ಅದನ್ನು ಅನುಸರಿಸಲು ದಂಡ ಸಂಹಿತೆಯನ್ನು ರಚಿಸಿದಾಗ, ಅದನ್ನು ಯಾರಾದರೂ ವಿರೋಧಿಸಲಾದೀತೆ? ದಲಿತರು ಮತ್ತು ಆದಿವಾಸಿಗಳನ್ನು ಶಿಕ್ಷಣದಿಂದ ದೂರವಿಡಲಾಗಿತ್ತು. ಅದನ್ನು ದೂರವಿಟ್ಟಿದ್ದಲ್ಲದೆ, ಕೆಲವೊಮ್ಮೆ ಆದರ್ಶ ಸಮಾಜದಲ್ಲಿಯೂ ಅದನ್ನು ಅನುಸರಿಸದೇ ಇರುವವವರ ವಿರುದ್ಧ ನೇರ ಹತ್ಯೆಯ ಮೂಲಕ ಮತ್ತು ಕೆಲವೊಮ್ಮೆ ಏಕಲವ್ಯನ ಹೆಬ್ಬೆರಳು ಕತ್ತರಿಸಿದಂತೆ ಹಿಂಸೆಯ ಅಸ್ತ್ರವನ್ನು ಸಮರ್ಥಿಸಲಾಯಿತು. ಅದನ್ನು ಸ್ವೀಕರಿಸುವ ನೈತಿಕ ಹೊಣೆಗಾರಿಕೆ ಏಕಲವ್ಯನಂತಹ ವಂಚಿತ ಸಮಾಜದ ಮೇಲಿತ್ತು. ಹೀಗಾಗಿ, ಮನುವಾದದ ವಿರುದ್ಧ ಹೋರಾಟ ನಡೆಸದೆ, ಜಾತಿ ತಾರತಮ್ಯದ ವಿರುದ್ಧದ ಯಾವುದೇ ಚಳುವಳಿ ಅಪೂರ್ಣವಾಗಿರುತ್ತದೆ. ಅಂತಹ ಚಳುವಳಿ ತನ್ನ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲ.

> **ಮನುಸ್ಮೃತಿಯು ಶತಮಾನಗಳಿಂದ ಶೂದ್ರರನ್ನು ಅಮಾನವೀಯಾಗಿ ನಡೆಸಿಕೊಂಡಿದೆ.**

ಹೆಚ್ಚುತ್ತಿರುವ ದಲಿತರ ಮೇಲಿನ ಹಲ್ಲೆಗಳು

ಜಾತೀಯತೆಯ ವಿರುದ್ಧದ ಆಂದೋಲನವು ಇಂದು ಅತ್ಯಂತ ಅಗತ್ಯವಾಗಿದೆ. ಏಕೆಂದರೆ ಕಳೆದ ಒಂಬತ್ತು ವರ್ಷಗಳಲ್ಲಿ ಬಿಜೆಪಿ ಸರ್ಕಾರದ ನೀತಿಗಳು ಮತ್ತು ನಡವಳಿಕೆಯು ಮುಖ್ಯವಾಗಿ ಎಲ್ಲಾ ಸಾಮಾಜಿಕ ನ್ಯಾಯ ಕಾರ್ಯಕ್ರಮಗಳನ್ನು ಕಿತ್ತುಹಾಕುವ ಮತ್ತು ಜಾತಿ ಮತ್ತು ಇತರ ಎಲ್ಲಾ ಸಾಮಾಜಿಕ ಅಸಮಾನತೆಗಳನ್ನು ಬಲಪಡಿಸುವತ್ತ ಗಮನಹರಿಸಿದೆ. ಈ ಸತ್ಯವನ್ನು ಖಚಿತಪಡಿಸಲು ಯಾವುದೇ ಅಂಕಿಅಂಶಗಳ ಅಗತ್ಯವಿಲ್ಲ. ಬಿಜೆಪಿ ಸರ್ಕಾರದಲ್ಲಿ ದಲಿತರ ಮೇಲಿನ ಹಲ್ಲೆಗಳು ಹೆಚ್ಚಿವೆ, ಅವರಿಗೆ ಸಂವಿಧಾನದ ಅವಕಾಶಗಳು ದುರ್ಬಲಗೊಂಡಿವೆ ಮತ್ತು ಅವರ ಜೀವನಕ್ಕೆ ಅಗತ್ಯವಾದ ಸಮಾಜ ಕಲ್ಯಾಣ ಯೋಜನೆಗಳ ರಾಜ್ಯದ ಅಡಿಯಲ್ಲಿ ನೀಡಲಾದ ಮೂಲ ಸೌಕರ್ಯಗಳು ದುರ್ಬಲಗೊಂಡಿವೆ. ಒಂದೆಡೆ ಸಮಾಜದಲ್ಲಿ ಜಾತಿ ಮೇಲುಗೈ ಎಂಬ ಭಾವನೆ ಪ್ರಬಲವಾಗಿದ್ದು, ಇದರ ನೇರ ಪರಿಣಾಮ ಜಾತಿ ದಮನವಾದರೆ ಮತ್ತೊಂದೆಡೆ ದಲಿತರ ಮೇಲೆ ಆರ್ಥಿಕ ಹೊರೆ ಹೆಚ್ಚಿದೆ. ಬಿಜೆಪಿ ಸರ್ಕಾರದ ನವ–ಉದಾರವಾದಿ ಆರ್ಥಿಕ ನೀತಿಯನ್ನು ಜಾರಿಗೆ ತರುತ್ತಿರುವ ಮನುವಾದಿ ಸಿದ್ಧಾಂತವೇ ಇದಕ್ಕೆ ಪ್ರಮುಖ ಕಾರಣ.

ಜಾತಿ ವ್ಯವಸ್ಥೆಯೇ ಆರೆಸ್ಸೆಸ್ ನೀತಿ

ಬಿಜೆಪಿ ಸರ್ಕಾರದ ನಾಯಕತ್ವ ತನ್ನನ್ನು ಆರ್‌ಎಸ್‌ಎಸ್ ಪ್ರಚಾರಕ್ ಎಂದು ಕರೆದುಕೊಳ್ಳುತ್ತಿದೆ. ಬಿಜೆಪಿ ಆರೆಸ್ಸೆಸ್‌ನ ರಾಜಕೀಯ ಸಂಘಟನೆಯಾಗಿದೆ. ಆದುದರಿಂದ ಅವರು ಆರೆಸ್ಸೆಸ್ ನೀತಿಯನ್ನು ಮಾತ್ರ ಜಾರಿಗೆ ತಂದರೂ ಆಶ್ಚರ್ಯವಿಲ್ಲ. ತಮ್ಮ ಕನಸಿನ ರಾಷ್ಟ್ರವಾದ 'ಹಿಂದೂ ರಾಷ್ಟ್ರ'ವನ್ನು ರಚಿಸಲು ಪ್ರಭುತ್ವದ ಅಧಿಕಾರವನ್ನು ವಶಪಡಿಸಿಕೊಳ್ಳುವುದು RSS ನ ನಿಜವಾದ ಅಜೆಂಡಾ. ಆರ್‌ಎಸ್‌ಎಸ್ ಪ್ರಾರಂಭದಿಂದಲೂ ಬ್ರಾಹ್ಮಣ ಸಂಘಟನೆಯಾಗಿತ್ತು. ಸ್ವಾತಂತ್ರ್ಯದ ನಂತರ, ಅದು ಹಿಂದೂ ಕೋಡ್ ಬಿಲ್‌ನ ತಿದ್ದುಪಡಿಯನ್ನು ವಿರೋಧಿಸಿತು. ಮಂಡಲ್ ಆಯೋಗದ ಶಿಫಾರಸುಗಳನ್ನು ಜಾರಿಗೆ ತರಲು ಬಿಜೆಪಿಯ ವಿರೋಧವೂ ಅದೇ ಆಧಾರದ ಮೇಲೆ ಇತ್ತು.

ಆರೆಸ್ಸೆಸ್ ಜಾತಿ ವ್ಯವಸ್ಥೆಯನ್ನು ಹೃದಯಪೂರ್ವಕವಾಗಿ ಬೆಂಬಲಿಸುತ್ತದೆ. ಗೋಳ್ವಾಲ್ಕರ್ ಅವರು ತಮ್ಮ ಪುಸ್ತಕವಾದ 'ಬಂಚ್ ಆಫ್ ಥಾಟ್ಸ್', ಭಾಗ 2, ಅಧ್ಯಾಯ 10 ರಲ್ಲಿ ವರ್ಣಾಶ್ರಮ ವ್ಯವಸ್ಥೆಯನ್ನು ವೈಭವೀಕರಿಸುವಾಗ, 'ರಾಷ್ಟ್ರ ಮತ್ತು ಅದರ ಸಮಸ್ಯೆಗಳು' ಶೀರ್ಷಿಕೆಯಡಿಯ, ಜಾತಿ ವ್ಯವಸ್ಥೆಯ ಕುರಿತಾದ ಅದೇ ಅಧ್ಯಾಯದಲ್ಲಿ ಅವರು ಹೇಳಿದರು, "ಆ ಪ್ರಾಚೀನ ಕಾಲದಲ್ಲಿಯೂ ಜಾತಿಗಳು ಅಸ್ತಿತ್ವದಲ್ಲಿದ್ದವು ಮತ್ತು ನಮ್ಮ ವೈಭವದ ರಾಷ್ಟ್ರೀಯ ಜೀವನದಲ್ಲಿ ಸಾವಿರಾರು ವರ್ಷಗಳಿಂದ ಉಳಿದುಕೊಂಡಿವೆ ಅವರು ಸಾಮಾಜಿಕ ಒಗ್ಗಟ್ಟಿನ ದೊಡ್ಡ ಬಂಧವಾಗಿ ಕಾರ್ಯನಿರ್ವಹಿಸುತ್ತಾರೆ."

ಸಂವಿಧಾನ ಸಭೆಯು ಭಾರತದ ಸಂವಿಧಾನವನ್ನು ಅಂತಿಮಗೊಳಿಸಿದಾಗ, ಆರೆಸ್ಸೆಸ್ ಮುಖವಾಣಿ 'ಆರ್ಗನೈಸರ್' ತನ್ನ ಸಂಪಾದಕೀಯದಲ್ಲಿ 30 ನವೆಂಬರ್ 1949 ರ ಸಂಚಿಕೆಯಲ್ಲಿ ವಿಷಾದ ವ್ಯಕ್ತಪಡಿಸಿ ಬರೆದಿದ್ದು ಹೀಗೆ; "ಆದರೆ ಅದರ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ನಮ್ಮ ಸಂವಿಧಾನದಲ್ಲಿ ಪ್ರಾಚೀನ ಭಾರತದ ವಿಶಿಷ್ಟ ಸಾಂವಿಧಾನಿಕ ಅಭಿವೃದ್ಧಿ. ಮನುವಿನ ನಿಯಮಗಳು ಸ್ಪಾರ್ಟಾದ ಲೈಕರ್ಗಸ್ ಅಥವಾ ಪರ್ಷಿಯಾದ ಸೊಲೊನ್‌ಗೆ ಬಹಳ ಹಿಂದೆಯೇ ಬರೆಯಲ್ಪಟ್ಟವು. ಇಲ್ಲಿಯವರೆಗೆ, ಮನುಸ್ಮೃತಿಯಲ್ಲಿ ವಿವರಿಸಿದಂತೆ ಅವರ ಕಾನೂನುಗಳು ಪ್ರಪಂಚದಾದ್ಯಂತ ಮೆಚ್ಚುಗೆ ಪಡೆದಿವೆ ಮತ್ತು ಸ್ವಯಂಚಾಲಿತ ಅನುಸರಣೆ ಮತ್ತು ಸ್ವೀಕಾರವನ್ನು ಆನಂದಿಸುತ್ತವೆ. ಆದರೆ ನಮ್ಮ ಸಾಂವಿಧಾನಿಕ ವಿದ್ವಾಂಸರಿಗೆ ಇದು ಏನೂ ಅರ್ಥವಾಗಿಲ್ಲ."

ಮನುವಾದಿಗಳ ಕೈಯಲ್ಲಿ ಅಧಿಕಾರ ಸಿಕ್ಕಾಗ ಜಾತೀಯತೆ ಬಲಗೊಂಡು ದಲಿತರು, ಆದಿವಾಸಿಗಳ ಮೇಲಿನ ಹಲ್ಲೆಗಳು ಹೆಚ್ಚಾಗುತ್ತವೆ. ಈ ಕಲ್ಪನೆಯನ್ನು ಕಾರ್ಯಗತಗೊಳಿಸಲು ಮೊದಲ ಷರತ್ತು ದೇಶದ ಸಂವಿಧಾನವನ್ನು ದುರ್ಬಲಗೊಳಿಸುವುದು. ನಮ್ಮ ದೇಶದ ಸಂವಿಧಾನದ ಆಧಾರವು ಎಲ್ಲಾ ನಾಗರಿಕರಿಗೆ ಸಮಾನತೆ ಮತ್ತು ಸಮಾನ ಹಕ್ಕುಗಳು. ಇದು ಆರ್‌ಎಸ್‌ಎಸ್ ಕಾರ್ಯಸೂಚಿಗೆ ಅಡೆತಡೆಗಳನ್ನು ಸೃಷ್ಟಿಸುವುದು ಮಾತ್ರವಲ್ಲದೆ ಅದನ್ನು ಬಲವಾಗಿ ತಡೆಯುತ್ತದೆ. ಆದ್ದರಿಂದಲೇ ಸಂವಿಧಾನದ ಮೇಲೆ ಯೋಜಿತ ದಾಳಿಗಳು ನಡೆಯುತ್ತಿರುವುದು ಕಾಣುತ್ತಿದೆ.

ಎಲ್ಲ ಚಳವಳಿಗಳ ನಡುವೆ ಏಕತೆ ಅಗತ್ಯ

ಬಿಜೆಪಿ ಮತ್ತು ಆರೆಸ್ಸೆಸ್ ದಾಳಿಗಳು ಅತ್ಯಂತ ತೀವ್ರವಾದ ಮತ್ತು ವ್ಯಾಪಕ ಪ್ರಮಾಣದಲ್ಲಿ ನಡೆಯುತ್ತಿವೆ. ಆದ್ದರಿಂದ, ಅವರ ವಿರುದ್ಧ ಪ್ರತಿರೋಧವೂ ವ್ಯಾಪಕವಾಗಿರಬೇಕು. ಆದರೆ, ನಮ್ಮ ದೇಶದಲ್ಲಿ ಅನೇಕ ಸಂಘಟನೆಗಳು ತಮ್ಮ ಮಟ್ಟದಲ್ಲಿ ಜಾತಿವಾದ ಮತ್ತು ದಲಿತ ವಿರೋಧಿ ನೀತಿಗಳ ವಿರುದ್ಧ ಕೆಲಸ ಮಾಡುತ್ತಿವೆ. ಆದರೆ ಈ ಎಲ್ಲ ಚಳವಳಿಗಳ ನಡುವೆ ಏಕತೆ ಕಾಯ್ದುಕೊಳ್ಳುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಕಳೆದ ಎರಡು ವರ್ಷಗಳಿಂದ ಪ್ರಯತ್ನಗಳು ನಡೆಯುತ್ತಿವೆ. ಕಳೆದ ವರ್ಷ ದೆಹಲಿಯಲ್ಲಿ ದಲಿತರ ಸಮಸ್ಯೆಗಳ ಕುರಿತು ಒಂದು ಬೃಹತ್ ಸಮಾವೇಶವನ್ನು ನಡೆಸಲಾಯಿತು, ಇದರಲ್ಲಿ ಚಳುವಳಿಯ ಪ್ರಾಥಮಿಕ ತಿಳುವಳಿಕೆಯನ್ನು ರಚಿಸಲಾಯಿತು. ಇದಕ್ಕೆ ಸಂಬಂಧಿಸಿದಂತೆ ಆಗಸ್ಟ್ ತಿಂಗಳಿನಲ್ಲಿ ಹೈದರಾಬಾದ್ ನಲ್ಲಿ ನೂರಕ್ಕೂ ಹೆಚ್ಚು ಸಂಘಟನೆಗಳು ಭಾಗವಹಿಸಿದ್ದ ದಲಿತ ಶೃಂಗಸಭೆಯನ್ನು ಆಯೋಜಿಸಲಾಗಿತ್ತು.

ಬಿಜೆಪಿಯೊಂದಿಗೆ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟದ ಅಗತ್ಯವಿದೆ ಎಂದು ಹೈದರಾಬಾದ್ ಸಮ್ಮೇಳನದಲ್ಲಿಯೇ ನಿರ್ಧರಿಸಲಾಯಿತು. ಸಾರ್ವಜನಿಕರಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿಯನ್ನು ನಿಜ ಬಣ್ಣವನ್ನು ಬಹಿರಂಗಪಡಿಸಲು ಸಹಿ ಅಭಿಯಾನವನ್ನು ನಡೆಸಲಾಯಿತು. ರಾಜ್ಯಗಳಲ್ಲಿ ಸಮಾವೇಶ ನಡೆಸುವ ಮೂಲಕ ಅಲ್ಲಿನ ಸಂಘಟನೆಗಳನ್ನೂ ಆಂದೋಲನಕ್ಕೆ ಸೇರಿಸಿಕೊಳ್ಳುವ ಮೂಲಕ ದೆಹಲಿ ಸಮಾವೇಶವನ್ನು ಯಶಸ್ವಿಗೊಳಿಸಲಾಯಿತು. ಕರ್ನಾಟಕದಿಂದಲೂ ನೂರಾರು ಸಂಖ್ಯೆಯಲ್ಲಿ ಈ ಸಮಾವೇಶದಲ್ಲಿ ಭಾಗಿಯಾಗಿದ್ದರು. ಬೇಡಿಕೆ ಪತ್ರವನ್ನು ದೇಶದ ರಾಷ್ಟ್ರಪತಿಗಳಿಗೆ ಹಸ್ತಾಂತರಿಸಲಾಯಿತು.

ಅಪಾಯಕಾರಿಯಾಗಿರುವ ದಲಿತರಲ್ಲೂ ಹಿಂದುತ್ವದ ಪ್ರಾಬಲ್ಯ

ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಂದೆಡೆ ದಲಿತರ ಸಾಮಾಜಿಕ, ಆರ್ಥಿಕ ಸ್ಥಿತಿ ಹದಗೆಟ್ಟಿದ್ದರೆ, ಮತ್ತೊಂದೆಡೆ ದಲಿತರಲ್ಲಿ ಬಿಜೆಪಿಯ ಚುನಾವಣಾ ವ್ಯಾಪ್ತಿ ಹೆಚ್ಚಿರುವುದು ಆತಂಕಕಾರಿ ಸಂಗತಿ. ಇದಕ್ಕೆ ಪ್ರಮುಖ ಕಾರಣ ಬಿಜೆಪಿಯ ಅಸ್ಮಿತೆಯ ರಾಜಕಾರಣ ಮತ್ತು ದಲಿತರಲ್ಲೂ ಹಿಂದುತ್ವದ ಪ್ರಾಬಲ್ಯ. ಹಾಗಾಗಿ ಬಿಜೆಪಿಯ ನಿಜವಾದ ಮುಖವನ್ನು ಎಲ್ಲರ ಮುಂದೆ ಬಿಚ್ಚಿಡುವುದು ಇನ್ನೂ ಮುಖ್ಯವಾಗುತ್ತದೆ.. 2024ರಲ್ಲಿ ನಡೆಯಲಿರುವ ಸಂಸತ್ ಚುನಾವಣೆಗೆ ದಲಿತರ ಸಮಸ್ಯೆಗಳ ಬಗ್ಗೆಯೂ ಚರ್ಚೆ ಆರಂಭಿಸಲಾಗುವುದು. ಸಮಾನತೆಯ ಈ ಹೋರಾಟಕ್ಕೆ ಬಿಜೆಪಿಯ ರಾಜಕೀಯ ಸೋಲು ಅಗತ್ಯ. ಈ ಮನುವಾದಿ ಶಕ್ತಿಗಳನ್ನು ಸಂಸತ್ತಿನಿಂದ ಹೊರಹಾಕುವ ಮೂಲಕ ಸಂವಿಧಾನವನ್ನು ಸ್ಥಾಪಿಸುವುದು ಗುರಿಯಾಗಿದೆ.

ವ್ಯರ್ಥವಾಗುತ್ತಿರುವ 'ಎಸ್.ಸಿ. ಉಪ ಯೋಜನೆ' ಹಣ

ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರ್ಕಾರದ ನಿರ್ಲಕ್ಷ್ಯದ ಪರಿಣಾಮವಾಗಿ, ದಲಿತ ಮತ್ತು ಬುಡಕಟ್ಟು ಜನರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕಾದ ಉಪ ಯೋಜನೆ ಹಣ ವ್ಯರ್ಥವಾಗುತ್ತಿದೆ. ಈ ಅವಧಿಯಲ್ಲಿ ಎಸ್ಸಿ ಉಪ ಯೋಜನೆಗೆ ಸಂಬಂಧಿಸಿದ ಸುಮಾರು ರೂ. 71,686.43 ಸಾವಿರ ಕೋಟಿ ಹಂಚಿಕೆಗಳನ್ನು

ಪುಟ 12 ಕ್ಕೆ

ಜನವರಿ 30 ಮಹಾತ್ಮ ಹುತಾತ್ಮ ದಿನ
ಸೌಹಾರ್ದ ಪರಂಪರೆ ಉಳಿಸಲು ಎಲ್ಲರ ಬೆಸೆದ ಮಾನವ ಸರಪಳಿ

ವರದಿ: ಆರ್. ರಾಮಕೃಷ್ಣ

ಸಂಕುಚಿತ ರಾಜಕೀಯ ದುರುದ್ದೇಶಗಳಿಗಾಗಿ ಮತಧರ್ಮಗಳ ಹೆಸರಿನಲ್ಲಿ ಸಮಾಜದಲ್ಲಿ ಶಾಂತಿ ಸಾಮರಸ್ಯ ಕದಡಲಾಗುತ್ತಿರುವ ಗಂಭೀರ ಪರಿಸ್ಥಿತಿಯಲ್ಲಿ ನಮ್ಮ ಸಮಾಜದ ಸೌಹಾರ್ದ ಪರಂಪರೆಯನ್ನು ಉಳಿಸುವ, ಬೆಳೆಸುವ ಅಭಿಯಾನದ ಭಾಗವಾಗಿ ಸೌಹಾರ್ದ ಜನ ಸಂಸ್ಕೃತಿಯನ್ನು ಮುಂಚೂಣಿಗೆ ತರುವ ಉದ್ದೇಶದೊಂದಿಗೆ 'ಸೌಹಾರ್ದ ಕರ್ನಾಟಕ' ವತಿಯಿಂದ ಜನವರಿ 30, ಮಹಾತ್ಮಗಾಂಧಿ ಹುತಾತ್ಮದಿನದಂದು ರಾಜ್ಯವ್ಯಾಪಿಯಾಗಿ ಸೌಹಾರ್ದ ಮಾನವ ಸರಪಳಿ ಹಾಗು ಸೌಹಾರ್ದ ಸಭೆಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳು ನಡೆದಿವೆ.





ಡಾ.ಕೆ. ಮರುಳಸಿದ್ಧಪ್ಪ

ಬೆಂಗಳೂರು ನಗರದಲ್ಲಿ ವಿವಿಧ ಭಾಗಗಳಲ್ಲಿ ನಡೆದ ಮಾನವ ಸರಪಳಿ ಕಾರ್ಯಕ್ರಮಗಳಲ್ಲದೇ ಸಂಜೆ ನಗರ ಕೇಂದ್ರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೌಹಾರ್ದ ಮಾನವ ಸರಪಳಿ ಮತ್ತು ಸೌಹಾರ್ದ ಸಭೆ ನಡೆಯಿತು. ಸಭೆಯ ಆರಂಭದಲ್ಲಿ ಮಹಾತ್ಮ ಗಾಂಧಿಯವರ ಭಾವ ಚಿತ್ರ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ರಾಷ್ಟ್ರಕವಿ ಕುವೆಂಪು, ಹುತಾತ್ಮ ಭಗತ್ ಸಿಂಗ್‌ರವರ ಪ್ರತಿಮೆಗಳಿಗೆ ಪುಷ್ಪನಮನಗಳನ್ನು ಸಲ್ಲಿಸಲಾಯಿತು. ಸಂಜೆ 5.15 ನಿಮಿಷದಿಂದ 5.25 ನಿಮಿಷಗಳವರೆಗೆ ಸ್ವಾತಂತ್ರ್ಯ ಉದ್ಯಾನವನದಿಂದ ಆರಂಭಿಸಿ ಶೇಷಾದ್ರಿ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಸೌಹಾರ್ದ ಮಾನವ ಸರಪಳಿ ರಚಿಸಲಾಯಿತು. ಹಿರಿಯ ಸಾಹಿತಿಗಳು, ಚಿಂತಕರು, ನ್ಯಾಯಮೂರ್ತಿಗಳು, ಪ್ರಾಧ್ಯಾಪಕರು, ರಂಗಭೂಮಿ ಹಾಗೂ ಸಿನಿಮಾ ಕಲಾವಿದರು, ವಿವಿಧ ಪ್ರಗತಿಪರ ಸಂಘಟನೆಗಳು ಹಾಗೂ ಜನ ಚಳುವಳಿಗಳ ಮುಖಂಡರು ಹಾಗೂ ಕಾರ್ಯಕರ್ತರು ನೂರಾರು ಸಂಖ್ಯೆಯಲ್ಲಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಹನುಮಮಾಲೆಯ ಹೆಸರಿನಲ್ಲಿ ನಡೆಯುತ್ತಿರುವುದು ಅಪಾಯಕಾರಿ

ಮೊದಲಿಗೆ ಸೌಹಾರ್ದ ಸಭೆಯನ್ನುದ್ದೇಶಿ ಮಾತನಾಡಿದ ಹಿರಿಯ ಸಾಹಿತಿ ಡಾ.ಕೆ. ಮರುಳಸಿದ್ದಪ್ಪ ಅವರು ಇಂದು ದೇಶಕ್ಕೆ ಬಹುದೊಡ್ಡ ಆತಂಕ, ಧರ್ಮ ಮತ್ತು ದೇವರನ್ನು ವ್ಯಾಪಾರ–ಉದ್ದಿಮೆಯನ್ನಾಗಿ ಮಾಡಿಕೊಂಡು, ರಾಜಕೀಯ ಲಾಭ, ನಷ್ಟಗಳ ಲೆಕ್ಕಾಚಾರಗಳನ್ನು ಮಾಡುತ್ತಿರುವ ರಾಜಕಾರಣಿಗಳಿಂದ ಎದುರಾಗಿದೆ. ಮಂಡ್ಯ ಜಿಲ್ಲೆಯಲ್ಲಿ ಹನುಮಮಾಲೆಯ ಹೆಸರಿನಲ್ಲಿ ಏನು ನಡೆಯುತ್ತಿದೆ ಅದು ಅಪಾಯಕಾರಿ. ಸ್ವಾತಂತ್ರ್ಯ ಹೋರಾಟದಲ್ಲಿ ಶಿವಪುರ ಸತ್ಯಾಗ್ರಹದಂತಹ ಅತ್ಯಂತ ಪ್ರಬಲ ಚಳುವಳಿ ನಡೆದ ಜಿಲ್ಲೆ ಮಂಡ್ಯ ಜಿಲ್ಲೆ. ಇಂದಿನ ಪರಿಸ್ಥಿತಿಯು ರಾಜಕೀಯ ಚದುರಂಗದಾಟದಲ್ಲಿ ಚುನಾವಣೆಯಲ್ಲಿ ಗೆಲ್ಲಿಸುವ ಸೋಲಿಸುವ ಪಗಡೆಯಾಟದಂತಾಗಿದೆ ಎಂದು ವಿಷಾದಿಸಿದರು. ಇಂತಹ ಪರಿಸ್ಥಿತಿಯಲ್ಲಿ, ಅಲ್ಪಮಾನವರಾದ ವ್ಯಕ್ತಿಗಳನ್ನು ವಿಶ್ವಮಾನವರನ್ನಾಗಿ ಮಾಡುವುದೇ ಧರ್ಮ, ಸಾಹಿತ್ಯ, ಸಂಸ್ಕೃತಿಗಳ ಗುರಿಯಾಗಬೇಕು ಎಂದ ಕುವೆಂಪು ಅವರ ವಿಚಾರಗಳ ಆಧಾರದಲ್ಲಿ ಸಮಾಜದ ಸೌಹಾರ್ದತೆಯ ರಕ್ಷಣೆಗೆ ಮುಂದಾಗೋಣ ಎಂದು ಡಾ.ಕೆ. ಮರುಳಸಿದ್ದಪ್ಪ ಹೇಳಿದರು.

ಬುಡಮೇಲು ಶಕ್ತಿಗಳು ಬಲವಾಗಿವೆ

ಸಾಹಿತಿ ಮೂಡ್ನಕೂಡು ಚಿನ್ನಸ್ವಾಮಿಯವರು ಮಾತನಾಡಿ, ಮಹಾತ್ಮಗಾಂಧಿ ಸೌಹಾರ್ದತೆಯ ರೂಪಕ. ನೈತಿಕ ರಾಜಕಾರಣಕ್ಕೆ ಮಾದರಿ. ಇಂದು ರಾಜಕಾರಣದಲ್ಲಿ ಬುಡಮೇಲು ಮಾಡುವ ಶಕ್ತಿಗಳು ಹೆಚ್ಚಾಗಿವೆ. ದೇಶಭಕ್ತಿಯನ್ನು, ಹುಸಿ ದೈವಭಕ್ತಿಯನ್ನಾಗಿ ಪರಿವರ್ತಿಸಿ ಜನರ ಮನಸ್ಸನ್ನು ಕೆಡಿಸಿ ರಾಜಕಾರಣಕ್ಕೆ ಸೆಳೆದುಕೊಳ್ಳುತ್ತಿರುವುದರಿಂದ ಸಮಾಜಕ್ಕೆ ತುಂಬಾ ಕೆಡುಕಾಗಲಿದೆ. ಅವರು ಗಾಂಧೀಜಿಯವರ ಇತಿಹಾಸವನ್ನು ಕೆಡಿಸುತ್ತಿದ್ದಾರೆ. ಗಾಂಧಿ ಹಂತಕರ ವೈಭವೀಕರಣ, ಪೂಜೆ ನಡೆಸಲಾಗುತ್ತಿದೆ ಎಂದು ವಿಷಾದಿಸಿದರು. ಸಾಹಿತಿ ಡಾ. ವಸುಂಧರ ಭೂಪತಿಯವರು ತಮ್ಮ ಸೌಹಾರ್ದ ಕವನವನ್ನು ಓದಿದರು.

'ವಸುದೈವ ಕುಟುಂಬಕಂ'–ವಂಚನೆಯ ಮಾತು

ಹಿರಿಯ ಚಿಂತಕ ಡಾ.ಜಿ. ರಾಮಕೃಷ್ಣ ಅವರು ಮಾತನಾಡಿ ವಿಷಪೂರಿತ ವಾತಾವರಣವನ್ನು ಎದುರಿಸುವುದು ಹೇಗೆ ಎಂಬ ಬಗೆಗೆ ಎಲ್ಲರೂ ಗಂಭೀರವಾಗಿ ಯೋಚಿಸಬೇಕಿದೆ. ನಮ್ಮ ವಿದೇಶಾಂಗ ನೀತಿಯ ಸಂದರ್ಭದಲ್ಲಿ 'ವಸುದೈವ ಕುಟುಂಬಕಂ' ಎಂಬ ಮಾತು ಉಪನಿಷತ್ತಿನಲ್ಲಿ ಬಂದಿದೆ ಎಂದು ಪ್ರಚಾರ ಮಾಡಲಾಗುತ್ತಿದೆ. ಅ ಮಾತು ಉಪನಿಷತ್ತಿನಲ್ಲಿ ಇರುವುದಲ್ಲ, ಬದಲಿಗೆ 'ಹಿತೋಪದೇಶ'ದಲ್ಲಿರುವುದು. ಇತರ ಪ್ರಾಣಿಗಳಿಗೆ ವಂಚನೆ ಮಾಡಲು ಬಯಸುವ ಪ್ರಾಣಿಯೊಂದು ವಂಚಕತನದಿಂದ ಹೇಳುವ ಮಾತದು. ಪ್ರಸ್ತುತ ಸಂದರ್ಭಕ್ಕೆ ಈ ಉದಾಹರಣೆ ಅನ್ವರ್ಥವಾಗಿದೆ ಎಂದು ಹೇಳಿದರು. ನಮ್ಮ ಸಮಾಜವು 10 ನೇ ಶತಮಾನಕ್ಕೆ ಹಿಂತಿರುಗುತ್ತದೋ ಅಥವಾ 22 ನೇ ಶತಮಾನದ ಕಡೆಗೆ ಮುಂದುವರಿಯುತ್ತದೆಯೋ ಎಂಬ ಪ್ರಶ್ನೆ ಈಗ ಎದುರಾಗಿದೆ. ಇಂತಹ ಸನ್ನಿವೇಶದಲ್ಲಿ ಎಲ್ಲರೂ ಸಾಮೂಹಿಕ ಹೋರಾಟದಲ್ಲಿ ತೊಡಗೋಣ ಎಂದರು.

<u>ನಮ್ಮ ಸಮಾಜವು ಹತ್ತನೇ ಶತಮಾನಕ್ಕೆ ಹಿಂತಿರುಗುತ್ತದೋ ಅಥವಾ ಇಪ್ಪತ್ತೆರಡನೇ ಶತಮಾನದ ಕಡೆಗೆ ಮುಂದುವರಿಯುತ್ತದೆಯೋ? –ಬೆಂಗಳೂರು ಸೌಹಾರ್ದ ಸಭೆಯಲ್ಲಿ ಡಾ.ಜಿ. ರಾಮಕೃಷ್ಣ ಪ್ರಶ್ನೆ.</u>

ಕತ್ತಲಲ್ಲಿ ಬರಿಗಾಲಿನಲ್ಲಿ ಕಂದೀಲು ಹಿಡಿದು ನಡೆದವರು ಗಾಂಧಿ

ಭಾರತದ ವಿಭಜನೆಯ ಸಂದರ್ಭದಲ್ಲಿ ಪಾಕಿಸ್ತಾನ, ಭಾರತಗಳಲ್ಲಿ ಭೀಕರ ಹತ್ಯಾಕಾಂಡಗಳು ನಡೆದಿದ್ದವು. ಕೊಲ್ಕೊತ್ತಾದಲ್ಲೂ ರಕ್ತಪಾತ ನಡೆದಿತ್ತು. ಅಂತಹ ಸನ್ನಿವೇಶದಲ್ಲಿ ಕಲ್ಲುಮುಳ್ಳುಗಳ ದಾರಿಯಲ್ಲಿ ಕತ್ತಲಲ್ಲಿ ಬರಿಗಾಲಿನಲ್ಲಿ ಕಂದೀಲು ಹಿಡಿದು ನಡೆದು ನೊಂದವರಿಗೆ ಧೈರ್ಯ ತುಂಬಿದವರು ಮಹಾತ್ಮಗಾಂಧಿ ಎಂದ ಸಾಹಿತಿ ಕೆ.ಷರೀಫಾ ಅವರು, ಇಂದಿನ ಮಾಧ್ಯಮಗಳಲ್ಲಿ ಅನಗತ್ಯ ವಿಚಾರಗಳನ್ನು ತೋರಿಸಲಾಗುತ್ತದೆ. ಸೌಹಾರ್ದತೆಯ ವಿಚಾರಗಳನ್ನು ಯಾಕೆ ತೋರಿಸಲಾಗುವುದಿಲ್ಲ ಎಂದು ಪ್ರಶ್ನಿಸಿದರು. ಕಲಾವಿದ ನಿರ್ದೇಶಕ ಬಿ. ಸುರೇಶ್ ಅವರು ಮಾತನಾಡಿದರು. ಪಾಕಿಸ್ತಾನದ ಉರ್ದು ಕವಿಯತ್ರಿಯೊಬ್ಬರ 'ಹೋ ಹಾಗಾದರೆ ನೀವು ನಮ್ಮ ಹಾಗೆ' ಎಂಬ ಭಾವಾನುವಾದಿತ ಕವನವನ್ನೂ ಓದಿ ಸೌಹಾರ್ದ ಸಂದೇಶ ನೀಡಿದರು. ಫಾದರ್ ಡಾ. ಮನೋಹರ ಚಂದ್ರ ಪ್ರಸಾದ್ ಅವರು ಮಾತನಾಡಿ, ದೇಶದಲ್ಲಿ ದಾರ್ಮಿಕ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳು ನಡೆಯುತ್ತಿವೆ. ಅಲ್ಪಸಂಖ್ಯಾತರು ಆತಂಕದಲ್ಲಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಮತಧರ್ಮದ ಅಧಾರದ ರಾಜಕಾರಣ ದೇಶವನ್ನು ಒಡೆಯುವ ಕೆಲಸ

ಕರ್ನಾಟಕ ದಲಿತ ಸಂಘರ್ಷ ಸಮಿತಿ(ಭೀಮವಾದ)ದ ರಾಜ್ಯ ಸಂಚಾಲಕರಾದ ಡಾ. ಆರ್. ಮೋಹನ್ ರಾಜ್ ಅವರು ಮಾತನಾಡಿ, ಧರ್ಮದ ಹೆಸರಿನಲ್ಲಿ ಮನುಷ್ಯರನ್ನು ಬಲಿಕೊಡುವ ನೀತಿ ಅತ್ಯಂತ ದುರದೃಷ್ಟಕರ. ಮತಧರ್ಮದ ಅಧಾರದ ರಾಜಕಾರಣವನ್ನು ಮಾಡುತ್ತಾ ಇಂದು ದೇಶವನ್ನು ಒಡೆಯುವ ಕೆಲಸ ಮಾಡಲಾಗುತ್ತಿದೆ. ನಮ್ಮ ಸಂವಿಧಾನ ಉಳಿದರೆ ಮಾತ್ರ ದೇಶ ಉಳಿಯುತ್ತದೆ. ಇಲ್ಲವಾದರೆ ನಮ್ಮ ಸಮಾಜ ಮತ್ತೆ ಚಾತುರ್ವರ್ಣ ಮತ್ತು ವರ್ಣಾಶ್ರಮ ಧರ್ಮದ ಕಡೆಗೆ ಹೋಗುತ್ತದೆ ಎಂದು ಎಚ್ಚರಿಸಿದರು.

ಕವಿ, ಪ್ರಾಧ್ಯಾಪಕ ಹುಲಿಕುಂಟೆ ಮೂರ್ತಿಯವರು ಮಾತನಾಡಿ, ಇಡೀ ದೇಶಕ್ಕೆ ಕಾರುಣ್ಯವನ್ನು ಕುರಿತು ಪಾಠ ಮಾಡುವ ರಾಜ್ಯ ಕರ್ನಾಟಕ. ಇದು ನೀರಿನ ನೆಲ, ಇಲ್ಲಿಗೆ ಬೆಂಕಿ ಆಗುವುದಿಲ್ಲ. ನೀರಿನ ಸಂಸ್ಕೃತಿಯನ್ನು ನಾವು ಉಳಿಸಿಕೊಳ್ಳಬೇಕು, ಬೆಳೆಯುತ್ತಿರುವ ಫ್ಯಾಸಿಸ್ಟ್ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕು ಎಂದರು.

ಜಾತ್ಯತೀತ ರಾಷ್ಟ್ರವನ್ನು ಉಳಿಸಿಕೊಳ್ಳುತ್ತೇವೆ

ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಉಪಾಧ್ಯಕ್ಷರಾದ ಯು. ಬಸವರಾಜ್ ಅವರು ಮಾತನಾಡಿ ಭೂತಕಾಲವು ವರ್ತಮಾನದ ಮೇಲೆ ನರ್ತನ ಮಾಡುವ ಕಾಲದಲ್ಲಿ ನಾವು ಸೌಹಾರ್ದತೆಯ ರಕ್ಷಣೆಗಾಗಿ ಕೆಲಸ ಮಾಡಬೇಕಿದೆ. ಭಾರತವನ್ನು ಧಾರ್ಮಿಕ ರಾಷ್ಟ್ರವನ್ನಾಗಿ ಮಾಡಲು, ಹಿಂದೂ ರಾಷ್ಟ್ರವನ್ನಾಗಿ ಮಾಡಲು ಹೊರಟಿದ್ದಾರೆ. ಅದಕ್ಕೆ ಅವಕಾಶ ನೀಡಲಾಗದು. ಭಾರತವನ್ನು ಜಾತ್ಯತೀತ ರಾಷ್ಟ್ರವಾಗಿ ಉಳಿಸಿಕೊಳ್ಳುತ್ತೇವೆ ಎಂದರು.

ಬಸವಣ್ಣ, ಕನಕ, ಪುರಂದರ, ಷರೀಫ ಮುಖ್ಯವಾಗಬೇಕು

ಸಾಹಿತಿ ಕುಂ. ವೀರಭದ್ರಪ್ಪ ಮಾತನಾಡಿ ಈ ದೇಶವನ್ನು ಹಿಂದೂ ದೇಶವನ್ನಾಗಿ ಮಾಡಲು ಸಾಧ್ಯವಿಲ್ಲ. ಇಲ್ಲಿ ನೂರೆಂಟು ಜಾತಿ, ಧರ್ಮಗಳು ಇವೆ. ಶೇ. 1, ಅಥವಾ 1.5 ರಷ್ಟು ಇರುವ ಜನರು ದೇಶವನ್ನು ಹಿಂದೂ ರಾಷ್ಟ್ರ ಮಾಡಲು ಪ್ರಯತ್ನಿಸುತ್ತಿದ್ದಾರೆ. ಉತ್ತರ ಕರ್ನಾಟಕ, ಮಂಗಳೂರುಗಳಲ್ಲಿ ಸೌಹಾರ್ದತೆ ಜೀವಂತವಾಗಿರುವ ಸಾಮಾಜಿಕ ಗುಣ. ಬಲಿ, ನರಕಾಸುರರು ನಮ್ಮ ಪೂರ್ವಿಕರು. ಇಲ್ಲಿರುವ ಬಸವಣ್ಣ, ಕನಕ, ಪುರಂದರ, ಷರೀಫ ನಮಗೆ ಮುಖ್ಯವಾಗಬೇಕು ಎಂದರು.

ಧರ್ಮ–ರಾಜಕಾರಣ ಬೆರೆಸುವುದು ಸಂವಿಧಾನ ವಿರೋಧಿ, ಅಪಾಯಕಾರಿ

ಸಭೆಯ ಸಮಾರೋಪ ಮಾಡಿ ಮಾತನಾಡಿದ ನ್ಯಾಯಮೂರ್ತಿ ವಿ. ಗೋಪಾಲಗೌಡ ಅವರು ಮಾತನಾಡಿ, ಧರ್ಮವನ್ನು ರಾಜಕೀಯದಲ್ಲಿ ಬೆರೆಸುವುದು ಸಂವಿಧಾನ ವಿರೋಧಿ. ಅಪಾಯಕಾರಿ. ಇಂದು ದೇಶದ ಪ್ರಜಾತಂತ್ರವು ಅಧಃಪತನದ ಕಡೆಗೆ ಹೋಗುತ್ತಿದೆ. ಈ ಸಂದರ್ಭದಲ್ಲಿ ಎಲ್ಲ ಜಾತ್ಯತೀತ ಪಕ್ಷಗಳು, ಶಕ್ತಿಗಳು ಒಂದಾಗಿ ನಗರ ಪ್ರದೇಶಗಳಲ್ಲಿ ಮಾತ್ರವಲ್ಲದೇ, ಗ್ರಾಮಾಂತರ ಪ್ರದೇಶಗಳಲ್ಲಿಯೂ ಜನರಿಗೆ ತಿಳುವಳಿಕೆ ನೀಡುವ ಕೆಲಸವನ್ನು ಮಾಡಬೇಕು ಎಂದರು.

ಆರಂಭದಲ್ಲಿ ಪ್ರಾಸ್ತಾವಿಕ ವಾಗಿ ಮಾತನಾಡಿದ ಸೌಹಾರ್ದ ಕರ್ನಾಟಕ ಪುಟ 10 ಕ್ಕೆ



ನಮ್ಮ ಸಮಾಜವು ಹತ್ತನೇ ಶತಮಾನಕ್ಕೆ... ಪುಟ 9 ರಿಂದ

ದ ಸಂಯೋಜಕರಲ್ಲೊಬ್ಬರಾದ ಡಾ.ಎಸ್. ವೈ.ಗುರುಶಾಂತ್ ರವರು 'ರಾಜ್ಯದಾದ್ಯಂತ ನಡೆದಿರುವ ಮಾನವ ಸರಪಳಿ ಕಾರ್ಯಕ್ರಮವು ಬೆಂಗಳೂರಿನಲ್ಲಿಯೇ ಸುಮಾರು 18 ಕಡೆಗಳಲ್ಲಿ ಸ್ಥಳೀಯವಾಗಿ ಯಶಸ್ವಿಯಾಗಿದೆ. ಇದು ರಾಜಧಾನಿಯಲ್ಲಿ ಕೇಂದ್ರಿತ ಪ್ರಮುಖ ಕಾರ್ಯಕ್ರಮ. ರಾಜ್ಯದಾದ್ಯಂತ 100 ಕ್ಕೂ ಹೆಚ್ಚಿನ ಕಡೆ ಆದ ವರದಿಗಳು ತಲುಪುತ್ತಿವೆ. ಮಾನವ ಸರಪಳಿ ಅಲ್ಲದೇ ವೈವಿಧ್ಯಮಯ ಕಾರ್ಯಕ್ರಮಗಳು ಜರುಗಿವೆ ಎಂದು ಇಲ್ಲಿಯವರೆಗೆ ನಡೆದ ಪ್ರಕ್ರಿಯೆ, ಪ್ರಯತ್ನಗಳನ್ನು ವಿವರಿಸಿದರು. ಕಳೆದ ಆರೇಳು ವರ್ಷಗಳಿಂದ ನಡೆಯುತ್ತಿರುವ ಸೌಹಾರ್ದ ಕರ್ನಾಟಕದ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಬಲಗೊಳಿಸಬೇಕಾದ ಅಗತ್ಯವಿದ್ದು ಸಾಹಿತಿಗಳು, ಚಿಂತಕರು, ನಾನಾ ವಿಭಾಗಗಳು ಜನರು, ವಿವಿಧ ಪ್ರಗತಿಪರ ಸಂಘಟನೆಗಳು, ಜನ ಚಳುವಳಿಗಳು ಮುಂದಿನ ದಿನಗಳಲ್ಲಿ ಸೌಹಾರ್ದ ಪರ ಕೆಲಸಗಳಲ್ಲಿ ಮತ್ತಷ್ಟು ವ್ಯಾಪಕವಾಗಿ ತೊಡಗಬೇಕಾದ ಅಗತ್ಯವಿದ್ದು ಮುಂದಿನ ಕಾರ್ಯಕ್ರಮಗಳಲ್ಲಿ ಎಲ್ಲರೂ ಹೆಚ್ಚು ಹೆಚ್ಚು ಭಾಗಿಗಳಾಗಬೇಕು ಎಂದು ವಿನಂತಿಸಿದರು. ಸೌಹಾರ್ದ ಕರ್ನಾಟಕದ ಸಂಯೋಜಕರುಗಳಲ್ಲಿ ಒಬ್ಬರು ಹಾಗೂ ದಲಿತ ಹಕ್ಕು ಸಮಿತಿಯ ನಾಯಕರಾದ ಬಿ. ರಾಜಶೇಖರ ಮೂರ್ತಿಯವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

ದೀಪದ ಹುಳುಗಳು ದಾರಿಯ ತೋರಲಿ–ಹಾಡುಗಳು

ದೀಪದ ಹುಳುಗಳು ದಾರಿಯ ತೋರಲಿ
ಕಗ್ಗತ್ತಲ ಈ ಕಾಡಿನಲ್ಲಿ,
ಪಾರಿವಾಳಗಳು ಪುಳಕದಿ ಹಾರಲಿ
ಭಯದಲಿ ನಲುಗಿದ ಬಾನಿನಲಿ

ಎಂಬ ಹಾಡು ಸೇರಿದಂತೆ ಇನ್ನು ಹಲವು ಹಾಡುಗಳನ್ನು ಹಾಡುಗಾರ ಚಿಂತನ್ ಹಾಡಿದರು.

ನಾನಾ ಕ್ಷೇತ್ರಗಳ ಗಣ್ಯರು

ನಾನಾ ಕ್ಷೇತ್ರಗಳ ಗಣ್ಯರು ಈ ಸೌಹಾರ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್, ಹಿರಿಯ ಗಾಂಧೀವಾದಿ ಇ.ಪಿ. ಮೆನನ್, ವಿಧಾನ ಪರಿಷತ್ತಿನ ಮುಖ್ಯಸಚೇತಕ ಸಲೀಂ ಅಹಮದ್, ಹಿರಿಯ ಪತ್ರಕರ್ತೆ ಡಾ. ವಿಜಯಾ, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ಉಪಕುಲಪತಿಗಳಾದ ಜಾಫೆಟ್, ಆರ್ಥಿಕ ತಜ್ಞರಾದ ಡಾ.ಟಿ.ಆರ್. ಚಂದ್ರಶೇಖರ್, ಗಾಂಧಿಭವನದ ಪ್ರಮುಖರಾದ ಇಂದಿರಾ ಕೃಷ್ಣಪ್ಪ, ವಿಶುಕುಮಾರ್, ವಿಜ್ಞಾನಿಗಳಾದ ಕಮಲ್ ಲೊಡಾಯ, ಪ್ರೊ. ಪ್ರಜ್ವಲ್ ಶಾಸ್ತ್ರಿ, ಕರ್ನಾಟಕ ಮಹಿಳಾ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ಸಬೀಹಾ ಭೂಮಿಗೌಡ, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್. ಎಲ್. ಪುಷ್ಪಾ, ಪ್ರಾಧ್ಯಾಪಕರಾದ ಕೆ.ವೈ.ನಾರಾಯಣ ಸ್ವಾಮಿ, ಹಂಗು ರಾಜೇಶ್, ರವಿಕುಮಾರ್ ಬಾಗಿ, ಚಿಂತಕ ಶಿವಸುಂದರ್, ನಗರಗೆರೆ ರಮೇಶ್, ರಂಗಭೂಮಿಯ ಕಲಾವಿದ ನಾಗರಾಜಮೂರ್ತಿ, ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯ ಸೈಯದ್ ಷಫೀವುಲ್ಲಾ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸರಕಾರಿ ನೌಕರರ ಸಮನ್ವ ಸಮಿತಿಯ ಮುಖಂಡರಾದ ಶಿವಶಂಕರ್, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಪ್ರಕಾಶ್ ಮೂರ್ತಿ, ಮಾದಿಗ ದಂಡೋರ ಸಂಘಟನೆ ಮುಖಂಡರು, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಕಾರ್ಯದರ್ಶಿ ಟಿ.ಯಶವಂತ್, ಸಿ.ಐ.ಟಿ.ಯು. ರಾಜ್ಯ ಅಧ್ಯಕ್ಷರಾದ ಎಸ್. ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕಾರ್ಯದರ್ಶಿ ಕೆ. ಮಹಾಂತೇಶ್, ಡಾ. ಕಾಶೀನಾಥ ಅಂಬಲಗಿ, ಮಲ್ಲಿಕಾರ್ಜುನ ಕಡಕೋಳ, ಕರ್ನಾಟಕ ಜನಶಕ್ತಿಯ ಮಲ್ಲಿಗೆ, ಬಹುತ್ವ ಕರ್ನಾಟಕದ ವಿನಯ್ ಶ್ರೀನಿವಾಸ್, ಗ್ರಾಮ ಭಾರತದ ರಾಜಶೇಖರ್ ಕಿಗ್ಗ, ರಾಗಿಕಣದ ಸನತ್ ಕುಮಾರ್, ಶ್ಯಾಮಲಾದೇವಿ, ಎದ್ದೇಳು ಕರ್ನಾಟಕದ ನೂರ್ ಶ್ರೀಧರ್, ರಾಜ್ಯ ರೈತ ಸಂಘದ ಮುಖಂಡರಾದ ವೀರಸಂಗಯ್ಯ, ಶಿಕ್ಷಣ ತಜ್ಞರಾದ ಶ್ರೀಪಾದ ಭಟ್, ಅಖಿಲ ಭಾರತ ವಿಮಾ ನೌಕರರ ಸಂಘದ ಮುಖಂಡರಾದ ಅಮಾನುಲ್ಲಾಖಾನ್, ಪ್ರಮುಖ ನಾಯಕರಾದ ಕೆ.ಎಸ್.ವಿಮಲ, ಕೆ.ಎಸ್.ಲಕ್ಷ್ಮಿ, ಟಿ. ಸುರೇಂದ್ರ ರಾವ್, ಎನ್.ಕೆ. ವಸಂತ ರಾಜ್, ಅಖಿಲ ಭಾರತ ವಕೀಲರ ಸಂಘದ ಮುಖಂಡರಾದ ಟಿ.ಎನ್. ಶಿವಾರೆಡ್ಡಿ, ರಾಮಚಂದ್ರರೆಡ್ಡಿ, ಬರಹಗಾರರಾದ ಡಾ.ಬಿ.ಆರ್. ಮಂಜುನಾಥ್, ಡಾ.ಜಯಲಕ್ಷ್ಮಿ, ಅಲ್ ಇಂಡಿಯಾ ಪೀಪಲ್ಸ್ ಫೋರಮ್‌ನ ಮಣಿ, ಎ.ಐ.ಡಿ.ವೈ.ಓ. ಸಂಘಟನೆಯ ಸುಜ್ಞಾನ ಮೂರ್ತಿ, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಭೀಮನಗೌಡ ಸುಂಕೇಶ್ವರಹಾಳ್ ಸೇರಿದಂತೆ ವಕೀಲರು, ಪ್ರಾಧ್ಯಾಪಕರು, ಉಪನ್ಯಾಸಕರು, ಅಂಗನವಾಡಿ ನೌಕರರು, ವಿಮಾನೌಕರರು, ಆಟೋ ಚಾಲಕರು, ಐ.ಟಿ. ಕ್ಷೇತ್ರದ ಕಾರ್ಮಿಕ ಸಂಘಟನೆಯ ಮುಖಂಡರು, ಕಾರ್ಯಕರ್ತರು, ದಲಿತ ಚಳುವಳಿಯ ಮುಖಂಡರು, ವಿದ್ಯಾರ್ಥಿ–ಯುವಜನ ಸಂಘಟನೆಗಳ ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಸತತ 10ನೇ ರೈತ–ವಿರೋಧಿ ಬಜೆಟ್... ಪುಟ 2 ರಿಂದ

ವಿಧಾನಗಳನ್ನು ರಾಷ್ಟ್ರವಾದದ ಕಥನದ ಒಟ್ಟಾರೆ ಚೌಕಟ್ಟಿನಲ್ಲಿ ಮರೆಮಾಡಲು ಪ್ರಯತ್ನಿಸುತ್ತಿದೆ ಎಂದು ಹೇಳಿದೆ.

ಬಡವರ ದುಃಸ್ಥಿತಿಯ ಬಗ್ಗೆ ಸಂವೇದನಾಶೂನ್ಯತೆ

ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್‌ನಲ್ಲಿ ಗ್ರಾಮೀಣಾಭಿವೃದ್ಧಿ, ಮನರೇಗ, ಗ್ರಾಮೀಣ ಉದ್ಯೋಗ, ಪ್ರಧಾನ ಮಂತ್ರಿ ಕೃಷಿ ನೀರಾವರಿ ಯೋಜನೆ, ಸಹಕಾರ, ಆಹಾರ ಸಂಗ್ರಹಣೆ ಮತ್ತು ಉಗ್ರಾಣ, ತೋಟಗಳು, ಬೆಳೆ ಪಾಲನೆ, ಪ್ರವಾಹ ನಿಯಂತ್ರಣ ಮತ್ತು ಒಳಚರಂಡಿ, ಭೂಸುಧಾರಣೆ, ರಸಗೊಬ್ಬರ ಸಬ್ಸಿಡಿ, ಆಹಾರ ಸಬ್ಸಿಡಿ, ಡೈರಿ ಅಭಿವೃದ್ಧಿ, ಮಣ್ಣು ಮತ್ತು ನೀರಿನ ಸಂರಕ್ಷಣೆ, ನೀರಾವರಿ, ಪೋಷಣೆ, ಗ್ರಾಮೀಣ ರಸ್ತೆಗಳು, ವಸತಿ, ಶಿಕ್ಷಣ ಮತ್ತು ಆರೋಗ್ಯ ಇತ್ಯಾದಿಗಳಲ್ಲಿ ಭಾರಿ ಕಡಿತವನ್ನು ತೋರಿಸಲಾಗಿದೆ.. ಮಹಿಳೆಯರು ಮತ್ತು ಮಕ್ಕಳಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಂಪನ್ಮೂಲಗಳ ಹಂಚಿಕೆಯನ್ನು ಸಹ ತೀವ್ರವಾಗಿ ಕಡಿತಗೊಳಿಸಲಾಗಿದೆ. ಸಿ2+50% ಸೂತ್ರದಂತೆ ಕನಿಷ್ಠ ಬೆಂಬಲ ಬೆಲೆಗಳನ್ನು ಖಾತ್ರಿಪಡಿಸಬೇಕೆಂಬ ರೈತರ ದೀರ್ಘಕಾಲದ ಬೇಡಿಕೆಯನ್ನು ಖಾತ್ರಿಪಡಿಸಲು ಯಾವುದೇ ಹಂಚಿಕೆಯಾಗಿಲ್ಲ.

2024–25ರಲ್ಲಿ ರಸಗೊಬ್ಬರ ಸಬ್ಸಿಡಿಗೆ ರೂ. 2022–23ರಲ್ಲಿ ವಾಸ್ತವಿಕ ವೆಚ್ಚಕ್ಕಿಂತ 87339 ಕೋಟಿ ರೂ. ಕಡಿಮೆಯಾಗಿದೆ, ಆಹಾರ ಸಬ್ಸಿಡಿಗೆ 2022–23 ರಲ್ಲಿನ ವಾಸ್ತವಿಕ ವೆಚ್ಚಕ್ಕಿಂತ 67552 ಕೋಟಿ ರೂ. ಕಡಿಮೆಯಾಗಿದೆ. ಇದು ವರ್ಷದಿಂದ ವರ್ಷಕ್ಕೆ, ಪ್ರಮುಖ ಕ್ಷೇತ್ರಗಳಾದ ರಸಗೊಬ್ಬರ ಮತ್ತು ಆಹಾರ ಸಬ್ಸಿಡಿಗಳು ಮತ್ತು ಮನರೇಗ ದಂತಹ ಪ್ರಮುಖ ಯೋಜನೆಗಳಿಗೆ, ನಿರ್ಣಾಯಕ ಕ್ಷೇತ್ರಗಳಿಗೆ ಹಂಚಿಕೆಗಳನ್ನು ಬೃಹತ್ ಪ್ರಮಾಣದಲ್ಲಿ ಕಡಿತಗೊಳಿಸುವ ಸರ್ಕಾರದ ಉದ್ದೇಶವನ್ನು ಬಿಂಬಿಸುತ್ತಿದ್ದು, ಇದರಲ್ಲಿ ಮೋದಿ ಸರ್ಕಾರದ ರೈತ ವಿರೋಧಿ ಧೋರಣೆಯನ್ನು ಕಾಣಬಹುದಾಗಿದೆ. ವ್ಯಾಪಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಈ ಸಂವೇದನಾಶೂನ್ಯತೆ ಬಡವರ ದುಃಸ್ಥಿತಿಯ ಬಗ್ಗೆ ಈ ಸರಕಾರದ ನಿರಾಸಕ್ತಿಯನ್ನು ಬಹಿರಂಗಪಡಿಸುತ್ತದೆ. ಈ ಬಿಜೆಪಿ ಸರ್ಕಾರದ ಅಡಿಯಲ್ಲಿ ಪ್ರತಿ ವರ್ಷವೂ ತೀವ್ರ ಸಂಕಷ್ಟದ ವಾಸ್ತವಿಕತೆಯಿಂದಾಗಿ ಹಂಚಿಕೆಯನ್ನು ಹೆಚ್ಚಿಸಬೇಕಾಗಿ ಬಂದಿತ್ತು. ಬಜೆಟ್‌ನಲ್ಲಿ ಈ ಅಂಶವನ್ನು ಒಳಗೊಳ್ಳದಿರುವುದು ಅದರ ಬಡಜನ–ವಿರೋಧಿ ಸ್ವಭಾವವನ್ನು ಸೂಚಿಸುತ್ತದೆ ಎಂದು ಎಐಕೆಎಸ್ ಹೇಳಿದೆ.

'ಅಭಿವೃದ್ಧಿ' ರೈತರಿಗಲ್ಲ, ಅದಾನಿ ಅಂಬಾನಿಗಳಿಗೆ

ಸಾಂವಿಧಾನಿಕ ಒಕ್ಕೂಟತತ್ವದ ವಿರುದ್ಧ ಸುದೀರ್ಘ ಯುದ್ಧದ ಭಾಗವಾಗಿ ನಿಜಬೆಲೆಗಳಲ್ಲಿ ರಾಜ್ಯ ಸರ್ಕಾರಗಳಿಗೆ ಸಂಪನ್ಮೂಲಗಳ ವರ್ಗಾವಣೆಯಲ್ಲಿ ಇಳಿಕೆ ಮಾಡುತ್ತಿರುವುದು ಮತ್ತು ಅವುಗಳು ಸಾಲ ತರುವ ಮಿತಿಗಳಲ್ಲಿ ಕಡಿತಗಳು ದುಡಿಯುವ ಜನಗಳಿಗೆ ಪ್ರಯೋಜನಕಾರಿಯಾದ ಧೋರಣೆಗಳನ್ನು ಜಾರಿಗೊಳಿಸುವ ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ರಾಜ್ಯ ಸರ್ಕಾರಗಳ ಸಾಮರ್ಥ್ಯವನ್ನು ಗಮನಾರ್ಹವಾಗಿ ಕುಂಠಿತಗೊಳಿಸುತ್ತದೆ. ಇದನ್ನು ದೊಡ್ಡ ಉದ್ಯಮ ಸಮೂಹಗಳಿಗೆ 'ಸುಗಮ ವ್ಯಾಪಾರ"ದ ಹೆಸರಿನಲ್ಲಿ ದುಡಿಯುವ ಜನರನ್ನು ಲೂಟಿ ಮಾಡಲು ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಮೂಲಕ ಮತ್ತು ಗುತ್ತೇದಾರಿಗಳು ಮತ್ತು ಸೂಪರ್ ಶ್ರೀಮಂತರಿಗೆ ಅವರ ಸಂಪತ್ತಿಗೆ ಅನುಸಾರವಾಗಿ ತೆರಿಗೆ ವಿಧಿಸಲು ನಿರಾಕರಿಸುವ ಮೂಲಕ ನೀಡಲಾಗುತ್ತಿರುವ ಉದಾರ ಬಕ್ಷೀಸುಗಳೊಂದಿಗೆ ಹೋಲಿಸಿ ನೋಡಬಹುದು.

ಹಣಕಾಸು ಸಚಿವರು ಎಫ್‌ಡಿಐ ಇತ್ಯಾದಿ ರೂಪದಲ್ಲಿ ಹಣಕಾಸಿನ ಅಡೆತಡೆಯಿಲ್ಲದ ಮಾರ್ಗದ ಭರವಸೆ ನೀಡುವ ಮೂಲಕ ಅಂತರರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಎನ್‌ಡಿಎ ಆಡಳಿತದ ನಿಷ್ಠೆಯನ್ನು ಪುನರುಚ್ಚರಿಸಿದ್ದಾರೆ. ಇದಕ್ಕೆ ರಾಷ್ಟ್ರವಾದದ ಬಣ್ಣವನ್ನು ನೀಡಲು ಮತ್ತು ಜನರನ್ನು ಮರುಳು ಮಾಡಲು ಅವರು ಎಫ್‌ಡಿಐ ಅಂದರೆ 'ಫಾರಿನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್ (ವಿದೇಶಿ ನೇರ ಹೂಡಿಕೆ) ಎಂಬುದರ ಬದಲು "ಫಸ್ಟ್ ಡೆವಲಪ್ ಇಂಡಿಯ'(ಮೊದಲು ಭಾರತದ ಅಭಿವೃದ್ಧಿ) ಎಂದು ನಿರ್ವಚಿಸಿದ್ದಾರೆ. ನಿಜ ಹೇಳಬೇಕೆಂದರೆ, ಇದು 'ಫಾಸ್ಟ್ ಡ್ರೈನ್ ಇಂಡಿಯಾ' ಅಂದರೆ ಬೇಗನೇ ಭಾರತವನ್ನು ಬರಿದಾಗಿಸುವ ಯೋಜನೆಯಾಗಿದೆ ಎಂದು ಎಐಕೆಎಸ್ ಮೂದಲಿಸಿದೆ.

ಸಂಗ್ರಹಣೆ, ಸಂಸ್ಕರಣೆ, ಮಾರುಕಟ್ಟೆ ಸೇರಿದಂತೆ ಕಟಾವಿನ ನಂತರದ ಚಟುವಟಿಕೆಗಳಲ್ಲಿ ಖಾಸಗಿ ಮತ್ತು ಸಾರ್ವಜನಿಕ ಹೂಡಿಕೆಯನ್ನು ಉತ್ತೇಜಿಸುವ ಪ್ರಸ್ತಾಪವು ಐತಿಹಾಸಿಕ ರೈತರ ಹೋರಾಟದ ನಂತರ ಹಿಂತೆಗೆದುಕೊಳ್ಳಲೇ ಬೇಕಾಗಿ ಬಂದ ಕರಾಳ ಕೃಷಿ ಕಾಯಿದೆಗಳನ್ನು ಮತ್ತು ದುರಾಸೆಯ ಕಾರ್ಪೊರೇಟ್‌ಗಳನ್ನು ಹಿಂಬಾಗಿಲಿನ ಮೂಲಕ ಮರಳಿ ತರುವ ಒಂದು ಲಜ್ಜೆಗೆಟ್ಟ ಪ್ರಯತ್ನವಾಗಿದೆ ಎಂದು ಎಐಕೆಎಸ್ ಬಲವಾಗಿ ಖಂಡಿಸಿದೆ.

ಮೋದಿ ಆಡಳಿತದ ದಿಕ್ಪಥ 'ಅಭಿವೃದ್ಧಿ' ಹೊಂದುವುದು ರೈತರಲ್ಲ, ಅದಾನಿ ಮತ್ತು ಅಂಬಾನಿಯಂತಹ ಅಂತರರಾಷ್ಟ್ರೀಯ ಹಣಕಾಸಿನ ನಿಷ್ಠಾವಂತ ಪಾಲುದಾರರು ಎಂಬುದನ್ನೇ ಸ್ಪಷ್ಟವಾಗಿ ಸೂಚಿಸುತ್ತದೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ ರೈತ ವಿರೋಧಿ, ಜನವಿರೋಧಿ ಬಜೆಟ್ ವಿರುದ್ಧ ಎದ್ದು ನಿಲ್ಲಬೇಕು, ಮತ್ತು ಫೆಬ್ರವರಿ 16 ರ ಗ್ರಾಮೀಣ ಭಾರತ್ ಬಂದ್ ಅನ್ನು ಬೃಹತ್ ಪ್ರಮಾಣದಲ್ಲಿ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದೆ.

ಭ್ರಷ್ಟಾಚಾರ ಸೂಚ್ಯಂಕದಲ್ಲಿ ಭಾರತಕ್ಕೆ 100ಕ್ಕೆ 39 ಅಂಕಗಳು ಶ್ರೇಯಾಂಕ ಪಟ್ಟಿಯಲ್ಲಿ 8 ಸ್ಥಾನ ಕುಸಿದ ಭಾರತ

ಚುಟುಕು

2023 ರ 'ಜಾಗತಿಕ ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕ'ವನ್ನು ಎನ್.ಜಿ.ಒ. ಟ್ರಾನ್ಸ್ಪರೆನ್ಸಿ ಇಂಟರ್ನ್ಯಾಷನಲ್ 2024ರ ಜನವರಿ 30ರಂದು ಬಿಡುಗಡೆ ಮಾಡಿದೆ. ಈ ಸೂಚ್ಯಂಕ ಪಟ್ಟಿಯಲ್ಲಿನ 180 ದೇಶಗಳಲ್ಲಿನ ಭ್ರಷ್ಟಾಚಾರವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಅವುಗಳಲ್ಲಿ ಭಾರತವು 93 ನೇ ಸ್ಥಾನದಲ್ಲಿದೆ. 2022 ಕ್ಕೆ ಹೋಲಿಸಿದರೆ, ಈ ಶ್ರೇಣಿಯು ಎಂಟು ಸ್ಥಾನ ಕುಸಿದಿದೆ. 2022ರಲ್ಲಿ ಭಾರತದ ರ್‍ಯಾಂಕ್ 85. ಮತ್ತು 2022ರಲ್ಲಿ 40ರಷ್ಟಿದ್ದ ಸೂಚ್ಯಂಕ ಕಳೆದ ವರ್ಷ 39ಕ್ಕೆ ಕುಸಿದಿದೆ.

ಯಾವುದೇ ಭ್ರಷ್ಟಾಚಾರವಿಲ್ಲದ ದೇಶಕ್ಕೆ ಇದು 100 ನೇ ಸ್ಥಾನವನ್ನು ನೀಡುತ್ತದೆ. ಭಾರತದೊಂದಿಗೆ ಮಾಲ್ಡೀವ್ಸ್, ಕಜಕಿಸ್ತಾನ್ ಮತ್ತು ಲೆಸೊಥೋ 93 ನೇ ರ್‍ಯಾಂಕ್ ಪಡೆದಿವೆ. ಭಾರತದಲ್ಲಿ ನಾಗರಿಕ ಸ್ವಾತಂತ್ರ್ಯಗಳು ಕಣ್ಮರೆಯಾಗುತ್ತಿವೆ ಮತ್ತು ದೂರಸಂಪರ್ಕ ಮಸೂದೆಯ ಅಂಗೀಕಾರದಿಂದ ಮೂಲಭೂತ ಹಕ್ಕುಗಳು ಗಂಭೀರವಾಗಿ ಉಲ್ಲಂಘನೆಯಾಗಿದೆ ಎಂದು ಅದು ತನ್ನ ವರದಿಯಲ್ಲಿ ವಿವರಿಸಿದೆ.

ಚುನಾವಣಾ ಬಾಂಡ್: 4 ವರ್ಷದಲ್ಲಿ ಬಿಜೆಪಿಗೆ ಬಂದ ಹಣ 9,200 ಕೋಟಿ

ಯಾರಿಂದ ಮತ್ತು ಎಷ್ಟು ಹಣ ಬಂದಿದೆ ಎಂದು ತಿಳಿಯುವ ಹಕ್ಕು ಸಾರ್ವಜನಿಕರಿಗಿಲ್ಲ!!

ಸಿ. ಸಿದ್ದಯ್ಯ



ಬಿಜೆಪಿ ಪಕ್ಷಕ್ಕೆ ಹರಿದು ಬರುತ್ತಿರುವ ಚುನಾವಣಾ ನಿಧಿ ಎಷ್ಟು? ಆ ನಿಧಿಯ ಮೂಲ ಯಾವುದು? ಬಿಜೆಪಿ ಒಂದೆಡೆ 'ಪಿಎಂ ಕೇರ್ ನಿಧಿ' ಹೆಸರಿನಲ್ಲಿ ಸಂಗ್ರಹಿಸಿದ ಹಣ ಮತ್ತು ಅದನ್ನು ಯಾವುದಕ್ಕೆ ಬಳಸಲಾಗುತ್ತದೆ ಎಂಬ ವಿವರಗಳನ್ನು ಸಾರ್ವಜನಿಕರಿಂದ ಮುಚ್ಚಿಡುತ್ತದೆ. ಮತ್ತೊಂದೆಡೆ, 'ಚುನಾವಾಣಾ ಬಾಂಡ್' ಗಳ ಮೂಲಕ ಪಕ್ಷದ ನಿಧಿಗೆ ಯಾವ ಮೂಲದಿಂದ ಮತ್ತು ಎಷ್ಟು ಹಣ ಬಂದಿದೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಸಲು ನಿರಾಕರಿಸುತ್ತಿದೆ. ದೇಣಿಗೆ ಪಡೆಯುವ ಹಕ್ಕು ರಾಜಕೀಯ ಪಕ್ಷಗಳಿಗಿದ್ದರೆ, ಅದನ್ನು ಯಾರು ಕೊಟ್ಟರು ಎಂದು ತಿಳಿಯುವ ಹಕ್ಕು ದೇಶದ ಜನರಿಗಿಲ್ಲವೇ? ಅದನ್ನು ನಿರಾಕರಿಸುವುದು ಮೋದಿ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನಡೆಯಲ್ಲವೇ? ಪಕ್ಷದ ಚುನಾವಣಾ ನಿಧಿಗೆ ಯಾರಿಂದ ಎಷ್ಟು ಹಣ ಬಂದಿದೆ ಎಂದು ಹೇಳುವುದರಲ್ಲಿ ತಪ್ಪೇನು? ಈ ಸತ್ಯವನ್ನು ಹೇಳಿದರೆ ಮೋದಿ ಸರ್ಕಾರದ ಬಂಡವಾಳಶಾಹಿ ದರೋಡೆ ಮತ್ತು ಭ್ರಷ್ಟಾಚಾರದ ಷಡ್ಯಂತ್ರದ ಸತ್ಯ ಬಯಲಾಗುತ್ತದೆ ಎಂಬ ಭಯ ಬಿಜೆಪಿಗಿದೆ.

ಮೋದಿ–9 ವರ್ಷಗಳು–ಭಾಗ–37

ನರೇಂದ್ರ ಮೋದಿ ಸರ್ಕಾರ ಜನವರಿ 2018 ರಲ್ಲಿ ಚುನಾವಣಾ ಬಾಂಡ್‌ಗಳನ್ನು ಜಾರಿಗೆ ತಂದಿತು. ಈ ಬಾಂಡ್‌ಗಳ ಹಿಂದಿನ ಪರಿಕಲ್ಪನೆಯು ರಾಜಕೀಯದಲ್ಲಿ ಕಪ್ಪು ಹಣದ ಪ್ರಭಾವವನ್ನು ಕಡಿಮೆ ಮಾಡುವುದು ಮತ್ತು ರಾಜಕೀಯ ಪಕ್ಷಗಳಿಗೆ ಕೊಡುಗೆ ನೀಡಲು ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಕಾನೂನು ಮತ್ತು ಪಾರದರ್ಶಕ ಕಾರ್ಯವಿಧಾನವನ್ನು ಒದಗಿಸುವುದು. ಒಟ್ಟಾರೆಯಾಗಿ, ದೇಶದಲ್ಲಿ ರಾಜಕೀಯ ನಿಧಿ ವ್ಯವಸ್ಥೆಯನ್ನು ಶುದ್ಧೀಕರಿಸಲು ಎಲೆಕ್ಟೋರಲ್ ಬಾಂಡ್‌ಗಳ ಯೋಜನೆಯನ್ನು ಸರ್ಕಾರವು ಅಧಿಸೂಚಿಸಿದೆ ಎಂದು ಹೇಳಲಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ನಿರ್ದಿಷ್ಟ ಶಾಖೆಗಳಲ್ಲಿ ಈ ಬಾಂಡ್‌ಗಳನ್ನು 1,000, 10,000, 1 ಲಕ್ಷ, 10 ಲಕ್ಷ ಮತ್ತು 1 ಕೋಟಿ ರೂಪಾಯಿ ಗುಣಕಗಳಲ್ಲಿ ಮಾರಾಟ ಮಾಡಲಾಗುತ್ತದೆ. ಬ್ಯಾಂಕ್ ಖಾತೆಯಿಂದ ಪಾವತಿ ಮಾಡುವ ಮೂಲಕ ಮಾತ್ರ ಚುನಾವಣಾ ಬಾಂಡ್ ಗಳನ್ನು ಖರೀದಿಸಬಹುದು. ಆದರೆ, ದಾನಿಗಳ ಹೆಸರು, ಯಾರಿಗೆ ದೇಣಿಗೆ ನೀಡಲಾಗುತ್ತದೆ ಎಂಬ ಮಾಹಿತಿಯನ್ನು ಬಾಂಡ್ ಗಳಲ್ಲಿ ನಮೂದಿಸಬೇಕಾಗಿಲ್ಲ. ಒಬ್ಬ ವ್ಯಕ್ತಿ ಅಥವಾ ಕಂಪನಿಯು ಖರೀದಿಸಬಹುದಾದ ಚುನಾವಣಾ ಬಾಂಡ್ ಗಳ ಸಂಖ್ಯೆಗೆ ಯಾವುದೇ ಮಿತಿಯೂ ಇಲ್ಲ ಎಂದು ಹಣಕಾಸು ಸಚಿವಾಲಯದ ಪತ್ರಿಕಾ ಪ್ರಕಟಣೆ ತಿಳಿಸಿದೆ. ಹೀಗಾಗಿ ಚುನಾವಣಾ ಬಾಂಡ್‌ಗಳನ್ನು ಅನಾಮಧೇಯ ಎಂದು ಹೇಳಲಾಗುತ್ತದೆ. ಯಾರು ಮತ್ತು ಎಷ್ಟು ಹಣವನ್ನು ರಾಜಕೀಯ ಪಕ್ಷಗಳಿಗೆ ಕೊಟ್ಟಿದ್ದಾರೆ ಎಂದು ತಿಳಿಯುವ ಹಕ್ಕು ಸಾರ್ವಜನಿಕರಿಗಿಲ್ಲ!! ಆದರೆ, ಕೋಟ್ಯಾಂತರ ರೂಪಾಯಿ ದೇಣಿಗೆ ನೀಡುವ ಕಾರ್ಪೊರೇಟ್ ದಾನಿಗಳಿಗೆ ಅನಾಮಧೇಯತೆಯನ್ನು ನೀಡುವ ಈ ಯೋಜನೆಯು, 2000 ರೂಪಾಯಿಗಳನ್ನು ನಗದು ರೂಪದಲ್ಲಿ ನೀಡುವ ನಾಗರಿಕರು ತಮ್ಮ ಹೆಸರನ್ನು ಬಹಿರಂಗಪಡಿಸಬೇಕು ಎನ್ನುತ್ತದೆ!!

ಕಾರ್ಪೊರೇಟ್ ಗಳಿಂದ ರಾಜಕೀಯ ದೇಣಿಗೆ

2016 ಮತ್ತು 2017 ರ ಹಣಕಾಸು ಕಾಯ್ದೆಯ ಮೂಲಕ ಎಲೆಕ್ಟೋರಲ್ ಬಾಂಡ್ ಯೋಜನೆಯನ್ನು ಪರಿಚಯಿಸಲು ಸರ್ಕಾರವು ನಾಲ್ಕು ಕಾಯಿದೆಗಳಿಗೆ ತಿದ್ದುಪಡಿಗಳನ್ನು ತಂದಿತು. ಈ ಕಾಯಿದೆಗಳೆಂದರೆ 2016 ಮತ್ತು 2017 ರ ಹಣಕಾಸು ಕಾಯಿದೆಗಳ ಮೂಲಕ ಜನರ ಪ್ರಾತಿನಿಧ್ಯ ಕಾಯಿದೆ–1951 (RPA), ಕಂಪನಿಗಳ ಕಾಯಿದೆ–2013, ಆದಾಯ ತೆರಿಗೆ ಕಾಯಿದೆ–1961, ಮತ್ತು ವಿದೇಶಿ ಕೊಡುಗೆಗಳ ನಿಯಂತ್ರಣ ಕಾಯಿದೆ–2010 (FCRA).

ಯೋಜನೆಯನ್ನು ಪರಿಚಯಿಸುವ ಮೊದಲು ರಾಜಕೀಯ ಪಕ್ಷಗಳು 20,000 ರೂ.ಗಿಂತ ಹೆಚ್ಚಿನ ಎಲ್ಲಾ ದೇಣಿಗೆಗಳನ್ನು ಸಾರ್ವಜನಿಕವಾಗಿ ನೀಡಬೇಕಾಗಿತ್ತು. ಅಲ್ಲದೆ, ಯಾವುದೇ ಕಾರ್ಪೊರೇಟ್ ಕಂಪನಿಯು ತಮ್ಮ ಒಟ್ಟು ಲಾಭದ ಶೇ. 7.5 ಅಥವಾ ಆದಾಯದ ಶೇ. 10 ಕ್ಕಿಂತ ಹೆಚ್ಚಿನ ಮೊತ್ತವನ್ನು ದೇಣಿಗೆ ನೀಡಲು ಅನುಮತಿ ಇರಲಿಲ್ಲ.

ಸುಪ್ರೀಂ ಕೋರ್ಟ್ ನಲ್ಲಿ ರಿಟ್ ಅರ್ಜಿ

ಚುನಾವಣಾ ಬಾಂಡ್ ಯೋಜನೆಯ ಸಾಂವಿಧಾನಿಕತೆ ಮತ್ತು ಕಾನೂನುಬದ್ಧತೆ ಮತ್ತು ಭಾರತೀಯ ಪ್ರಜಾಪ್ರಭುತ್ವಕ್ಕೆ ಒಡ್ಡುವ ಅಪಾಯದ ವಿರುದ್ಧ, ಹಿರಿಯ ವಕೀಲರಾದ ಪ್ರಶಾಂತ್ ಭೂಷಣ್, ನಿಜಾಮ್ ಪಾಷಾ, ಕಪಿಲ್ ಸಿಬಲ್ ಅವರು ಸುಪ್ರೀಂ ಕೋರ್ಟ್ ನಲ್ಲಿ ವಾದ ಮಾಡಿದ್ದಾರೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್, Common Cause ಹಾಗೂ CPI(M)–ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ)–2017ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ನಾಲ್ಕು ವರ್ಷಗಳ ನಂತರ ಐವರು ನ್ಯಾಯಾಧೀಶರ ಸಾಂವಿಧಾನಿಕ ಪೀಠವು ಅಕ್ಟೋಬರ್ 31 ರಂದು ವಿಚಾರಣೆಯನ್ನು ಆರಂಭಿಸಿದೆ.



ಸಿಪಿಐ(ಎಂ) ಪರ ವಾದ ಮಂಡಿಸಿದ ವಕೀಲ ಫರಸತ್ ಅವರು, ಚುನಾವಣಾ ಬಾಂಡ್‌ಗಳ ಯೋಜನೆಯು ಪ್ರಾಥಮಿಕವಾಗಿ ಕಪ್ಪುಹಣವನ್ನು ತಗ್ಗಿಸುವ ಗುರಿಯನ್ನು ಹೊಂದಿಲ್ಲ, ಬದಲಾಗಿ ಸಾಮಾನ್ಯ ಬ್ಯಾಂಕಿಂಗ್ ಚಾನೆಲ್‌ಗಳಿಂದ ಅನಾಮಧೇಯ ಧನಸಹಾಯವನ್ನು, ಅನಾಮಧೇಯ ಚುನಾವಣಾ ಬಾಂಡ್‌ಗಳಿಗೆ ಮರುಹೊಂದಿಸುವ ಗುರಿಯನ್ನು ಹೊಂದಿದೆ ಎಂದು ನ್ಯಾಯಾಲಯಕ್ಕೆ ಸಲ್ಲಿಸಿದರು. ಮುಂದುವರಿದು ಅವರು, ಈ ಯೋಜನೆಯನ್ನು "ಪರ್ಯಾಯ ಬಿಳಿ ಹಣದ ಚಾನಲ್" ಎಂದು ಕರೆದರು. ವಿಚಾರಣೆ ಇನ್ನೂ ಬಾಕಿ ಇದೆ.

ಪಾರದರ್ಶಕತೆ ಹೊಂದಿರುವ ಚುನಾವಣಾ ಟ್ರಸ್ಟ್‌ಗಳು

2013 ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಪರಿಚಯಿಸಿದ ಚುನಾವಣಾ ಟ್ರಸ್ಟ್‌ಗಳು ಚುನಾವಣಾ ಬಾಂಡ್‌ಗಳ ಯೋಜನೆಯಂತೆಯೇ ಕಾರ್ಯನಿರ್ವಹಿಸುತ್ತವೆ. ಇದು ಕಾರ್ಪೊರೇಟ್‌ಗಳು ಮತ್ತು ವ್ಯಕ್ತಿಗಳಿಂದ ರಾಜಕೀಯ ದೇಣಿಗೆಗಳನ್ನು ಪಡೆಯುವ ದಾರಿಯನ್ನು ಸುಗಮಗೊಳಿಸುತ್ತವೆ. ಆದರೆ ಚುನಾವಣಾ ಬಾಂಡ್ ಗಳಿಗಿಂತ ಇದು ಭಿನ್ನವಾಗಿದ್ದು, ಚುನಾವಣಾ ಆಯೋಗಕ್ಕೆ ವಾರ್ಷಿಕ ವರದಿಗಳನ್ನು ಸಲ್ಲಿಸಲು ಚುನಾವಣಾ ಟ್ರಸ್ಟ್‌ಗಳಿಗೆ ಕಡ್ಡಾಯಗೊಳಿಸಲಾಗಿದೆ. ಇದು ವ್ಯಕ್ತಿಗಳು ಮತ್ತು ಕಂಪನಿಗಳು ನೀಡಿದ ದೇಣಿಗೆಗಳನ್ನು ವಿವರಿಸುತ್ತದೆ ಮತ್ತು ಧನಸಹಾಯ ಪ್ರಕ್ರಿಯೆಯಲ್ಲಿ ಪಾರದರ್ಶಕತೆಯನ್ನು ಖಚಿತಪಡಿಸುತ್ತದೆ. 2022–23ರ ಅವಧಿಯಲ್ಲಿ, ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸ್ (CBDT) ಯಲ್ಲಿ ನೋಂದಾಯಿಸಲಾದ 18 ಚುನಾವಣಾ ಟ್ರಸ್ಟ್‌ಗಳಲ್ಲಿ 13 ಟ್ರಸ್ಟ್‌ಗಳು ಚುನಾವಣಾ ಆಯೋಗಕ್ಕೆ ತಮ್ಮ ದೇಣಿಗೆಯ ವಿವರಗಳನ್ನು ಸಲ್ಲಿಸಿವೆ. ಐದು ಟ್ರಸ್ಟ್‌ಗಳು ವಿವಿಧ ಕಾರ್ಪೊರೇಟ್ ಸಂಸ್ಥೆಗಳಿಂದ ಕೊಡುಗೆಗಳನ್ನು ಪಡೆದಿವೆ ಎಂದು ಎಡಿಆರ್ ವರದಿ ಬಹಿರಂಗಪಡಿಸಿದೆ.

ರಾಜಕೀಯ ಪಕ್ಷಗಳ ಚುನಾವಣಾ ವೆಚ್ಚಕ್ಕೆ ಹಣ ಕೊಡುವವರ್ಯಾರು?

ರಾಜಕೀಯ ಪಕ್ಷಗಳಿಗೆ ಚುನಾವಣಾ ವೆಚ್ಚಕ್ಕೆಂದೇ ಉದ್ಯಮಿಗಳು, ಗುತ್ತಿಗೆದಾರರು, ಜನಸಾಮಾನ್ಯರು ಹಣ ಕೊಡುವ ಪರಿಪಾಠ ನಮ್ಮಲ್ಲಿದೆ. ಈಗ, ಚುನಾವಣಾ ಬಾಂಡ್ ಗಳ ಮೂಲಕ ವಿದೇಶಿ ಕಂಪನಿಗಳ ಭಾರತೀಯ ಅಂಗಸಂಸ್ಥೆಗಳಿಗೆ ದೇಣಿಗೆ ನೀಡಲು ಅನುಮತಿ ನೀಡಲಾಗಿದೆ. ಶೆಲ್ ಕಂಪನಿಗಳನ್ನು ದೇಣಿಗೆ ನೀಡಲು ಈಗ ಬಳಸಬಹುದು ಎಂಬ ಆರೋಪಕ್ಕೆ ಇದು ಗುರಿಯಾಗಿದೆ.

2017 ರಲ್ಲಿ, ಆಗಿನ ಆರ್‌ಬಿಐ ಗವರ್ನರ್ ಉರ್ಜಿತ್ ಪಟೇಲ್ ಅವರು ಚುನಾವಣಾ ಬಾಂಡ್ ಗಳ ದುರುಪಯೋಗದ ಸಾಧ್ಯತೆಯ ಬಗ್ಗೆ ಹೇಳಿದ್ದರು, ವಿಶೇಷವಾಗಿ ಶೆಲ್ ಕಂಪನಿಗಳ

ಪುಟ 12 ಕ್ಕೆ

ಬ್ಲೂಮ್‌ಬರ್ಗ್ ಪ್ರಕಾರ, 2018 ರಲ್ಲಿ ಚುನಾವಣಾ ಬಾಂಡ್ ಯೋಜನೆ ಪ್ರಾರಂಭವಾದಾಗಿನಿಂದ, ಬಿಜೆಪಿ ಪಕ್ಷವೊಂದೇ 9,200 ಕೋಟಿ ರೂ.ಗಳನ್ನು (ಶೇ. 57) ಪಡೆದಿದೆ. ಕಾಂಗ್ರೆಸ್ ಪಕ್ಷ ಶೇ. 10 ರಷ್ಟು ದೇಣಿಗೆಯನ್ನು ಪಡೆದಿದೆ. ಚುನಾವಣಾ ಬಾಂಡ್ ಮೂಲಕ ರಾಜಕೀಯ ಪಕ್ಷಗಳಿಗೆ ಯಾವ ಉದ್ಯಮಿಗಳಿಂದ ಮತ್ತು ಎಷ್ಟು ಪ್ರಮಾಣದ ದೇಣಿಗೆ ಬಂದಿದೆ ಎಂಬ ವಿವರಗಳನ್ನು ತಿಳಿದುಕೊಳ್ಳುವ ಹಕ್ಕು ಸಾರ್ವಜನಿಕರಿಗಿಲ್ಲ ಎಂದು ಕೇಂದ್ರ ಸರ್ಕಾರದ ಮುಖ್ಯ ವಕೀಲ ಆರ್. ವೆಂಕಟ್ರಮಣಿ ಅಕ್ಟೋಬರ್ 30, 2023 ರಂದು ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ್ದಾರೆ. ಮೂಲಭೂತ ಹಕ್ಕುಗಳ ಮೇಲೆ ನಿರ್ಬಂಧ ಹೇರುವ ಹಕ್ಕು ಸರ್ಕಾರಕ್ಕಿದೆ ಎಂದೂ ಸರ್ಕಾರ ಹೇಳಿದೆ. ಈ ಮೂಲಕ, ಬಿಜೆಪಿ ಪಕ್ಷವನ್ನು ಬಲಪಡಿಸಲು ಮತ್ತು ಅದನ್ನು ಚುನಾವಣೆಯಲ್ಲಿ ಗೆಲ್ಲಿಸಲು ದೊಡ್ಡ ಬಂಡವಾಳಗಾರರು, ವಿದೇಶಿ ಮತ್ತು ಸ್ವದೇಶಿ ಬಹುರಾಷ್ಟ್ರೀಯ ಸಂಸ್ಥೆಗಳು ಯಾವ ಪ್ರಮಾಣದಲ್ಲಿ ಹಣ ಸಹಾಯ ಮಾಡುತ್ತವೆ ಎಂಬುದನ್ನು ಬಿಜೆಪಿ ಜನರಿಂದ ಮುಚ್ಚಿಡುವ ಪ್ರಯತ್ನ ಮಾಡುತ್ತಿದೆ.

4 ವರ್ಷಗಳಲ್ಲಿ 9,208 ಕೋಟಿ ರೂ. ಬಿಜೆಪಿ

ವರದಿಗಳ ಪ್ರಕಾರ, 2018–2023ರ ನಡುವೆ ದೇಶದಲ್ಲಿ 27 ಸುತ್ತುಗಳಲ್ಲಿ ರೂ. 15,956 ಕೋಟಿ ಮೌಲ್ಯದ ಚುನಾವಣಾ ಬಾಂಡ್ ಗಳನ್ನು ಮಾರಾಟ ಮಾಡಲಾಗಿದೆ. ಇದರಲ್ಲಿ ಬಿಜೆಪಿ ಪಕ್ಷವೊಂದೇ 9,200 ಕೋಟಿ ರೂ.ಗಳನ್ನು (ಶೇ. 57) ಪಡೆದಿದೆ. ಕಾಂಗ್ರೆಸ್ ಪಕ್ಷ ಶೇ. 10 ರಷ್ಟು ದೇಣಿಗೆಯನ್ನು ಪಡೆದಿದೆ.

2018 ಮತ್ತು 2022 ರ ನಡುವೆ 31 ರಾಜಕೀಯ ಪಕ್ಷಗಳು ಈ ಬಾಂಡ್ ಗಳ ಮೂಲಕ ಒಟ್ಟು ರೂ. 9,188 ಕೋಟಿ ದೇಣಿಗೆ ಪಡೆದಿವೆ. ಇದರಲ್ಲಿ ಬಿಜೆಪಿಗೆ ಶೇಕಡಾ 74 ರಷ್ಟು, ಬರೋಬ್ಬರಿ 5,272 ಕೋಟಿ ರೂ. ಬಂದಿದ್ದರೆ, ಕಾಂಗ್ರೆಸ್ ಪಕ್ಷಕ್ಕೆ ಶೇ. 11 ರಷ್ಟು ಬಂದಿದೆ. ನಂತರದ ಸ್ಥಾನದಲ್ಲಿ ಬಿಜು ಜನತಾ ದಳ, ವೈಎಸ್‌ಆರ್ ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ಇವೆ.

ಜನವರಿ 2023 ರಲ್ಲಿ ಚುನಾವಣಾ ಆಯೋಗವು ಬಿಡುಗಡೆ ಮಾಡಿದ ಅಂಕಿಅಂಶಗಳು ನಾಲ್ಕು ರಾಷ್ಟ್ರೀಯ ರಾಜಕೀಯ ಪಕ್ಷಗಳಾದ ಬಿಜೆಪಿ, ತೃಣಮೂಲ ಕಾಂಗ್ರೆಸ್ (ಟಿಎಂಸಿ), ಕಾಂಗ್ರೆಸ್ ಮತ್ತು ನ್ಯಾಶನಲಿಸ್ಟ್ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಗಳು 2021–22ರಲ್ಲಿ ಚುನಾವಣಾ ಬಾಂಡ್‌ಗಳ ಮೂಲಕ ತಮ್ಮ ಒಟ್ಟು ಆದಾಯದ ಶೇ. 55.09 (ರೂ. 1811.94 ಕೋಟಿ) ಸಂಗ್ರಹಿಸಿವೆ. ದೊಡ್ಡ ಪಾಲನ್ನು ಬಿಜೆಪಿ ಸ್ವೀಕರಿಸಿದ್ದರೆ, ನಂತರ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಕಾಂಗ್ರೆಸ್ ಪಡೆದಿವೆ. ಶೇ. 66 ಕ್ಕಿಂತ ಹೆಚ್ಚು ಚುನಾವಣಾ ಬಾಂಡ್‌ಗಳು ಅಜ್ಞಾತ ಮೂಲಗಳಿಂದ ಬಂದಿದೆ.

ವಾಸ್ತವವಾಗಿ, ಆ ಪಕ್ಷಗಳು ಇದಷ್ಟೇ ಹಣದಿಂದ ಚುನಾವಣೆ ಮತ್ತು ಇತರ ವ್ಯವಹಾರಗಳನ್ನು ನಡೆಸುತ್ತಿವೆ ಎಂದು ಭಾವಿಸುವುದು ತಪ್ಪು. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ (ಎಡಿಆರ್) 2019 ರ ಚುನಾವಣೆಯ ಒಟ್ಟು ವೆಚ್ಚವು ದೇಶಾದ್ಯಂತ ರೂ. 55,000 ಕೋಟಿಗಳಿಂದ ರೂ. 60,000 ಕೋಟಿಗಳವರೆಗೆ ಇರುತ್ತದೆ ಎಂದು ಅಂದಾಜಿಸಿದೆ. ಇದರಲ್ಲಿ ಹೆಚ್ಚಿನವು ಲೆಕ್ಕಕ್ಕೆ ಸಿಗದ ನಗದು, ಪ್ರಚಾರ ಸಾಮಗ್ರಿಗಳು, ವಿವಿಧ ಮಾಧ್ಯಮಗಳಲ್ಲಿನ ಪ್ರಚಾರ ವೆಚ್ಚಗಳು ಇತ್ಯಾದಿಗಳು ಈ ಬಾಂಡ್ ಗಳ ಮೊತ್ತವನ್ನು ತೋರಿಸುತ್ತವೆ.

ಮನುಸ್ಮೃತಿಯು ಶತಮಾನಗಳಿಂದ ಶೂದ್ರರನ್ನು....

ಪುಟ 8 ರಿಂದ

ರದ್ದುಗೊಳಿಸಲಾಗಿದೆ. 2022–23ರಲ್ಲಿಯೂ ರೂ.13,961.54 ಕೋಟಿ ಎಸ್ಸಿ ಉಪಯೋಜನೆಯ ಹಣವನ್ನು ಖರ್ಚು ಮಾಡಿಲ್ಲ. ಮೋದಿ ಸರ್ಕಾರ 2018–19ರಲ್ಲಿ ರೂ. 9,818.24 ಕೋಟಿ, 2019–20ರಲ್ಲಿ ರೂ. 11,042.26 ಕೋಟಿ, 2020–21ರಲ್ಲಿ ರೂ. 19,922.35 ಕೋಟಿ, ಮತ್ತು 2021–22ರಲ್ಲಿ ರೂ. 16,942.04 ಕೋಟಿ ಹಣವನ್ನು ಖರ್ಚು ಮಾಡಿಲ್ಲ.

ಇತ್ತೀಚೆಗೆ ರಾಜ್ಯಸಭೆಯಲ್ಲಿ ಸಿಪಿಎಂ ಸದಸ್ಯ ಶಿವದಾಸನ್ ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ರಾಮದಾಸ್ ಅಠವಳೆ, ದಲಿತ ಮತ್ತು ಬುಡಕಟ್ಟು ಜನರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕಾದ ಉಪ ಯೋಜನೆ ಹಣ ವ್ಯರ್ಥವಾಗುತ್ತಿದೆ ಎಂದರು. ತಲೆಮಾರುಗಳಿಂದ ಆರ್ಥಿಕವಾಗಿ, ಸಾಮಾಜಿಕವಾಗಿ ತುಳಿತಕ್ಕೆ ಒಳಗಾದ ದೀನದಲಿತರ ಅಭ್ಯುದಯಕ್ಕೆ ಕಾನೂನಾತ್ಮಕವಾಗಿ ವಿನಿಯೋಗಿಸಬೇಕಾದ ಮತ್ತು ಬಳಕೆ ಮಾಡಬೇಕಾದ ಹಣವನ್ನು ನಿರ್ಲಕ್ಷಿಸಿರುವುದು ಅವರನ್ನು ಹಿಂದುಳಿಯುವಂತೆ ಮಾಡಿದೆ ಎಂದರ್ಥ.

ಬುಡಕಟ್ಟು ಉಪ ಯೋಜನೆಯ ವಿಷಯದಲ್ಲಿ ನಿಧಿಯ ವೆಚ್ಚವು ಇದಕ್ಕಿಂತ ಭಿನ್ನವಾಗಿಲ್ಲ. ಉಪಯೋಜನೆಯ ಹಣದಲ್ಲಿ ಕಡಿತದ ಜೊತೆಗೆ ದೀನದಲಿತ ಜನರಿಗೆ ಸಂಬಂಧಿಸಿದ ಅನೇಕ ಯೋಜನೆಗಳನ್ನು ದುರ್ಬಲಗೊಳಿಸಲು ಮೋದಿ ಸರ್ಕಾರ ಪ್ರಯತ್ನಿಸುತ್ತಿದೆ. ಮುಖ್ಯವಾಗಿ ದಲಿತರನ್ನೇ ಅವಲಂಬಿಸಿರುವ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಬಜೆಟ್ ಅನುದಾನ ಕಡಿತ ಮಾಡತೊಡಗಿದೆ. ಕಾರ್ಪೊರೇಟ್ ಸ್ನೇಹಿ ತಿದ್ದುಪಡಿಗಳಿಂದ ಅರಣ್ಯ ಹಕ್ಕು ಕಾಯಿದೆಯನ್ನು ದುರ್ಬಲಗೊಳಿಸುವ ಮೂಲಕ ಆದಿವಾಸಿಗಳನ್ನು ಬಲಿಪಶು ಮಾಡಲಾಗುತ್ತಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ದಲಿತರ ಶ್ರೇಯೋಭಿವೃದ್ಧಿಗಾಗಿ ಮೊಸಳೆ ಕಣ್ಣೀರು ಸುರಿಸದೆ ಅವರ ಅಭ್ಯುದಯಕ್ಕೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು. ಎಸ್ಟಿ ಉಪಯೋಜನೆಯ ಹಣವನ್ನು ವ್ಯರ್ಥ ಮಾಡದೆ ಖರ್ಚು ಮಾಡಬೇಕು. ಆದರೆ ಮೋದಿ ಸರಕಾರದಲ್ಲಿ ಈ ದಿಸೆಯಲ್ಲಿ ಯಾವುದೇ ಚಲನೆ ಕಾಣುತ್ತಿಲ್ಲ.

ರಾಷ್ಟ್ರಪತಿಗಳಿಗೆ ಮನವಿ

ದೇಶದೆಲ್ಲೆಡೆಯ ದಲಿತ ಸಂಘಟನೆಗಳು ಮತ್ತು ಕೃಷಿ ಕಾರ್ಮಿಕ ಸಂಘಟನೆಗಳು 2023ರ ಡಿಸೆಂಬರ್ 4 ರಂದು ನಡೆದ 'ಸಂಸತ್ ಚಲೋ' ಸಂದರ್ಭದಲ್ಲಿ 11 ಪ್ರಮುಖ ಬೇಡಿಕೆಗಳುಳ್ಳ ಮನವಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದವು. ಈ ಸಂದರ್ಭದಲ್ಲಿ ರಾಷ್ಟ್ರಪತಿಗಳಿಗೆ ಸಲ್ಲಿಸಿದ ಮನವಿಯಲ್ಲಿ ದಲಿತರಿಗೆ ಭೂ ಹಂಚಿಕೆ, ಉಚಿತ ಗುಣಮಟ್ಟದ ಶಿಕ್ಷಣ, ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ, ಬಿಟ್ಟಿಚಾಕರಿ ನಿರ್ಮೂಲನೆ ಕಾಯ್ದೆಯ ಕಟ್ಟುನಿಟ್ಟಿನ ಅನುಷ್ಠಾನ, ಮುಂತಾದ ಬೇಡಿಕೆಗಳ ಜತೆಗೆ ಉಪ ಯೋಜನೆಗೆ ಸಂಬಂಧಿಸಿದಂತೆ ಬೇಡಿಕೆಯೂ ಇತ್ತು. ಎಸ್ಸಿ ಮತ್ತು ಎಸ್ಟಿ ದೌರ್ಜನ್ಯ ಕಾಯ್ದೆಯಡಿ ಪ್ರಕರಣಗಳಲ್ಲಿ ಜಾಮೀನು, ಎಸ್ಸಿ, ಎಸ್ಟಿ ಉಪಯೋಜನೆಗೆ ಮೀಸಲಿಟ್ಟ ಹಣ ಸಕಾಲಕ್ಕೆ ವ್ಯಯವಾಗದಿದ್ದರೆ, ಅಥವಾ ಆ ಹಣ ಬೇರೆಡೆಗೆ ಹರಿದು ಬಂದರೆ ಅಂಥವರನ್ನು ಶಿಕ್ಷಿಸಲು ಕ್ರಮಕೈಗೊಳ್ಳಬೇಕು. ದಲಿತ, ಗಿರಿಜನರ ಅಭ್ಯುದಯಕ್ಕೆ ಮಾತ್ರ ಈ ಹಣ ಖರ್ಚುಮಾಡಬೇಕು ಎಂಬ ಬೇಡಿಕೆಗೆ ಒತ್ತಾಯಿಸಲಾಯಿತು.

ಕೋಮುವಾದಿ ಧ್ರುವೀಕರಣದೊಂದಿಗೆ ಇ.ಡಿ. + ಧನಬಲದ ಭ್ರಷ್ಟ.......

ಪುಟ 5 ರಿಂದ

ಹೊಂದಿರುವ ಪ್ರಮುಖ ವಿಷಯಗಳ ಆಧಾರದ ಮೇಲೆ ಅವರನ್ನು ತಲುಪಲು ಗಮನ ಕೇಂದ್ರೀಕರಿಸಬೇಕು.

ಕೇರಳ

'ನವ ಕೇರಳ ಸದಸ್'ನ ಅತ್ಯಂತ ಯಶಸ್ವಿ ಕಾರ್ಯಕ್ರಮಕ್ಕಾಗಿ ಕೇಂದ್ರ ಸಮಿತಿಯು ಕೇರಳದ ಜನತೆ ಮತ್ತು ಎಲ್‌ಡಿಎಫ್ ಸರ್ಕಾರವನ್ನು ಅಭಿನಂದಿಸಿದೆ. ಇದು ದೇಶದ ಯಾವುದೇ ರಾಜ್ಯ ಸರ್ಕಾರ ಕೈಗೊಂಡ ಒಂದು ವಿಶಿಷ್ಟ ಕಾರ್ಯಕ್ರಮವಾಗಿದೆ.

ಗವರ್ನರ್: ಹುದ್ದೆಗೆ ಅನರ್ಹ: ಕೇರಳ ರಾಜ್ಯಪಾಲರು ಚುನಾಯಿತ ರಾಜ್ಯ ಸರ್ಕಾರದ ಮೇಲೆ ನಿರಂತರ ರಾಜಕೀಯ ದಾಳಿಗಳು ಮತ್ತು ತನ್ನ ಅತ್ಯಂತ ವಿಕ್ಷಿಪ್ತ ನಡವಳಿಕೆಯೊಂದಿಗೆ ಎಲ್ಲಾ ಗಡಿಗಳನ್ನು ಮೀರಿದ್ದಾರೆ. ಇತ್ತೀಚೆಗಷ್ಟೇ ಅವರು ಸಂಪೂರ್ಣ ಪ್ರಜಾಪ್ರಸತ್ತಾತ್ಮಕ ಮತ್ತು ಶಾಂತಿಯುತ ವಿದ್ಯಾರ್ಥಿ ಪ್ರತಿಭಟನೆಯ ವಿರುದ್ಧ ಪ್ರತಿಭಟನೆಯೆನ್ನುತ್ತ ಕೇರಳದ ರಸ್ತೆಗಳಲ್ಲಿ ಧರಣಿ ಕುಳಿತಿದ್ದಾರೆ. ಅಭೂತಪೂರ್ವ ತೀತಿಯಲ್ಲಿ ಅವರು ಕೇಂದ್ರೀಯ ಭದ್ರತಾ ಪಡೆಗಳಿಂದ ತನಗಾಗಿ ಹೆಚ್ಚಿನ ರಕ್ಷಣೆಯನ್ನು ಕೇಳಿ ಪಡೆದಿದ್ದಾರೆ, ತನಗಾಗಿ ಅತಿ ಹೆಚ್ಚಿನ ಭದ್ರತಾ ಯೋಜನೆಯನ್ನು ಪಡೆದಿದ್ದಾರೆ. "ಸಾಂವಿಧಾನಿಕ ಯಂತ್ರದ ಪತನದ ಆರಂಭ" ಎಂಬಂತಹ ಅವರ ಹೇಳಿಕೆಗಳು ರಾಜ್ಯ ಸರ್ಕಾರದ ವಿರುದ್ಧ ಹೊರಿಸಲಾದ ಬೆದರಿಕೆಗಳಾಗಿದ್ದು, ಅದನ್ನು ರಾಜ್ಯದ ಜನರು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ.

ಕಾಂಗ್ರೆಸ್ ಪಕ್ಷವು ಎಲ್.ಡಿ.ಎಫ್. ಸರ್ಕಾರಕ್ಕೆದ ಬಗ್ಗೆ ನಕಾರಾತ್ಮಕ ಮತ್ತು ಪ್ರಜಾಪ್ರಭುತ್ವ ವಿರೋಧಿ ಧೋರಣೆ ಅನುಸರಿಸುತ್ತಿದೆ ಮತ್ತು ಮುಖ್ಯಮಂತ್ರಿ ವಿರುದ್ಧ ಆಧಾರರಹಿತ ಆರೋಪಗಳನ್ನು ಮಾಡುತ್ತಿದೆ. ಕೇರಳದ ಹಕ್ಕುಗಳ ಮೇಲಿನ ಕೇಂದ್ರದ ದಾಳಿಯ ಬಗ್ಗೆ ಅದು ಮೌನವಾಗಿದ್ದು, ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿಯ ತಂತ್ರಗಳಿಗೆ ಸಹಾಯ ಮಾಡುತ್ತದೆ. ಕಾಂಗ್ರೆಸ್ ಪಕ್ಷದ ಈ ಛಿದ್ರಕಾರಿ ನಿಲುವನ್ನು ಕೇರಳದ ಜನರು ತಿರಸ್ಕರಿಸುತ್ತಾರೆ.

ಪಶ್ಚಿಮ ಬಂಗಾಳ: ಬೃಹತ್ ಬ್ರಿಗೇಡ್ ರ‍್ಯಾಲಿಯೊಂದಿಗೆ ಸಮಾಪನಗೊಂಡ, ರಾಜ್ಯದಾದ್ಯಂತ ಸಾಗಿ ಯಶಸ್ವಿಯಾದ 'ಇನ್ಸಾಫ್ ಯಾತ್ರೆ'ಗೆ ಕೇಂದ್ರ ಸಮಿತಿಯು ಬಂಗಾಳದ ಯುವಜನರನ್ನು ಅಭಿನಂದಿಸಿತು.

ತ್ರಿಪುರಾ: ತ್ರಿಪುರಾದಲ್ಲಿ ಏಕಪಕ್ಷೀಯ ಸರ್ವಾಧಿಕಾರದ ಬಿಜೆಪಿ ಸರ್ಕಾರವು ತನ್ನ ಫ್ಯಾಸಿಸ್ಟ್ ತೆರನ ಭಯೋತ್ಪಾದಕ ದಾಳಿಗಳನ್ನು ತೀವ್ರಗೊಳಿಸುತ್ತಿದ್ದು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಲು ಗಂಭೀರ ಆತಂಕಗಳನ್ನು ಉಂಟುಮಾಡುತ್ತಿದೆ. ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಗುರಿಯಿಡಲಾಗುತ್ತಿದ್ದು, ಇದನ್ನುಪ್ರತಿರೋಧಿಸಲಾಗುತ್ತಿದೆ.

ಕೇಂದ್ರ ಸಮಿತಿ ಕರೆಗಳು

1. ಎಲ್ಲಾ ರಾಜ್ಯ ಘಟಕಗಳು ಹೆಚ್ಚುತ್ತಿರುವ ನಿರುದ್ಯೋಗ, ಬೆಲೆ ಏರಿಕೆ ಮತ್ತು ಮೋದಿ ಸರ್ಕಾರದ ನೀತಿಗಳಿಂದ ಜನರ ಜೀವನೋಪಾಯದ ಮೇಲೆ ನಡೆಯುತ್ತಿರುವ ದಾಳಿಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸುವುದನ್ನು ಮುಂದುವರೆಸಬೇಕು.
2. ಕೇರಳದ ಬಗೆಗಿನ ಮೋದಿ ಸರ್ಕಾರದ ತಾರತಮ್ಯ ನೀತಿಗಳು ಮತ್ತು ರಾಜ್ಯಗಳ ಹಕ್ಕುಗಳು ಮತ್ತು ಒಕ್ಕೂಟ ತತ್ವದ ಮೇಲಿನ ದಾಳಿಗಳ ವಿರುದ್ಧ ಫೆಬ್ರವರಿ 8 ರಂದು ನವದೆಹಲಿಯಲ್ಲಿ ಕೇರಳ ರಾಜ್ಯದ ಎಲ್‌ಡಿಎಫ್ ಸರ್ಕಾರವು ಆಯೋಜಿಸಿರುವ ಪ್ರತಿಭಟನಾ ಧರಣಿಯೊಂದಿಗೆ ಏಕಕಾಲದಲ್ಲಿ ಎಲ್ಲಾ ರಾಜ್ಯ ಸಮಿತಿಗಳು ರಾಜ್ಯಗಳಲ್ಲಿ ಪ್ರತಿಭಟನಾ ಕಾರ್ಯಕ್ರಮಗಳನ್ನು ಆಯೋಜಿಸಬೇಕು.
3. ಫೆಬ್ರವರಿ 16, 2024 ರಂದು ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಗಳಿಗೆ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ವೇದಿಕೆ ನೀಡಿರುವ ಕರೆಗೆ ಕೇಂದ್ರ ಸಮಿತಿಯು ಸೌಹಾರ್ದವನ್ನು ವ್ಯಕ್ತಪಡಿಸಿತು.
4. ಇಲೆಕ್ಟ್ರಾನಿಕ್ ಮತದಾನ ಯಂತ್ರಗಳ ಗಳ ಕಾರ್ಯನಿರ್ವಹಣೆಯ ಬಗ್ಗೆ ವ್ಯಾಪಕವಾದ ಆತಂಕಗಳ ಸಂದರ್ಭದಲ್ಲಿ, ಮತಗಟ್ಟೆಗಳಲ್ಲಿ, ಮತದಾನ ಘಟಕಗಳು–ನಿಯಂತ್ರಕ ಘಟಕಗಳು ಮತ್ತು VVPAT ಈ ಅನುಕ್ರಮದಲ್ಲಿ ಇರುವಂತೆ ಮರುವ್ಯವಸ್ಥೆ ಮಾಡಬೇಕು ಎಂದು ಪಕ್ಷವು ದೇಶಾದ್ಯಂತ ಪ್ರಚಾರ ಮಾಡುತ್ತದೆ. ನಿಯಂತ್ರಕ ಯೂನಿಟ್‌ನಲ್ಲಿ ದಾಖಲಾಗಿರುವ ವಿವಿಪಿಎಟಿಯ ಕನಿಷ್ಠ 50 ಪ್ರತಿಶತವನ್ನು ತಾಳೆ ಮಾಡಬೇಕು.

ಚುನಾವಣಾ ಬಾಂಡ್: 4 ವರ್ಷದಲ್ಲಿ...

ಪುಟ 11 ರಿಂದ

(ಬೇನಾಮಿ ಹೆಸರಿನಲ್ಲಿ ಶೆಲ್ ಕಂಪನಿಗಳನ್ನು ಹುಟ್ಟುಹಾಕಿರುತ್ತಾರೆ) ಬಳಕೆಯ ಮೂಲಕ. ಚುನಾವಣಾ ಬಾಂಡ್‌ಗಳು ಭೌತಿಕ ರೂಪದಲ್ಲಿರದೆ ಡಿಜಿಟಲ್ ರೂಪದಲ್ಲಿರಬೇಕು ಎಂದು ಸಲಹೆ ನೀಡಿದ್ದರು.


ಈ ರೀತಿ ಬಂಡವಾಳಶಾಹಿ ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವಾಗಲೂ ಚುನಾವಣೆಯಲ್ಲಿ ಆಯ್ಕೆಗೊಂಡು, ಅಧಿಕಾರಕ್ಕೆ ಬಂದ ನಂತರ ತಮ್ಮ ಪರವಾದ ಮತ್ತು ತಮಗೆ ಹೆಚ್ಚು ಲಾಭ ತರುವ ನೀತಿಗಳನ್ನು, ಯೋಜನೆಗಳನ್ನು ಯಾವ ಪಕ್ಷ ಜಾರಿಗೆ ತರುತ್ತದೆ ಎಂಬ ಲೆಕ್ಕಾಚಾರದಲ್ಲಿ ಅಂತಹ ರಾಜಕೀಯ ಪಕ್ಷಗಳಿಗೆ ಅತಿ ಹೆಚ್ಚು ದೇಣಿಗೆ ಕೊಡುತ್ತಾರೆ. ಅಧಿಕಾರಕ್ಕೆ ಬರುವಷ್ಟು ಸಂಸದರು/ಶಾಸಕರನ್ನು ಗೆಲ್ಲಲು ಸಾಧ್ಯವಾಗದ, ಆದರೂ ತಮ್ಮ ಪರವಾಗಿ ಶಾಸನಸಭೆಗಳಲ್ಲಿ ಕೆಲಸ ಮಾಡುವ ಪಕ್ಷಗಳಿಗೂ ಇವರು ದೇಣಿಗೆ ಕೊಡುತ್ತಾರಾದರೂ, ದೇಣಿಗೆಯ ಪ್ರಮಾಣ ಕಡಿಮೆ ಇರುತ್ತದೆ. ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ, ಬಂಡವಾಳಗಾರರು ಮಾಡುವ ಶೋಷಣೆ ವಿರುದ್ಧ ದ್ವನಿ ಎತ್ತಿ ಹೋರಾಡುವ, ಕಮ್ಯೂನಿಸ್ಟ್ ಪಕ್ಷಗಳಿಗೆ ಇವರು ದೇಣಿಗೆ ಕೊಡುವುದಿಲ್ಲ ಮಾತ್ರವಲ್ಲ, ಕಮ್ಯೂನಿಸ್ಟರು ಇಂತಹ ದೊಡ್ಡ ಉದ್ಯಮಿಗಳ ಬಳಿ ದೇಣಿಗೆ ಕೇಳುವುದಿಲ್ಲ. ಕಮ್ಯೂನಿಸ್ಟರನ್ನು ಸೋಲಿಸಬಲ್ಲ ವಿರೋಧಿ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ (ಉದಾ: ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಪಕ್ಷಕ್ಕೆ) ಇವರು ಹೆಚ್ಚಿನ ದೇಣಿಗೆ ಕೊಡುತ್ತಾರೆ. ಸಿಪಿಎಂ ಪಕ್ಷ ಕಾರ್ಪೊರೇಟ್ ನಿಧಿಯನ್ನು ತೆಗೆದುಕೊಳ್ಳಲು ನಿರಾಕರಿಸುತ್ತದೆ. ಕಮ್ಯೂನಿಸ್ಟ್ ಪಕ್ಷಗಳು ಜನರಿಂದ ಪಕ್ಷಕ್ಕೆ ಮತ್ತು ಚುನಾವಣಾ ನಿಧಿಗೆ ಹಣ ಸಂಗ್ರಹಿಸುತ್ತವೆ. ಇದು ಸಂಪೂರ್ಣವಾಗಿ ಪಾರದರ್ಶಕವಾಗಿರುತ್ತದೆ.

ಮೋದಿ ಸರ್ಕಾರದ ಹಿಡನ್ ಅಜೆಂಡಾ

2018ರ ಜನವರಿಯಲ್ಲಿ ಚುನಾವಣಾ ಬಾಂಡ್‌ಗಳ ವಿಧಾನವನ್ನು ಪರಿಚಯಿಸಲಾಯಿತು. ಇದನ್ನು ಸಾಂವಿಧಾನಿಕ ತಿದ್ದುಪಡಿ ಅಥವಾ ವಿವರಣೆಯಿಲ್ಲದೆ ಹಣಕಾಸು ಮಸೂದೆಯಾಗಿ ತರಲಾಯಿತು. ದೇಶ, ವಿದೇಶಗಳ ದೊಡ್ಡ ಕಂಪನಿಗಳು ರಾಜಕೀಯ ಪಕ್ಷಗಳಿಗೆ ದೇಣಿಗೆ ರೂಪದಲ್ಲಿ ಹೂಡಿಕೆ ಮಾಡಲು ಬಾಗಿಲು ತೆರೆದಿವೆ. ಇದಕ್ಕಾಗಿ ಹಣಕಾಸು ಕಾಯಿದೆಯು ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ 2016ರಿಂದ ಅನ್ವಯವಾಗುವಂತೆ ತಿದ್ದುಪಡಿ ಮಾಡಿದೆ. ಹೀಗಾಗಿ ವಿದೇಶದಿಂದ ಹಣ ತೆಗೆದುಕೊಂಡರೂ ತಪ್ಪಾಗದಂತೆ ನೋಡಿಕೊಳ್ಳಲಾಗಿದೆ. ಜನರ ಪ್ರಾತಿನಿಧ್ಯ, ಕಂಪನಿಗಳ ಕಾಯಿದೆ, ಆದಾಯ ತೆರಿಗೆ ಕಾಯಿದೆ, ರಿಸರ್ವ್ ಬ್ಯಾಂಕ್ ಕಾಯಿದೆ... ಇವನ್ನೆಲ್ಲ ಹಣಕಾಸು ಕಾಯ್ದೆ ತಿದ್ದುಪಡಿ 2017ರಿಂದ ಬದಲಾಯಿಸಲಾಗಿದೆ. ಆರ್‌ಬಿಐ, ಚುನಾವಣಾ ಆಯೋಗ ಮತ್ತು ಪ್ರತಿಪಕ್ಷಗಳು ಟೀಕಾಕಾರರನ್ನು ನಿರ್ಲಕ್ಷಿಸಿ ಹಣಕಾಸು ಮಸೂದೆಯನ್ನು ಅಂಗೀಕರಿಸಿದವು. ಈ ಇಡೀ ಅಲೆ ಎಷ್ಟು ಶಸ್ತ್ರಸಜ್ಜಿತವಾಗಿದೆ ಎಂಬುದನ್ನು ನೋಡಿದರೆ ಮೋದಿ ಸರ್ಕಾರದ ಹಿಡನ್ ಅಜೆಂಡಾಗಳ ಅನುಷ್ಠಾನದ ಆಳ ಗೊತ್ತಾಗುತ್ತದೆ. ಸಿಪಿಎಂನಂತಹ ಪಕ್ಷಗಳು ಮೊದಲಿನಿಂದಲೂ ಈ ಯೋಜನೆ ನ್ಯಾಯಯುತವಲ್ಲ ಎಂದು ಟೀಕಿಸಿದವು. ಅವರು ಕಾರ್ಪೊರೇಟ್ ನಿಧಿಯನ್ನು ತೆಗೆದುಕೊಳ್ಳಲು ನಿರಾಕರಿಸಿದರು.

ಮತದಾರರು ಎಚ್ಚರದಿಂದ ಇರಬೇಕಿದೆ

ಇನ್ನೇನು 2024ರ ಲೋಕಸಭಾ ಚುನಾವಣೆ ಸಮೀಪಿಸುತ್ತಿದೆ. ಹಿಂದಿನ ಚುನಾವಣೆಗಳಂತೆ ಈ ಚುನಾವಣೆಯಲ್ಲಿಯೂ ರಾಜಕೀಯ ಪಕ್ಷಗಳು ಸಹಸ್ರಾರು ಕೋಟಿ ರೂ.ಗಳ ಹಣದ ಹೊಳೆ ಹರಿಸಲಿವೆ. ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚು ಹಣ ಹರಿಯಲಿದೆ. ಬಿಜೆಪಿ ಪಕ್ಷಕ್ಕೆ ದೊಡ್ಡ ಉದ್ಯಮಿಗಳಿಂದ, ವಿದೇಶಗಳಿಂದ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಂದ ಅತಿ ಹೆಚ್ಚು ದೇಣಿಗೆ ಬರುತ್ತದೆ ಎಂದು ಹಲವು ಮೂಲಗಳನ್ನು ಉಲ್ಲೇಖಿಸಿದ ವರದಿಗಳು ಬರುತ್ತಿವೆ. ಈ ರೀತಿಯಲ್ಲಿ ಉದ್ಯಮಿಗಳಿಂದ ಸಾವಿರಾರು ಕೋಟಿ ದೇಣಿಗೆ ಪಡೆಯುವ ಆಳುವ ಪಕ್ಷ, ತಮ್ಮ ಅಧಿಕಾರದ ಅವಧಿಯಲ್ಲಿ ಉದ್ಯಮಿಗಳ ಋಣ ತೀರಿಸಲು ಮುಂದಾಗುತ್ತದೆ. ಇದರ ಭಾಗವೇ, 15 ಲಕ್ಷ ಕೋಟಿ ಬ್ಯಾಂಕ್ ಸಾಲ ಮನ್ನಾ, ಶೇ. 8 ರಷ್ಟು ಕಾರ್ಪೊರೇಟ್ ತೆರಿಗೆ ಕಡಿತ, ಪ್ರಕೃತಿ ಸಂಪತ್ತನ್ನು ಮತ್ತು ಅರಣ್ಯ ಸಂಪತ್ತನ್ನು ದೋಚಲು ಅಡ್ಡಿಯಾಗಿರುವ ಕಾನೂನುಗಳ ತಿದ್ದುಪಡಿ, ಲಾಭದಾಯಕ ಸಾರ್ವಜನಿಕ ಉದ್ಯಮಗಳ ಮಾರಾಟ, ಖಾಸಗೀಕರಣ ನೀತಿಗಳು, ಕಾರ್ಮಿಕರ ಹಕ್ಕುಗಳಿಗೆ ಮೊಟಕು, ಕೃಷಿ ಕಾಯ್ದೆಗಳು ಹೀಗೆ ಹಲವು ರೀತಿಯಲ್ಲಿ ಉದ್ಯಮಿಗಳ ಋಣ ತೀರಿಸತೊಡಗಿದ್ದಾರೆ. ತಮ್ಮ ಆಡಳಿತದಲ್ಲಿನ ಸಾಧನೆಗಳು, ತಮ್ಮ ಪಕ್ಷಗಳ ನಿಜವಾದ ನೀತಿ ನಿಲುವುಗಳ ಕುರಿತು ಅಥವಾ ತಮ್ಮ ಪಕ್ಷದ ಸಿದ್ಧಾಂತಗಳನ್ನು ಮತದಾರರಿಗೆ ತಿಳಿಸುವ ಮೂಲಕ ಮತ ಕೇಳಿದರೆ, ಚುನಾವಣೆಯಲ್ಲಿ ಎಂದೂ ಗೆಲ್ಲಲು ಸಾಧ್ಯವಿಲ್ಲ ಎಂಬ ಸತ್ಯ ಆಡಳಿತ ಪಕ್ಷ ಬಿಜೆಪಿಗಿದೆ. ಬಿಜೆಪಿ ಅಥವಾ ಯಾವುದೇ ಪಕ್ಷಗಳ ಚುನಾವಣಾ ಆಮಿಷಗಳಿಗೆ ಮತದಾರರು ಬಲಿಯಾಗದೆ, ಎಚ್ಚರಿಕೆಯಿಂದ ಪಕ್ಷಗಳ ನೀತಿಗಳು ಮತ್ತು ಅವರ ಸಿದ್ಧಾಂತಗಳನ್ನು ಅರಿತು ಆಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಬೇಕಿದೆ.





ಕಾಡುತ್ತಿದೆ ನಿರುದ್ಯೋಗದ ಪಿಡುಗು!

ಎಲ್ಲಾ ಬಂಡವಾಳಶಾಹಿ ದೇಶಗಳೂ ಬೃಹತ್ ಪ್ರಮಾಣದ ನಿರುದ್ಯೋಗದಿಂದ ಬಳಲುತ್ತಿವೆ. ನವ–ಉದಾರವಾದವು ಅನಿಯಂತ್ರಿತ ಬಂಡವಾಳಶಾಹಿಯನ್ನು ಪರಿಚಯಿಸುವ ಮೂಲಕ, ದಿಗಂತದಲ್ಲಿ ಕೊರೊನಾ ಕಾಣಿಸಿಕೊಳ್ಳುವ ಮುನ್ನವೇ ಭಾರತವನ್ನೂ ಸಹ ಅದೇ ಹಾದಿಗೆ ಎಳೆದು ತಂದಿದೆ. ವ್ಯಕ್ತಿಗಳನ್ನು ಬಾಧಿಸುವ ನಿರುದ್ಯೋಗದ (ಮತ್ತು ಅದರ ಪರಿಣಾಮವಾಗಿ ಬಡತನದ) ಜವಾಬ್ದಾರಿಯನ್ನು ಸಮಾಜವು ತೆಗೆದುಕೊಳ್ಳಬೇಕಾಗುತ್ತದೆ ಎಂಬ ಅಂಶವನ್ನು ಭಾರತದ ಬೂರ್ಜ್ವಾ ರಾಜಕೀಯ ಪಕ್ಷಗಳು ಈಗಾಗಲೇ ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡಿವೆ. ಈಗ ಉದ್ಭವಿಸುವ ಪ್ರಶ್ನೆ: ಉದ್ಯೋಗ ಕೋರಿ ಪ್ರಜಾಸತ್ತಾತ್ಮಕವಾಗಿ ಮಂಡಿಸಬಹುದಾದ ಹಕ್ಕೊತ್ತಾಯವೇನು? ಮಾನವ ಘನತೆಗೆ ತಕ್ಕ ಉದ್ಯೋಗ ಪಡೆಯುವುದು, ಉದ್ಯೋಗ ಒದಗದಿದ್ದರೆ, ಬಿಡಿಗಾಸಿನ ನಿರುದ್ಯೋಗ ಭತ್ಯೆಯನ್ನಲ್ಲ, ಪೂರ್ಣ ವೇತನ ಪಡೆಯುವುದು ನಾಗರಿಕರ ಹಕ್ಕು. ಮತ್ತು ಮೇಲ್ತುದಿಯ ಶೇ. 1ರಷ್ಟು ಶ್ರೀಮಂತರ ಸಂಪತ್ತಿನ ಮೇಲೆ ಶೇ. 0.8ರಷ್ಟು ಸಂಪತ್ತು ತೆರಿಗೆಯನ್ನು ವಿಧಿಸುವ ಮೂಲಕ ಇದನ್ನು ಖಂಡಿತಾ ಒದಗಿಸಬಹುದು, ಹಾಗೆ ಒದಗಿಸದಿರುವುದು ಜವಾಬ್ದಾರಿಯಿಂದ ನುಣುಚಿಕೊಳ್ಳುವ ಒಂದು ಮಹಾ ಪಾತಕವಾಗುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ನಿರುದ್ಯೋಗವು ಸ್ವಾತಂತ್ರ್ಯಾನಂತರದ ಭಾರತದಲ್ಲಿ ಹಿಂದೆಂದಿಗಿಂತಲೂ ಇಂದು ಹೆಚ್ಚು ಕಳವಳಕಾರಿಯಾಗಿದೆ. ಈ ಪರಿಸ್ಥಿತಿಗೆ ಎರಡು ಅಂಶಗಳು ಕಾರಣವಾಗಿವೆ. ಮೊದಲನೆಯದು, ಕೊವಿಡ್–ಲಾಕ್‌ಡೌನ್ ಸಂದರ್ಭದಲ್ಲಿ ನಿಂತು ಹೋದ ಉತ್ಪಾದನೆಯು ಆನಂತರದಲ್ಲಿ ಚೇತರಿಸಿಕೊಂಡಾಗ, ಉದ್ಯೋಗಗಳು ಲಾಕ್‌ಡೌನ್‌ಗಿಂತ ಮೊದಲಿದ್ದ ಪ್ರಮಾಣದಲ್ಲಿ ಉಳಿಯಲಿಲ್ಲ ಎಂಬುದು. ಸಿಎಂಐಇ ಸಂಸ್ಥೆಯ ಅಂದಾಜಿನ ಪ್ರಕಾರ, 2023–24ರ ಒಟ್ಟು ಜಿಡಿಪಿಯು ವಾಸ್ತವವಾಗಿ 2019–20ರಲ್ಲಿ ಇದ್ದುದಕ್ಕಿಂತ ಸುಮಾರು ಶೇ. 18ರಷ್ಟು ವೃದ್ಧಿಯಾಗಿದೆಯಾದರೂ, ಉದ್ಯೋಗಗಳ ಬೆಳವಣಿಗೆ ಮಾತ್ರ ಶೂನ್ಯವೇ. ಜಿಡಿಪಿಯ ಉದ್ಯೋಗ–ತೀವ್ರತೆಯ ಈ ಕುಸಿತಕ್ಕೆ ಕಾರಣವೆಂದರೆ, ಕಡಿಮೆ ಸಂಖ್ಯೆಯ ಉದ್ಯೋಗಿಗಳನ್ನು ಹೊಂದಿರುವ ದೊಡ್ಡ ದೊಡ್ಡ ಉದ್ದಿಮೆಗಳಲ್ಲಿ ಉತ್ಪಾದನೆಯ ಚೇತರಿಕೆಯು ಉತ್ತಮವಾಗಿತ್ತು ಹಾಗೂ ಹೆಚ್ಚಿನ ಸಂಖ್ಯೆಯ ಉದ್ಯೋಗಿಗಳನ್ನು ಹೊಂದಿರುವ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಲ್ಲಿ ಈ ಚೇತರಿಕೆಯು ಕಳಪೆಯಾಗಿತ್ತು.

2019ರ ವೇಳೆಗಾಗಲೇ ನಿರುದ್ಯೋಗ ಪರಿಸ್ಥಿತಿ ಗಂಭೀರವಾಗಿಯೇ ಇತ್ತು. 2019ರಲ್ಲಿದ್ದ ನಿರುದ್ಯೋಗ ದರವು, 1973ರಲ್ಲಿ ಮೊದಲ ತೈಲ–ಬೆಲೆ ಏರಿಕೆಯ ಸನ್ನಿವೇಶದಲ್ಲಿ ಉಂಟಾದ ಹಣದುಬ್ಬರದಿಂದ ಕೂಡಿದ ಆರ್ಥಿಕ ಹಿಂಜರಿತದ ನಂತರ ಯಾವುದೇ ಸಮಯದಲ್ಲಿ ಇದ್ದುದಕ್ಕಿಂತಲೂ ಹೆಚ್ಚಾಗಿತ್ತು. ಎರಡನೇ ಅಂಶಕ್ಕೂ ಮತ್ತು ಕೊವಿಡ್–ಲಾಕ್‌ಡೌನ್ ನಂತರ ಬೇರೆ ಬೇರೆ ಔದ್ಯೋಗಿಕ ವಲಯಗಳ ಅಸಮ ಚೇತರಿಕೆಗೂ ಯಾವ ಸಂಬಂಧವೂ ಇಲ್ಲ. ಈ ಅಂಶವು ನವ ಉದಾರವಾದಿ ಆಳ್ವಿಕೆಯ ಅಂತರ್ಗತ ಪ್ರವೃತ್ತಿಗಳೊಂದಿಗೆ ಸಂಬಂಧ ಹೊಂದಿದೆ. ಸಾಂದರ್ಭಿಕವಾಗಿ ಒಂದು ಗಮನಾರ್ಹವಾದ ಸಂಗತಿಯನ್ನು ಹೇಳುವುದಾದರೆ, ಹಿಂದಿನ ನಿಯಂತ್ರಣ ನೀತಿಗಳ (dirigiste) ಆಳ್ವಿಕೆ ಮತ್ತು ನವ ಉದಾರವಾದಿ ಆಳ್ವಿಕೆಯ ನಡುವಿನ ಅವಧಿಯಲ್ಲಿ ಜಿಡಿಪಿಯ ಸರಾಸರಿ ಬೆಳವಣಿಗೆಯ ದರವು ದ್ವಿಗುಣಗೊಂಡಿದೆ ಎಂಬುದಾಗಿ ಅಧಿಕೃತ ಅಂಕಿಅಂಶಗಳು ತೋರಿಸುತ್ತವೆಯಾದರೂ, ಉದ್ಯೋಗಗಳ ಬೆಳವಣಿಗೆಯ ದರವು ಈ ಎರಡು ಆಳ್ವಿಕೆಗಳ ನಡುವೆ ಅರ್ಧದಷ್ಟು ಕಡಿಮೆಯಾಗಿದೆ.

ಉದ್ಯೋಗ ಬೆಳವಣಿಗೆಯ ದರದ ಈ ಪರಿಯ ಕುಸಿತಕ್ಕೆ ಕಾರಣವೆಂದರೆ, ವೇಗವಾಗಿ ಬೆಳೆದ ಶ್ರಮಿಕ ಉತ್ಪಾದಕತೆಯೇ. ನವ ಉದಾರವಾದಿ ಅವಧಿಯಲ್ಲಿ ಅರ್ಥವ್ಯವಸ್ಥೆಯನ್ನು ವಿದೇಶಿಯರಿಗೆ ಪೂರ್ಣವಾಗಿ ತೆರೆದಿಟ್ಟ ಪರಿಣಾಮವಾಗಿ ಸಂಭವಿಸಿದ ಶ್ರಮಿಕ ಉತ್ಪಾದಕತೆಯ ಬೆಳವಣಿಗೆಯು ಉದ್ಯೋಗಗಳ ಬೆಳವಣಿಯ ದರವನ್ನು ಕುಬ್ಜಗೊಳಿಸಿತು. ನವ ಉದಾರವಾದಿ ಅವಧಿಯಲ್ಲಿ ಉದ್ಯೋಗಗಳ ಬೆಳವಣಿಯ ದರವು ಕಾರ್ಮಿಕ ಬಲದ ಸರಾಸರಿ ಬೆಳವಣಿಗೆಯ ದರಕ್ಕಿಂತಲೂ ಕಡಿಮೆ ಇದೆ. ಅರ್ಥವ್ಯವಸ್ಥೆಯನ್ನು ಪೂರ್ಣವಾಗಿ ಮುಕ್ತಗೊಳಿಸಿದ ವಾತಾವರಣವು ಭಾರತದ ಮಾರುಕಟ್ಟೆಯ ಪಾಲಿಗಾಗಿ ಹವಣಿಸುತ್ತಿದ್ದ ದೇಶ ದೇಶಗಳ ಉತ್ಪಾದಕರ ನಡುವೆ ಪೈಪೋಟಿಯನ್ನು ಹೆಚ್ಚಿಸಿತು. ಇದು ತಾಂತ್ರಿಕ ಅನ್ವೇಷಣೆಗಳನ್ನು ವೇಗವಾಗಿ ಪರಿಚಯಿಸಲು ಕಾರಣವಾಯಿತು. ಈ ಪ್ರಕ್ರಿಯೆಯು ಶ್ರಮ ಉತ್ಪಾದಕತೆಯ ಇನ್ನೂ ಹೆಚ್ಚಿನ ವೇಗದ ಏರಿಕೆಗೆ ಕಾರಣವಾಯಿತು. ರೈತ ಕೃಷಿಗೆ ಒದಗಿಸುತ್ತಿದ್ದ ಬೆಂಬಲವನ್ನು ಸರ್ಕಾರವು ಹಿಂಪಡೆದ ಕಾರಣದಿಂದಾಗಿ ಉಲ್ಬಣಗೊಂಡ ಕೃಷಿ ಬಿಕ್ಕಟ್ಟು ಮತ್ತು ವೇಗವಾಗಿ ಏರುತ್ತಿದ್ದ ಶ್ರಮ ಉತ್ಪಾದಕತೆ, ಇವು, ಹೆಚ್ಚಿನ ಸಂಖ್ಯೆಯ ರೈತರನ್ನು ಅವರ ಸಾಂಪ್ರದಾಯಿಕ ಕಸುಬಿನಿಂದ ಹೊರದಬ್ಬಿದವು. ರೈತರು ನಗರಗಳಿಗೆ ವಲಸೆ ಹೋಗುವ ಒತ್ತಾಯ ಸೃಷ್ಟಿಯಾಯಿತು. ಪರಿಣಾಮವಾಗಿ, ಅದಾಗಲೇ ನಿರಾಶೆಗೊಳಗಾಗಿದ್ದ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಬೃಹದಾಕಾರವಾಗಿ ಬೆಳೆಯಿತು.

ಅನಿಯಂತ್ರಿತ ಬಂಡವಾಳಶಾಹಿ ಮತ್ತು ನಿರುದ್ಯೋಗ

ವಿಷಯವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನವ ಉದಾರವಾದಿ ಆಳ್ವಿಕೆಯು ಭಾರತದ ಅರ್ಥವ್ಯವಸ್ಥೆಯನ್ನು ಅನಿಯಂತ್ರಿತ ಬಂಡವಾಳಶಾಹಿಗೆ ಸಮರ್ಪಿಸಿತು. ಈ ಅನಿಯಂತ್ರಿತ ಬಂಡವಾಳಶಾಹಿಯು ಅದರ ಅಗತ್ಯವಾಗಿ ದೊಡ್ಡ ಪ್ರಮಾಣದ ನಿರುದ್ಯೋಗವನ್ನು ಸೃಷ್ಟಿಸುತ್ತದೆ. ಇದು ಸಂಭವಿಸುವ ಕಾರ್ಯವಿಧಾನವನ್ನು ನೋಡೋಣ. ಒಂದು ನಿರ್ದಿಷ್ಟ ಅವಧಿಯಲ್ಲಿ, ಒಂದು ನಿರ್ದಿಷ್ಟ ಮೊತ್ತದ ಬಂಡವಾಳವು 100 ಮಂದಿ ಕೆಲಸಗಾರರನ್ನು ಬಳಸಿಕೊಂಡು 100 ಯೂನಿಟ್ ಉತ್ಪತ್ತಿಯನ್ನು ಉತ್ಪಾದಿಸುತ್ತದೆ ಎಂದು ಭಾವಿಸೋಣ. ಈ ಸನ್ನಿವೇಶದಲ್ಲಿ ಕೆಲಸಗಾರರ ಉತ್ಪಾದಕತೆಯನ್ನು ದ್ವಿಗುಣಗೊಳಿಸುವ ಹೊಸ ತಂತ್ರಜ್ಞಾನ ಲಭಿಸುತ್ತದೆ. ಆನಂತರ, ಕೇವಲ 50 ಮಂದಿ ಕೆಲಸಗಾರರನ್ನು ಬಳಸಿಕೊಂಡೇ ಅದೇ 100 ಯೂನಿಟ್‌ಗಳನ್ನು ಉತ್ಪಾದಿಸಲಾಗುತ್ತದೆ ಮತ್ತು ಉಳಿದ 50 ಮಂದಿ ಕೆಲಸಗಾರರು ನಿರುದ್ಯೋಗಿಗಳಾಗುತ್ತಾರೆ. ನಿರುದ್ಯೋಗದ ಈ ರೀತಿಯ ಏರಿಕೆಯ ಕಾರಣದಿಂದಾಗಿಯೇ ಉದ್ಯೋಗದಲ್ಲಿರುವವರ ಕೂಲಿ ದರವು ಮೊದಲಿಗಿಂತ ಜಾಸ್ತಿಯಾಗುವುದಿಲ್ಲ. ಅಂದರೆ, ಕೆಲಸಗಾರರ ಉತ್ಪಾದಕತೆಯ ಏರಿಕೆಯ ಕಾರಣದಿಂದಾಗಿ ಒಟ್ಟು ವೇತನ–ಬಿಲ್ ಅರ್ಧದಷ್ಟು ಕಡಿಮೆಯಾಗುತ್ತದೆ. ಇದರಿಂದಾಗಿ ಲಾಭದ ಪಾಲು ಹೆಚ್ಚುತ್ತದೆ. ಪರಿಣಾಮವಾಗಿ ವರಮಾನಗಳ ಅಸಮತೆ ಹೆಚ್ಚುತ್ತದೆ. ವರಮಾನಗಳ ಅಸಮತೆಯ ಈ ರೀತಿಯ ಹೆಚ್ಚಳ, ಅಥವಾ, ಮಿಗುತಾಯದ ಹೆಚ್ಚಿನ ಭಾಗವು ಕೂಲಿಯಿಂದ ಲಾಭಕ್ಕೆ ಹೊರಳಿದಾಗ ಒಟ್ಟು ಬಳಕೆಯು ಇಳಿಕೆಯಾಗುತ್ತದೆ (ಶೇಕಡಾವಾರು ಲೆಕ್ಕದಲ್ಲಿ ಕೂಲಿಯ ಹೆಚ್ಚಿನ ಭಾಗವು ಬಳಕೆಯ ಖರ್ಚುಗಳಿಗೆ ವಿನಿಯೋಗವಾಗುತ್ತದೆ; ಆದರೆ, ಲಾಭದ ಹೆಚ್ಚಿನ ಭಾಗವು ಬಳಕೆಗಾಗಿ ಖರ್ಚಾಗುವುದಿಲ್ಲ). ಹಾಗಾಗಿ ಅರ್ಥವ್ಯವಸ್ಥೆಯಲ್ಲಿ ಒಟ್ಟಾರೆ ಬೇಡಿಕೆಯು ವೃದ್ಧಿಯಾಗುವುದಿಲ್ಲ. ಇಂತಹ ಸನ್ನಿವೇಶದಲ್ಲಿ ಅತಿ–ಉತ್ಪಾದನೆಯ ಬಿಕ್ಕಟ್ಟು ಸೃಷ್ಟಿಯಾಗುತ್ತದೆ. ಇದು ನಿರುದ್ಯೋಗವನ್ನು ಮತ್ತಷ್ಟು ಹೆಚ್ಚಿಸುತ್ತದೆ.

ಈ ಪರಿಸ್ಥಿತಿಯ ಬಗ್ಗೆಯೇ ಪ್ರಸಿದ್ಧ ಇಂಗ್ಲಿಷ್ ಅರ್ಥಶಾಸ್ತ್ರಜ್ಞ ಡೇವಿಡ್ ರಿಕಾರ್ಡೊ ಎಡವಿದ್ದು. ನವ ನವೀನ ಯಂತ್ರಗಳ ಬಳಕೆಯು ನಿರುದ್ಯೋಗವನ್ನು ಉಂಟುಮಾಡುತ್ತದೆ ಎಂಬ ಅಂಶವನ್ನು ಒಪ್ಪಿಕೊಳ್ಳುವಾಗ, ಅವುಗಳ ಬಳಕೆಯಿಂದ ಉಂಟಾಗುವ ಹೆಚ್ಚಿನ ಲಾಭವು ಹೂಡಿಕೆಯನ್ನು ಹೆಚ್ಚಿಸುತ್ತದೆ ಮತ್ತು ಆ ಮೂಲಕ ಉತ್ಪಾದನೆಯನ್ನು ಮತ್ತು ಉದ್ಯೋಗಗಳನ್ನೂ ಹೆಚ್ಚಿಸುತ್ತದೆ. ಹೊಸ ಯಂತ್ರಗಳ ಬಳಕೆಯು ಆರಂಭದಲ್ಲಿ ಉದ್ಯೋಗಗಳನ್ನು ತಾತ್ಕಾಲಿಕವಾಗಿ ಇಳಿಕೆ ಮಾಡುತ್ತದೆಯಾದರೂ, ದೀರ್ಘಾವಧಿಯಲ್ಲಿ ಅದು ಉದ್ಯೋಗಗಳನ್ನು ಹೆಚ್ಚಿಸುತ್ತದೆ ಎಂದು ಅವರು ಭಾವಿಸಿದ್ದರು. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಯಂತ್ರೋಪಕರಣಗಳು ತಾತ್ಕಾಲಿಕವಾಗಿ ನಿರುದ್ಯೋಗವನ್ನು ಉಂಟುಮಾಡಿದರೂ ಸಹ, ದೀರ್ಘಾವಧಿಯಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತವೆ. ಆದರೆ, ಜೀನ್ ಬ್ಯಾಪ್ಟಿಸ್ಟ್ ಸೇ ಅವರು ಮಾರುಕಟ್ಟೆಯ ಸಂಬಂಧವಾಗಿ ಪ್ರತಿಪಾದಿಸಿದ ನಿಯಮದಲ್ಲಿ ನಂಬಿಕೆಯುಳ್ಳವರಾಗಿದ್ದ ರಿಕಾರ್ಡೊ, ಬೇಡಿಕೆಯ ಸಮಸ್ಯೆಯ ಬಗ್ಗೆ ಗಮನಹರಿಸಲೇ ಇಲ್ಲ. ಹಾಗಾಗಿಯೇ, ಹಿಂದಿನ ಲಾಭಗಳು ಹೂಡಿಕೆಯಾಗದೇ ಉಳಿಯಬಹುದು ಎಂದು ಅವರು ಊಹಿಸಲಿಲ್ಲ. ಮತ್ತು, ಮಿಗುತಾಯದಲ್ಲಿ ವೇತನದ ಪಾಲನ್ನು ಇಳಿಕೆ ಮಾಡಿ ಲಾಭದ ಪಾಲನ್ನು ಹೆಚ್ಚಿಸುವ ಕ್ರಮವು ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸುವುದಿಲ್ಲ. ಹಾಗಾಗಿ ಹೂಡಿಕೆಯೂ ಹೆಚ್ಚುವುದಿಲ್ಲ. ಅಂದರೆ, ತಂತ್ರಜ್ಞಾನದ ಬದಲಾವಣೆಯಿಂದ ಉಂಟಾದ ಆರಂಭಿಕ ನಿರುದ್ಯೋಗವು ಅನಿಯಂತ್ರಿತ ಬಂಡವಾಳಶಾಹಿಯ ಅಡಿಯಲ್ಲಿ ಮತ್ತಷ್ಟು ದೊಡ್ಡ ಪ್ರಮಾಣದ ನಿರುದ್ಯೋಗಕ್ಕೆ ಕಾರಣವಾಗುತ್ತದೆ.

ನಿರುದ್ಯೋಗ ಭತ್ಯೆಯಲ್ಲ, ಪೂರ್ಣ ವೇತನ ಪಡೆಯುವ ಹಕ್ಕು

ಅನಿಯಂತ್ರಿತ ಬಂಡವಾಳಶಾಹಿಯ ಒಂದು ವೈಶಿಷ್ಟ್ಯವೆಂದರೆ ಅದು ಸದಾ ಕಾಲವೂ ಬೃಹತ್ ಪ್ರಮಾಣದ ನಿರುದ್ಯೋಗದಿಂದ ಬಳಲುತ್ತದೆ. ಈ ಪರಿಸ್ಥಿತಿಗೆ ತಂತ್ರಜ್ಞಾನದ ಬದಲಾವಣೆಗಳೂ ಕೊಡುಗೆ ನೀಡಿವೆ. ತಂತ್ರಜ್ಞಾನವು ಬೃಹತ್ ಪ್ರಮಾಣದ ನಿರುದ್ಯೋಗವನ್ನು ಸೃಷ್ಟಿಸುತ್ತದೆ. ಹಾಗಾಗಿ, ಶ್ರಮಿಕ ಮೀಸಲು ಪಡೆಯ ಪ್ರಮಾಣವು (ಅಂದರೆ, ನಿರುದ್ಯೋಗಿಗಳ ಸಂಖ್ಯೆಯು) ವ್ಯವಸ್ಥೆಯು ಬಯಸುವ ಕನಿಷ್ಠ ಮಟ್ಟಕ್ಕಿಂತಲೂ ಅನೇಕ ಪಟ್ಟು ದೊಡ್ಡದಾಗಿರುತ್ತದೆ. ಆದರೆ, ಸಮಾಜವಾದದ ಅಡಿಯಲ್ಲಿ, ಈ ಪರಿಸ್ಥಿತಿಗೆ ತದ್ವಿರುದ್ಧವಾಗಿ, ತಂತ್ರಜ್ಞಾನದ ಬದಲಾವಣೆಗಳು ಕೆಲಸದ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತವೆ ಮತ್ತು ಕೂಲಿಯಲ್ಲಿ ಯಾವುದೇ ಕಡಿತವಿಲ್ಲದೆ ಕಾರ್ಮಿಕರ ವಿರಾಮದ ಸಮಯವನ್ನು ಹೆಚ್ಚಿಸುತ್ತವೆ. ತಂತ್ರಜ್ಞಾನದ ಬದಲಾವಣೆಗಳು ಶ್ರಮಿಕ ಉತ್ಪಾದಕತೆಯನ್ನು ದ್ವಿಗುಣಗೊಳಿಸುತ್ತವೆ ಎಂಬುದನ್ನು ಈ ಮೊದಲು ಪ್ರಸ್ತಾಪಿಸಲಾಗಿದೆ. ಸಮಾಜವಾದಿ ಅರ್ಥವ್ಯವಸ್ಥೆಯಲ್ಲಿ ತಂತ್ರಜ್ಞಾನದ ಅಳವಡಿಕೆಯು ನಿರುದ್ಯೋಗವನ್ನು ಉಂಟುಮಾಡುವುದಿಲ್ಲ. ಬದಲಿಗೆ, ಕೆಲಸದ ಸಮಯವನ್ನು ಅರ್ಧದಷ್ಟು ಕಡಿತಗೊಳಿಸುತ್ತದೆ. ಅದೇ ಉದ್ಯೋಗವೂ ಇರುತ್ತದೆ ಮತ್ತು ಕೆಲಸಗಾರರು ಹಿಂದಿನ ಅದೇ ವೇತನವನ್ನು ಪಡೆಯುತ್ತಾರೆ. ಆಧುನಿಕ ಕಾಲದಲ್ಲಿ ಪೂರ್ಣ ಉದ್ಯೋಗದ ಸ್ಥಿತಿಯನ್ನು (ಕೆಲಸಗಾರರ ಕೊರತೆ ಬೀಳುವ ಮಟ್ಟಿಗೆ) ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಹಿಂದಿನ–ಸಮಾಜವಾದಿ ದೇಶಗಳು ತಲುಪಿದ್ದವು ಎಂಬುದು ಒಂದು ಆಶ್ಚರ್ಯದ ವಿಷಯವೇ ಅಲ್ಲ. ಈ ಪರಿಸ್ಥಿತಿಗೆ ವ್ಯತಿರಿಕ್ತವಾಗಿ ಎಲ್ಲಾ ಬಂಡವಾಳಶಾಹಿ ದೇಶಗಳೂ ಬೃಹತ್ ಪ್ರಮಾಣದ ನಿರುದ್ಯೋಗದಿಂದ ಬಳಲುತ್ತಿವೆ. ನವ–ಉದಾರವಾದವು ಅನಿಯಂತ್ರಿತ ಬಂಡವಾಳಶಾಹಿಯನ್ನು ಪರಿಚಯಿಸುವ ಮೂಲಕ, ದಿಗಂತದಲ್ಲಿ ಕೊರೊನಾ ಕಾಣಿಸಿಕೊಳ್ಳುವ ಮುನ್ನವೇ ಭಾರತವನ್ನೂ ಸಹ ಅದೇ ಹಾದಿಗೆ ಎಳೆದು ತಂದಿದೆ.

ವ್ಯಕ್ತಿಯೊಬ್ಬನು/ಳು ನಿರುದ್ಯೋಗಿಯಾಗಿದ್ದರೆ ಅದು ವ್ಯಕ್ತಿಯ ತಪ್ಪಲ್ಲ. ಅದು ಆ ವ್ಯಕ್ತಿಯು ಬದುಕುತ್ತಿರುವ ಸಾಮಾಜಿಕ ಏರ್ಪಾಟಿನ ದೋಷವಾಗುತ್ತದೆ: ಆ ಸಾಮಾಜಿಕ **ಪುಟ 14 ಕ್ಕೆ**

ಅನುದಾನ ಹಂಚಿಕೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಅನ್ಯಾಯ...

ಪುಟ 3 ರಿಂದ

ಸಾಧ್ಯವಿಲ್ಲ. ಒಕ್ಕೂಟ ಸರಕಾರದ ಇಂತಹ ಧೋರಣೆ ದೇಶದಲ್ಲಿ ಪ್ರತ್ಯೇಕತಾವಾದದ ಅಪಾಯಕಾರಿ ಬೆಳವಣಿಗೆ ಮೊಳೆಯಲು ಕಾರಣವಾಗಬಹುದು. ಹಾಗಾಗಬಾರದು. ಪ್ರತ್ಯೇಕತಾದ ಅಪಾಯವನ್ನು ತಪ್ಪಿಸಿ ದೇಶದ ಐಕ್ಯತೆ, ಸಮಗ್ರತೆಯನ್ನು ಬಲಪಡಿಸಬೇಕಾದ ಗುರುತರ ಹೊಣೆಗಾರಿಕೆಯು ಒಕ್ಕೂಟ ಸರಕಾರದ ಹೆಗಲ ಮೇಲೆಯೇ ಇದೆ. ಒಕ್ಕೂಟ ಸರಕಾರ ಈ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವಂತಿಲ್ಲ.

ಎಲ್ಲರನ್ನೂ ಒಗ್ಗೂಡಿಸಿ ಬೆಸೆದು ಮುಂದೆ ಕೊಂಡೊಯ್ಯಬೇಕಾದ ಒಕ್ಕೂಟದ ಸರ್ಕಾರ ಮತ್ತು ಆಡಳಿತದಲ್ಲಿರುವ ಬಿಜೆಪಿ ಪಕ್ಷ ತನ್ನ ಏಕಸ್ವಾಮ್ಯತ್ವದ ಸರ್ವಾಧಿಕಾರಿ ನೀತಿಗಳಿಂದ ರಾಜ್ಯಗಳ ಭಾಷೆ, ಸಂಸ್ಕೃತಿ ಮತ್ತು ಸಾಂವಿಧಾನಿಕ ಸಮಾನತೆಯ ಹಕ್ಕುಗಳನ್ನು ದಮನಿಸುತ್ತಿದೆ. ಪ್ರಾದೇಶಿಕ ಭಾಷೆಗಳನ್ನು ಮೂಲೆಗುಂಪು ಮಾಡಿ ಹಿಂದಿ ಅಂತಹ ಭಾಷೆಯ ಹೇರಿಕೆ ಮಾಡುವುದರ ಮೂಲಕ ತನ್ನ ಅಧಿಪತ್ಯವನ್ನು ಸಾಧಿಸಲು ಯತ್ನಿಸಿತು. ಕೇಂದ್ರ ಸರಕಾರ ಹೀಗೆ ಮಾಡ ಬಯಸಿದಾಗ ರಾಜ್ಯಗಳಲ್ಲಿ ಸಹಜವಾಗಿ ಕೇಂದ್ರದ ಒಕ್ಕೂಟ ಸರ್ಕಾರದ ನೀತಿಗಳಿಂದ ದೂರ ಸರಿಯುವ, ವಿರೋಧಿಸುವ ಮನೋಭಾವ ಉಂಟಾಗುತ್ತದೆ. ಪ್ರತ್ಯೇಕತೆಯ ಕೂಗುಗಳನ್ನು ಎಬ್ಬಿಸಲು ಕೆಲವು ಶಕ್ತಿಗಳಿಗೆ ಅವಕಾಶವನ್ನುಂಟು ಮಾಡುತ್ತದೆ. ಎಲ್ಲರನ್ನೂ ಜೊತೆಗೆ ಕೊಂಡೊಯ್ಯಬೇಕಾದ ಒಕ್ಕೂಟದ ಸರಕಾರ ಇನ್ನಾದರೂ ತನ್ನ ವಿಭಜನೆಯ ಮತ್ತು ತಾರತಮ್ಯದ ನೀತಿಗಳನ್ನು ಕೂಡಲೇ ನಿಲ್ಲಿಸಬೇಕು. ಬಲಿಷ್ಠ ರಾಜ್ಯಗಳು ಬಲಿಷ್ಠ ಕೇಂದ್ರವನ್ನು ನಿರ್ಮಿಸುತ್ತವೆ. ಕೇವಲ ಕೇಂದ್ರವಷ್ಟೇ ಬಲಿಷ್ಠವಾಗಿದ್ದು ರಾಜ್ಯಗಳು ದುರ್ಬಲವಾದರೆ ಖಂಡಿತಕ್ಕೂ ಸದೃಢವಾದ ದೇಶವನ್ನು ಕಟ್ಟಲು ಸಾಧ್ಯವಾಗುವುದಿಲ್ಲ. ಇಡೀ ದೇಶದಲ್ಲಿ ಸರ್ವ ರೀತಿಯ ಏಕಸ್ವಾಮ್ಯ ಸ್ಥಾಪಿಸಲು ಹಣೆಸುತ್ತಿರುವ ಕೇಂದ್ರದ ಸರ್ವಾಧಿಕಾರತನದ ನೀತಿಗಳು ಬದಲಾಗಬೇಕು. ಈ ದೇಶದಲ್ಲಿ ಎಲ್ಲಾ ರಾಜ್ಯ ಸರ್ಕಾರಗಳು ಬಿಜೆಪಿ ಆಡಳಿತ ಇರುವ ರಾಜ್ಯಗಳೂ ಸಹ ಕೇವಲ ಒಂದು ಪಕ್ಷನಿಷ್ಠೆಗೆ ಬಲಿಯಾಗದೆ ರಾಜ್ಯದ ಜನತೆಗೆ ರಾಜ್ಯದ ಹಕ್ಕುಗಳಿಗಾಗಿ ಧ್ವನಿ ಎತ್ತುವುದು ಅತ್ಯಂತ ಅವಶ್ಯಕ ಇದೆ.

ಇಲ್ಲಿ ಮತ್ತೊಂದು ಅಂಶವನ್ನು ಗಮನಿಸಬೇಕು. ಪ್ರತ್ಯೇಕ ರಾಷ್ಟ್ರಕ್ಕೆ ಬೇಡಿಕೆ ಇಡುವಂತಹ ಅನಿವಾರ್ಯ ಸ್ಥಿಯನ್ನು ಹಿಂದಿ ಪ್ರದೇಶದವರು ನಮ್ಮ ಮೇಲೆ ಹೇರುತ್ತಿದ್ದಾರೆ ಎಂದ ಸಂಸದ ಡಿಕೆ ಸುರೇಶ ಅವರು ಅದನ್ನು ಒಂದು ಬಿಟ್ಟರೆ ಬಹಳ ಮುಖ್ಯವಾಗಿ ರಾಜ್ಯಕ್ಕೆ ಆಗುತ್ತಿರುವ ಘೋರ ಅನ್ಯಾಯವನ್ನು ಗಂಭೀರವಾಗಿ ಪ್ರಸ್ತಾವಿಸಿದ್ದಾರೆ. ಡಿಕೆ ಸುರೇಶ್ ಅವರ ಬಾಯಿಂದ ಬಂದ ಪ್ರತ್ಯೇಕತೆಯ ಶಬ್ದವನ್ನೇ ಹಿಡಿದು ಪ್ರಮುಖವಾಗಿ ನಮ್ಮ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ಮಾತನಾಡದೆ ಬಿಜೆಪಿ ಮಹಾವಂಚನೆಯನ್ನು ಮಾಡುತ್ತಿದೆ. ನಿಜಕ್ಕೂ ಬಿಜೆಪಿ ನಾಯಕರು ವಿಷಯಾಂತರ ಮಾಡುವಲ್ಲಿ ಮಹಾ ನಿಪುಣರು. ಅದರ ಬದಲು ರಾಜ್ಯಕ್ಕೆ ಸಿಗಬೇಕಾದ ಪಾಲಿಗಾಗಿ ಕೇಂದ್ರದ ವಿರುದ್ಧ ಹೋರಾಟ ಮಾಡಬೇಕಿತ್ತು. ಜನತೆಯ ಜೀವ, ಜೀವನವನ್ನು ಉಳಿಸಲು, ಹಲವು ಮಿತಿಗಳ ನಡುವಿನಲ್ಲಿಯೂ ಸಾಧಿಸಿರುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಗತಿಯನ್ನು ಕಾಯ್ದುಕೊಂಡು ಮುನ್ನಡೆಯಲು ನಮಗೆ ಸಿಗಬೇಕಾದ ಸಂಪನ್ಮೂಲಗಳು ಸಿಗಲೇಬೇಕು.

ಬಿಜೆಪಿ ನಾಯಕರು ವಿಷಯಾಂತರದ ಗುಲ್ಲೆಬ್ಬಿಸಿ ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯಗಳನ್ನು ಮರೆಮಾಚಿ,ಆ ಅನ್ಯಾಯಗಳನ್ನು ಮುಂದುವರಿಸಲು ಮೋದಿಯವರ ಒಕ್ಕೂಟದ ಸರಕಾರವನ್ನು ಸಮರ್ಥಿಸುತ್ತಿರುವ ಈ ಡೋಂಗಿತನವನ್ನು ಜನತೆ ಅರಿಯಬೇಕು ಮತ್ತು ಬಯಲಿಗೆಳೆಯ ಬೇಕಿದೆ.

ಬಸ್ ನಿಲ್ಲಿಸಿದ ಮಹಿಳೆಯರು...

ಪುಟ 3 ರಿಂದ

ಸಂಘಟನೆ ಈ ಬೆಳವಣಿಗೆಯನ್ನು ಅವಲೋಕಿಸಿ ಅದಕ್ಕೊಂದು ಚಳವಳಿಯ ಸ್ವರೂಪ ನೀಡಲು ಕಾರ್ಯಬದ್ಧವಾಯಿತು. ಆಗ ಅವರಿಗೆ ಬೆಂಬಲವಾಗಿ ನಿಂತಿತು ಪಡುಕೋಣೆಯ ಡಿವೈಎಫ್‌ಐ ಸಂಘಟನೆಯ ಉತ್ಸಾಹಿ ಯುವ ಬಳಗ. ಹೋರಾಟದ ರೂಪುರೇಷೆಗಳು ಸಿದ್ಧಗೊಳ್ಳುತ್ತಿರುವಾಗಲೇ ಕುಂದಾಪುರ ಮತ್ತು ಬೈಂದೂರು ತಾಲೂಕಿನ ಕಟ್ಟಡ ಕಾರ್ಮಿಕರ ಸಂಘಟನೆಗಳು ತಮ್ಮ ಸಂಪೂರ್ಣ ಸಹಕಾರದ ಭರವಸೆ ನೀಡಿ ಕೈ ಜೋಡಿಸಿದರು.

ಆರಂಭಿಕ ಹೋರಾಟಗಳು ಸಾರಿಗೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಕೆ, ಪುನರಾವಲೋಕನ ಎಲ್ಲವು ನಡೆದರೂ ಫಲ ಸಿಗದೇ ಇದ್ದಾಗ ಸ್ಥಳೀಯ ಹೋರಾಟವು ಮಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಮುಂದೆ ಸ್ಥಳಾಂತರವಾಯಿತು. ಬೈಂದೂರಿನಲ್ಲಿ ನಡೆದ "ಜನತಾ ದರ್ಶನ" ಕಾರ್ಯಕ್ರಮದಲ್ಲಿ ಪ್ರಸ್ತಾವಿಸಲಾಯಿತು. ಛಲ ಬಿಡದೆ ಹೋರಾಟವನ್ನು ಜೀವಂತವಾಗಿರಿಸಿದ ಜನವಾದಿ ಮತ್ತು ಸಹ ಸಂಘಟನೆಗಳ ನ್ಯಾಯಯುತವಾದ ಹಕ್ಕೊತ್ತಾಯವನ್ನು ಸಾರಿಗೆ ಇಲಾಖೆ ಕೊನೆಗೂ ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ರಸ್ತೆ ನಿಗಮದ ಮಂಗಳೂರು ವಿಭಾಗದ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳು ಆದೇಶವೊಂದನ್ನು ನೀಡಿ "ಪ್ರಯಾಣಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕುಂದಾಪುರ –ಭಟ್ಕಳ ಮಾರ್ಗದ ಎಲ್ಲಾ ಸಾಮಾನ್ಯ ಸಾರಿಗೆ ಬಸ್ಸುಗಳಿಗೆ ಮಹಾರಾಜ ಸ್ವಾಮಿ ದೇವಸ್ಥಾನದ ಬಳಿ ನಿಲುಗಡೆ ನೀಡಿ ವಿದ್ಯಾರ್ಥಿಗಳನ್ನು ಮತ್ತು ಸಾರ್ವಜನಿಕ ಪ್ರಯಾಣಿಕರನ್ನು ಹತ್ತಿಸಿ/ಇಳಿಸಿಕೊಂಡು ಸಾರಿಗೆ ಕಾರ್ಯಾಚರಣೆ ಮಾಡುವುದು" ಎಂದು ಸೂಚಿಸಿದರು.

ದೇವರು ಕೊಟ್ಟರೂ....

ಆದೇಶ ಏನೋ ಬಂತು. ಆದರೆ ಮರವಂತೆಯಲ್ಲಿ ಬಸ್ಸುಗಳಾವುವೂ ನಿಲುಗಡೆ ಆಗಲೇ ಇಲ್ಲ!

"ನಿಮಗೆ ಬೇಕಾದಲ್ಲೆಲ್ಲಾ ಸ್ಟಾಪ್ ಕೊಡೋದಕ್ಕಾಗಲ್ಲಮ್ಮಾ...." ಕಂಡಕ್ಟರ್ ಮಹಿಳೆಯರಿಗೆ ದಬಾಯಿಸಿದಾಗ ಜನವಾದಿ ಮತ್ತೆ ಸಿಡಿದೆದ್ದಿತು!

ಜಿಲ್ಲಾಧಿಕಾರಿಗಳ ಗಮನಕ್ಕೆ ವಿಚಾರವನ್ನು ವಿವರಿಸಲಾಯಿತು. ಪೂರ್ವಾಪರ ತಿಳಿದುಕೊಂಡು ಅವರು ಸಂಬಂಧಿತರನ್ನು ವಿಚಾರಿಸಿಕೊಂಡರು. ಜನವಾದಿ ಸಂಘಟನೆ ಕುಂದಾಪುರದ ಕೆ.ಎಸ್. ಆರ್.ಟಿ.ಸಿ.ಅಧಿಕಾರಿಗಳನ್ನು ಭೇಟಿಯಾಗಿ ಹಿಂದಿನ ಆದೇಶ ಮತ್ತು ಆ ಮೇಲಿನ ಬೆಳವಣಿಗೆಗಳನ್ನು ಚರ್ಚಿಸಿ ಮರು ಮನವಿಯನ್ನು ನೀಡಿದಾಗ ಇಲಾಖೆ ಧನಾತ್ಮಕ ಸ್ಪಂದನೆ ನೀಡಿದಾಗ ಬಸ್ಸು ಜನ ಸಾಮಾನ್ಯರ ಕೈಗೆಟಕುವುದು ಖಚಿತವಾಯಿತು.

ತೀರಾ ಸರಳ ಅಥವಾ ಸಣ್ಣ ವಿಷಯ ಅಂದುಕೊಳ್ಳಬಹುದಾದ ಒಂದು ಹಳ್ಳಿ ಮೂಲೆಯ ಧ್ವನಿ ಸರಕಾರದ ಯೋಜನೆಗಳನ್ನು ಹೀಗೂ ಜನರೆಡೆಗೆ ತಲುಪಿಸಬಹುದಾದ ಅತ್ಯುತ್ತಮ ದಾರಿಯನ್ನು "ಜನವಾದಿ" ಮಹಿಳೆಯರು ತೋರಿಸಿಕೊಟ್ಟರು. ಒಂದು ಜನಪರ ಕಾಳಜಿಗೆ ಬೆಂಬಲವಾಗಿ ನಿಲ್ಲುವ ಸಹ ಸಂಘಟನೆಗಳ ಸ್ಪಂದನೆ ಒಗ್ಗಟ್ಟಿನಲ್ಲಿರುವ ಬಲವನ್ನು ಮತ್ತೆ ಸಾಬೀತುಪಡಿಸಿತು. ಈಗ ಮರವಂತೆಯ –ಮಾರಸ್ವಾಮಿ ನಿಲ್ದಾಣದಲ್ಲಿ ಸರಕಾರಿ ಬಸ್ಸಿಗೂ ನಿಲುಗಡೆ ಇದೆ, ಪ್ರವಾಸಿಗರೂ ಗಮನಿಸಲಿ.

–ರಮೇಶ್ ಗುಲ್ವಾಡಿ

ಕಾಡುತ್ತಿದೆ ನಿರುದ್ಯೋಗದ ಪಿಡುಗು.....

ಪುಟ 13 ರಿಂದ

ಏರ್ಪಾಟು, ಆ ವ್ಯಕ್ತಿಗೆ ಉದ್ಯೋಗ ಒದಗಿಸುವಲ್ಲಿ ಅಸಮರ್ಥವಾಗಿದೆ ಎಂಬುದು ಸಾಬೀತಾಗಿದೆ. ನಂತರ ಉದ್ಭವಿಸುವ ಪ್ರಶ್ನೆ: ಉದ್ಯೋಗ ಕೋರಿ ಪ್ರಜಾಸತ್ತಾತ್ಮಕವಾಗಿ ಮಂಡಿಸಬಹುದಾದ ಹಕ್ಕೊತ್ತಾಯವೇನು? ಪ್ರಜಾಸತ್ತಾತ್ಮಕ ಹಕ್ಕೊತ್ತಾಯ ಎಂದರೆ ಸಮಾಜವಾದವನ್ನು ಕೇಳುವುದು ಮಾತ್ರವಲ್ಲ (ಏಕೆಂದರೆ ಸಮಾಜವಾದವನ್ನು ಕೇಳುವುದು ಎಂದರೆ ನಿರುದ್ಯೋಗಿಗಳಿಗೆ ಯಾವುದೇ ಪರಿಹಾರವನ್ನು ಮುಂದೂಡುವುದು ಎಂದಾಗುತ್ತದೆ); ಅದು ನಿರುದ್ಯೋಗಿಗಳ ತಕ್ಷಣದ ಅಗತ್ಯಗಳನ್ನು ಆಧರಿಸಿದ ಹಕ್ಕೊತ್ತಾಯವೂ ಹೌದು, ಆದರೆ ಅದು ಅನಿಯಂತ್ರಿತ ಬಂಡವಾಳಶಾಹಿಯ ಅನುಮತಿಗೆ ಸೀಮಿತವಾಗಿರುವುದಿಲ್ಲ.

ವ್ಯಕ್ತಿಗಳನ್ನು ಬಾಧಿಸುವ ನಿರುದ್ಯೋಗದ (ಮತ್ತು ಅದರ ಪರಿಣಾಮವಾಗಿ ಅವರು ಅನುಭವಿಸುವ ಬಡತನದ) ಜವಾಬ್ದಾರಿಯನ್ನು ಸಮಾಜವು ತೆಗೆದುಕೊಳ್ಳಬೇಕಾಗುತ್ತದೆ ಎಂಬ ಅಂಶವನ್ನು ಭಾರತದ ಬೂರ್ಜ್ವಾ ರಾಜಕೀಯ ಪಕ್ಷಗಳು ಈಗಾಗಲೇ ಒಲ್ಲದ ಮನಸ್ಸಿನಿಂದ ಒಪ್ಪಿಕೊಂಡಿವೆ ಮತ್ತು ಎಲ್ಲರಿಗೂ "ಕನಿಷ್ಠ ಮಟ್ಟದ ವರಮಾನ" ಒದಗಿಸುವ ಬಗ್ಗೆಯೂ ಮಾತನಾಡಿವೆ. ಆದರೆ, ಈ ಪ್ರಸ್ತಾಪಿತ ಕನಿಷ್ಠ ವರಮಾನದ ಮೊತ್ತವು ನಿಕೃಷ್ಟವಾಗಿರುವುದರ ಹೊರತಾಗಿ, ಯಾವುದೇ ಸಮಯದಲ್ಲಿ ಅದು ಮಂಗ ಮಾಯವಾಗಲೂಬಹುದು. ಅದಕ್ಕಿಂತಲೂ ಮಿಗಿಲಾಗಿ, ಈ ಕನಿಷ್ಠ ಮಟ್ಟದ ವರಮಾನದ ಪರಿಕಲ್ಪನೆಯು ಅಧಿಕಾರಾರೂಢ ಸರ್ಕಾರದ ಕಡೆಯಿಂದ ದೊರೆತ ಒಂದು ಬಕ್ಷೀಸು ಎನಿಸಿಕೊಳ್ಳುತ್ತದೆ ಅಥವಾ ಸರ್ಕಾರವು ಜನರಿಗೆ ಮಾಡಿದ ಉಪಕಾರದ ಒಂದು ಸ್ವರೂಪವನ್ನು ಪಡೆಯುತ್ತದೆ. ಆದರೆ, ಜನರು ಭಿಕ್ಷುಕರಲ್ಲ. ದೇಶದ ನಾಗರಿಕರಾಗಿ ಮತ್ತು ಒಂದು ಹಕ್ಕಿನ ವಿಷಯವಾಗಿ, ಅವರ ಘನತೆಗೆ ತಕ್ಕ ಉದ್ಯೋಗ ಪಡೆಯುವುದು ಅವರ ಹಕ್ಕು (ಅಥವಾ, ಉದ್ಯೋಗ ಒದಗದಿದ್ದರೆ, ಬಿಡಿಗಾಸಿನ ನಿರುದ್ಯೋಗ ಭತ್ಯೆಯನ್ನಲ್ಲ, ಪೂರ್ಣ ವೇತನ ಪಡೆಯುವುದು ಅವರ ಹಕ್ಕು).

ಖಾತರಿಪಡಿಸುವುದು ಸಾಧ್ಯವಿದೆ

ಉದ್ಯೋಗದ ಹಕ್ಕನ್ನು, ಸಂವಿಧಾನವು ಈಗಾಗಲೇ ಖಾತರಿಪಡಿಸಿರುವ ರಾಜಕೀಯ ಮತ್ತು ನಾಗರಿಕ ಹಕ್ಕುಗಳಿಗೆ ಸಮನಾಗಿ, ಸಾರ್ವತ್ರಿಕವಾಗಿ, ಸಾಂವಿಧಾನಿಕ–ಖಾತರಿ ಮತ್ತು ನ್ಯಾಯ ನಿರ್ಣಯಕ್ಕೆ ಒಳಪಡುವ ರೀತಿಯಲ್ಲಿ ಮಾನ್ಯ ಮಾಡಿ ಅದನ್ನು ಕಾರ್ಯರೂಪದಲ್ಲಿ ತರಲು, ಹೆಚ್ಚೆಂದರೆ, ದೇಶದ ಜಿಡಿಪಿಯ ಶೇ.3ಕ್ಕಿಂತ ಹೆಚ್ಚು ವೆಚ್ಚ ತಗಲುವುದಿಲ್ಲ. ಇದನ್ನು ಒಂದು ಸರಳ ಲೆಕ್ಕಾಚಾರದ ಮೂಲಕವೂ ವಿವರಿಸಬಹುದು. ನಿರುದ್ಯೋಗಿ ವ್ಯಕ್ತಿಗಳಿಗೆ ನೀಡಬಹುದಾದ ವೇತನವನ್ನು ತಿಂಗಳಿಗೆ ಸರಾಸರಿ 20,000 ರೂಗಳು ಎಂದು ತೆಗೆದುಕೊಂಡರೆ, ನಿರುದ್ಯೋಗ ದರವನ್ನು ಶೇ. 10 ಎಂದು ಊಹಿಸಿದರೆ ಅಥವಾ ಸರಿಸುಮಾರು 4 ಕೋಟಿ ನಿರುದ್ಯೋಗಿಗಳಿಗೆ– ಎಲ್ಲಾ ನಿರುದ್ಯೋಗಿಗಳಿಗೂ ಈ ವೇತನವನ್ನು ಪಾವತಿಸಿದರೆ – ಈ ಮೊತ್ತವನ್ನು ಪಾವತಿಸಲು ಸುಮಾರು 9.6 ಲಕ್ಷ ಕೋಟಿ ರೂಪಾಯಿಗಳನ್ನು ಸಂಗ್ರಹಿಸಬೇಕಾಗುತ್ತದೆ. ಇದು, ಪ್ರಸ್ತುತ 2023–24ರ ಬೆಲೆಗಳಲ್ಲಿ ಅಧಿಕೃತವಾಗಿ ಅಂದಾಜು ಮಾಡಿದ ಜಿಡಿಪಿಯ ಶೇ. 3.2ರಷ್ಟಾಗುತ್ತದೆ.

ಅಷ್ಟು ಸಂಖ್ಯೆಯ ನಿರುದ್ಯೋಗಿಗಳಿಗೆ ಕೊಳ್ಳುವ ಶಕ್ತಿಯನ್ನು ತುಂಬುವ ಕ್ರಮವೇ ಸರಕು–ಸಾಮಗ್ರಿಗಳಿಗೆ ಒಂದು ಬೇಡಿಕೆಯನ್ನು ಸೃಷ್ಟಿಸುತ್ತದೆ. ಅರ್ಥವ್ಯವಸ್ಥೆಯ ಬೇಡಿಕೆ–ನಿರ್ಬಂಧಿತವಾಗಿರುವ ಇಂದಿನ ಸನ್ನಿವೇಶದಲ್ಲಿ ಈ ಬೇಡಿಕೆಯು ದೊಡ್ಡ ಪ್ರಮಾಣದ ಉತ್ಪಾದನೆಗೆ ಕಾರಣವಾಗುತ್ತದೆ. ಈ ಉತ್ಪಾದನೆಯು ಉದ್ಯೋಗವನ್ನು ಸೃಷ್ಟಿಸುತ್ತದೆ. ಹಾಗಾಗಿ, ನಿರುದ್ಯೋಗಿ ಪಡೆಯ ಒಂದು ಸಣ್ಣ ಸಂಖ್ಯೆಗಷ್ಟೇ ಈ ವೇತನವನ್ನು ಪಾವತಿಸಬೇಕಾಗುತ್ತದೆ. ಈ ವೇತನದ ಫಲಾನುಭವಿಗಳು ಮಾಡುವ ಖರ್ಚುಗಳ ಮೂಲಕ ಉಳಿದವರಿಗೆ ಉದ್ಯೋಗ ದೊರಕುತ್ತದೆ. ಹಾಗಾಗಿ, ಬೊಕ್ಕಸದ ಮೇಲೆ ಬೀಳುವ ಹೊರೆಯು ಜಿಡಿಪಿಯ ಶೇ. 3.2ಕ್ಕಿಂತಲೂ ಕಡಿಮೆ ಇರುತ್ತದೆ. ಒಬ್ಬ ನಿರುದ್ಯೋಗಿ ವ್ಯಕ್ತಿಗೆ ಪಾವತಿಸುವ ವೇತನವು ಸೃಷ್ಟಿಸುವ ಸರಕು–ಸಾಮಗ್ರಿಗಳ ಮೇಲಿನ ಬೇಡಿಕೆಯು ಮತ್ತೊಬ್ಬ ಹೆಚ್ಚುವರಿ ವ್ಯಕ್ತಿಗೆ ಉದ್ಯೋಗವನ್ನು ಒದಗಿಸುತ್ತದೆ ಎಂದು ಊಹಿಸಿಕೊಂಡರೆ, ಆಗ ಸರ್ಕಾರವು ಖರ್ಚು ಮಾಡಬೇಕಾದ ಮೊತ್ತವು, ಒಟ್ಟು ಸಂಖ್ಯೆಯ ನಿರುದ್ಯೋಗಿಗಳಿಗೆ ಪಾವತಿಸಲು ಬೇಕಾಗುವುದೆಂದು ಅಂದಾಜು ಮಾಡಿದ್ದ 9.6 ಲಕ್ಷ ಕೋಟಿ ರೂಪಾಯಿಗಳ ಅರ್ಧದಷ್ಟಾದರೆ ಸಾಕಾಗುತ್ತದೆ. ಅಂದರೆ, ಸರ್ಕಾರವು ಈ ಬಾಬ್ತು ಮಾಡಬೇಕಾದ ಖರ್ಚು 4.8 ಲಕ್ಷ ಕೋಟಿ ರೂಪಾಯಿಗಳಾಗುತ್ತದೆ. ಈ ಮೊತ್ತವು ಜಿಡಿಪಿಯ ಶೇ. 1.6ರಷ್ಟಾಗುತ್ತದೆ. ಅದಕ್ಕಿಂತಲೂ ಮುಖ್ಯವಾಗಿ, 4.8 ಲಕ್ಷ ಕೋಟಿ ರೂಪಾಯಿಗಳ ಮೌಲ್ಯದ ಅಧಿಕ ಉತ್ಪಾದನೆಯು ಸರ್ಕಾರಕ್ಕೆ ಒಂದಿಷ್ಟು ತೆರಿಗೆ ಆದಾಯವನ್ನೂ ತರುತ್ತದೆ. ಇದೇ ಅವಧಿಯಲ್ಲಿ ಒಳಹರಿಯುವ ತೆರಿಗೆಯನ್ನೂ ಸಹ ಸರ್ಕಾರ ಖರ್ಚು ಮಾಡುತ್ತದೆ ಎಂದು ಭಾವಿಸಿದರೆ, ತೆರಿಗೆಯ ಮೂಲಕ ಅಧಿಕವಾಗಿ ಸಂಗ್ರಹಿಸಬೇಕಾದ ಮೊತ್ತವನ್ನು ಪೂರ್ಣವಾಗಿ ಜಿಡಿಪಿಯ ಶೇ. 1.6ರವರೆಗೆ ಹೆಚ್ಚಿಸಬೇಕಾಗಿಲ್ಲ. ಅಗತ್ಯವಿರುವ ಅಧಿಕ ತೆರಿಗೆ ಸಂಗ್ರಹದ ಮೊತ್ತವು ಇನ್ನೂ ಚಿಕ್ಕದಿರುತ್ತದೆ. ಅದು ಜಿಡಿಪಿಯ ಶೇ. 1.5ಕ್ಕಿಂತಲೂ ಕಡಿಮೆ ಇರುತ್ತದೆ. ಈ ಹಣವನ್ನು, ಭಾರತದ ಜನಸಂಖ್ಯೆಯ ಮೇಲ್ತುದಿಯ ಶೇ. 1ರಷ್ಟು ಮಂದಿ ಶ್ರೀಮಂತರ ಸಂಪತ್ತಿನ ಮೇಲೆ ಶೇ. 0.8ರಷ್ಟು ಸಂಪತ್ತು ತೆರಿಗೆಯನ್ನು ವಿಧಿಸುವ ಮೂಲಕ ಸಂಗ್ರಹಿಸಬಹುದು! ಈ ಹೊರೆಯು ಅದೆಷ್ಟು ಚಿಕ್ಕದು ಎಂದರೆ, ಈ ಉದ್ಯೋಗದ ಹಕ್ಕನ್ನು ಒದಗಿಸದಿರುವುದು (ಈ ಉದ್ದೇಶಕ್ಕಾಗಿ ಸಂವಿಧಾನದ ತಿದ್ದುಪಡಿಯು ಕಷ್ಟಕರವೆಂದು ಕಂಡುಬಂದರೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ರೀತಿಯಲ್ಲಿ ಒಂದು ಸಂಸದೀಯ ಶಾಸನದ ಮೂಲಕವೂ ಜಾರಿಗೊಳಿಸಬಹುದು) ಜವಾಬ್ದಾರಿಯಿಂದ ನುಣುಚಿಕೊಳ್ಳುವ ಒಂದು ಮಹಾ ಪಾತಕವಾಗಿ ತೋರುತ್ತದೆ.

ರಾಜ್ಯವ್ಯಾಪಿ ಮಾನವ ಸರಪಳಿ-ಸೌಹಾರ್ದ ಸಭೆಗಳು...

ಪುಟ 16 ರಿಂದ

ಹೆದ್ದಾರಿಯಲ್ಲಿ ನಡೆದಿದೆ. ಹಿಂದೂ ದರ್ಮಗಳು ಗುರುಗಳಾದ ಶ್ರೀ ಪಟ್ಟದ ರಾಜಶೇಖರ ಸ್ವಾಮೀಜಿ, ಮುಸ್ಲಿಂ ಧರ್ಮಗುರುಗಳಾದ ಖಾಜಾ ಹುಸೇನ್, ಪರ್ತಕರ್ತರಾದ ಮಾರಣ್ಣ, ಗೋಪಾಲಕೃಷ್ಣ ಹರಳಹಳ್ಳಿ, ರಘು ಮುಂತಾದವರು ಮಾತನಾಡಿದರು. ಸಂವಿಧಾನ ಪೀಠಿಕೆಯನ್ನು ಓದಿ ಪ್ರತಿಜ್ಞೆ ಸ್ವೀಕರಿಸಿಲಾಯಿತು.

ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಗಂಗಾವತಿಗಳಲ್ಲಿ ಕಾರ್ಯಕ್ರಮಗಳು ನಡೆದಿವೆ. ಕೊಪ್ಪಳದ ಅಶೋಕ ಸರ್ಕಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಗಿದೆ. ಹಿರಿಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರು, ಮಹಂತೇಶ ಗೊಂಡ್ವಾಳ, ಜಿ.ನಾಗರಾಜ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಗಾಂಧಿ ಚೌಕದಿಂದ ಗಂಗಾವತಿ ಬಸ್ ನಿಲ್ದಾಣದವರೆಗೆ ನಡೆದ ಗಂಗಾವತಿ ಕಾರ್ಯಕ್ರಮದಲ್ಲಿ ಸುಮಾರು ಎರಡು ಸಾವಿರ ಜನರು ಕೈಕೈ ಹಿಡಿದು ನಿಂತಿದ್ದಾರೆ. ನಂತರ ಬಸ್ ನಿಲ್ದಾಣದಲ್ಲಿ ಬಹಿರಂಗ ಸಭೆ ನಡೆದಿದೆ. ಕಾರ್ಯಕ್ರಮದಲ್ಲಿ ಸಾಹಿತಿಗಳಾದ ಸಿ.ಎಚ್.ನಾರನಾಳ್, ಅಜ್ಮೀರ್ ನಂದಾಪುರ, ರಮೇಶ್ ಗಬ್ಬೂರು, ಚಂದ್ರಪ್ಪ ಹೊಸ್ಕೆರ, ನಿರುಪಾದಿ, ಹನುಮಂತಪ್ಪ ಗಿಡ್ಡಿ, ನಗರ ಸಭೆ ಸದಸ್ಯರಾದ ಶೇಖ್ ನಬಿ, ವಕೀಲರಾದ ಹುಸೇನಪ್ಪ ಹಂಚಿನಾಳ, ಎಸ್. ಎಫ್.ಐ. ರಾಜ್ಯ ಅಧ್ಯಕ್ಷರಾದ ಅಮರೇಶ್ ಕಡಗದ್ ಮುಂತಾದವರು ಪಾಲ್ಗೊಂಡಿದ್ದಾರೆ.

ರಾಯಚೂರು ಜಿಲ್ಲೆಯ ರಾಯಚೂರು, ದೇವದುರ್ಗ, ಲಿಂಗಸುಗೂರು, ಮಾನ್ವಿ, ಸಿಂಧನೂರು ಒಟ್ಟು ಐದು ಕಡೆಗಳಲ್ಲಿ ಮಾನವ ಸರಪಳಿ ನಡೆದಿದೆ. ರಾಯಚೂರಿನ ಅಂಬೇಡ್ಕರ್ ಸರ್ಕಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ವೀರ ಹನುಮಾನ್, ಆಂಜನೇಯ ಜಾಲಿಬೆಂಚಿ, ಕೆ.ಜಿ. ವೀರೇಶ್‌ಮುಂತಾದವರು ಪಾಲ್ಗೊಂಡಿದ್ದರು.

ಉತ್ತರ ಕನ್ನಡ: ಕಾರವಾರದಲ್ಲಿ ದೀಪಹಚ್ಚುವ ಮೂಲಕ ಗಾಂಧಿಜಿಯವರಿಗೆ ಗೌರವ ನಮನವನ್ನು ಸಲ್ಲಿಸಲಾಯಿತು. ಸೌಹಾರ್ದ ಪರಂಪರೆಯ ಪ್ರೀತಿಪದಗಳ ಪಯಣ ಮೆರವಣಿಗೆ ಸುಭಾಸ್ ವೃತ್ತಕ್ಕೆ ಆಗಮಿಸಿತು. ಅಲ್ಲಿ ಮಾನವ ಸರಪಳಿ ರಚಿಸಲಾಯಿತು.

ಪತ್ರಕರ್ತರಾದ ಗಂಗಾಧರ ಹಿರೇಗುತ್ತಿ ಮಾತನಾಡಿದರು. ರಾಮಾ ನಾಯ್ಕ ಸೌಹಾರ್ದತೆಯ ಪ್ರತಿಜ್ಞೆ ಬೋಧಿಸಿದರು. ಲೇಖಕರಾದ ಎಂ. ಎ ಖತೀಬ, ಪ್ರಭಾಕರ ಮ್ಹಾಳ್ಸೇಕರ್, ಯಮುನಾ ಗಾಂವ್ಕರ್ ಸಮಾಜಸೇವಕರಾದ ಸ್ವಾಮ್ಸನ್ ಡಿಸೋಜಾ, ಎಂ.ಇ. ಶೇಖ್, ಸಫೂರಾ ಶೇಖ್, ವಾಸುದೇವ ಶೇಟ್, ದಲಿತ ಸಂಘರ್ಷ ಸಮಿತಿಗಳ ಪರವಾಗಿ ಶ್ಯಾಮಸುಂದರ, ದೀಪಕ ಕುಡಾಲ್ಕರ್ ಇನ್ನೂ ಹಲವರು ಪಾಲ್ಗೊಂಡಿದ್ದರು. ಅಂಕೋಲಾ ನಗರದಲ್ಲಿ ಇಡೀ ದಿನ ವಾಹನ ಜಾಥಾ ಮೂಲಕ ಕಾರ್ಯಕರ್ತರು ಸೌಹಾರ್ದ ಸಂದೇಶಗಳನ್ನು ಸಾರಿದರು. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದಲ್ಲಿ ನಡೆದ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಶಾಂತರಾಮ ಎಸ್.ನಾಯಕ, ಹೆಚ್.ಬಿ.ನಾಯಕ, ಅಲ್ಲದೇ ಹಲವಾರು ಹಿರಿಯ ಸಾಹಿತಿಗಳು, ಪ್ರಮುಖರು ಭಾಗವಹಿಸಿದ್ದರು. ಅಲ್ಲದೇ ದಾಂಡೇಲಿ ಹಳಿಯಾಳ, ಜೋಯಿಡಾ, ಕುಮಟಾ, ಹೊನ್ನಾವರ, ಭಟ್ಕಳ, ಶಿರಸಿ, ಯಲ್ಲಾಪುರ, ರಾಮನಗರ ಮುಂತಾದೆಡೆ ಜನತೆ ಗಾಂಧಿ ನೆನಪಿಗೆ ಸೇರಿದ್ದರು.

ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸರ್ಕಲ್‌ನಿಂದ ಜುಬ್ಲಿ ಸರ್ಕಲ್‌ವರೆಗೆ ಸುಮಾರು 1.5 ಕಿ.ಮೀ ಸೌಹಾರ್ದತಾ ಮಾನವ ಸರಪಳಿ ಕಾರ್ಯಕ್ರಮ ನಡೆಸಲಾಯಿತು. ಡಾ. ರಂಜಾನ್ ದರ್ಗಾ, ಡಾ. ಸಿದ್ದನಗೌಡ ಪಾಟೀಲ, ಡಾ. ಸದಾಶಿವ ಮರ್ಜಿ, ಬಸವರಾಜ ಸೂಳಿಬಾವಿ, ಎಸ್.ಎಮ್. ಬುಡನಖಾನ, ಮುಸ್ತಾಕ್ ಹಾವೇರಪೇಟ, ಡಾ. ಲಿಂಗರಾಜ ಅಂಗಡಿ, ಡಾ. ಅಪ್ಪಲ್ ಭಾವಿಕಟ್ಟಿ, ಗಾಯತ್ರಿ ಹಡಪದ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಶಿಕ್ಷಕರು ಸೇರಿಂತೆ ಸುಮಾರಿ 70 ಜನ ಹಾಗೂ ವಿವಿಧ ಕಾಲೇಜುಗಳಿಂದ ಸುಮಾರು 1000 ದಷ್ಟು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಹುಬ್ಬಳ್ಳಿ ಎಪಿಎಂಸಿ ಮುಖ್ಯದ್ವಾರದಲ್ಲಿ ಹುಬ್ಬಳ್ಳಿ-ಧಾರವಾಡ ಬಿ.ಆರ್.ಟಿ.ಎಸ್. ಕಾರಿಡಾರ್ ಹಮಾಲಿ ಕಾರ್ಮಿಕರು ಅಂದಾಜು 100 ಜನ ಮಾನವ ಸರಪಳಿ ಕಾರ್ಯಕ್ರಮ ನಡೆಸಿದ್ದಾರೆ.

ಹಾವೇರಿಯಲ್ಲಿ ಜನವರಿ 30 ರಂದು ಮಹಾತ್ಮ ಗಾಂಧೀಜಿಯವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಗಾಂಧೀ ವೃತ್ತದಿಂದ ಹೊಸಮನಿ ಸಿದ್ದಪ್ಪ ವೃತ್ತದವರೆಗೂ ಭಾವೈಕ್ಯ ಮೆರವಣಿಗೆ ನಡೆಸಿ ಅಲ್ಲಿ, ಸೌಹಾರ್ದ ಮಾನವ ಸರಪಳಿ ರಚಿಸಲಾಯಿತು.

ಹೊಸಮಠದ ಬಸವ ಶಾಂತಲಿಂಗ ಶ್ರೀಗಳು, ಗೌರಿ ಮಠದ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯರು, ಸೆಂಟ್ ಆನ್ ಚರ್ಚ್‌ನ ಪಾದ್ರಿ ಮುಖ್ಯಸ್ಥರಾದ ಜೋಸೆಫ್ ಬಾಲಯ್ಯ, ಮೌಲವಿಗಳಾದ ದಾದಾಪೀರ್ ಮುಲ್ಲಾ ಅವರು ಶಾಂತಿ, ಸೌಹಾರ್ದತೆಯ ಸಂದೇಶ ನೀಡಿದರು.

ಹಿರಿಯ ಸಾಹಿತಿಗಳಾದ ಸತೀಶ ಕುಲಕರ್ಣಿ, ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ಹಿರಿಯ ಹೋರಾಟಗಾರರಾದ ಬಸವರಾಜ ಹಾದಿಮನಿ, ಹಸೀನಾ ಹೆಡಿಯಾಲ, ಪರಿಮಳ ಜೈನ್ ಮಾತನಾಡಿದರು. ರಾಜ್ಯ ರೈತ ಸಂಘಟನೆಯ ಶಿವಬಸಪ್ಪ ಗೋವಿ, ಅಲೆಮಾರಿ ಸಂಘಟನೆಯ ಶೆಟ್ಟಿ ವಿಭೂತಿ ನಾಯಕ, ದಲಿತ ಸಂಘಟನೆಗಳ ಒಕ್ಕೂಟದ ಮುಖಂಡರಾದ ಅಶೋಕ ಮರೆಣ್ಣನವರ, ಸಾಹಿತಿ ಕಲಾವಿದರ ಬಳಗದ ಪೃಥ್ವಿರಾಜ್ ಬೆಟಗೇರಿ ಸೇರಿದಂತೆ ನೂರಾರು ಜನ ಪಾಲ್ಗೊಂಡಿದ್ದರು.

ತುಮಕೂರಿನಲ್ಲಿ ಸೌಹಾರ್ದತಾ ಮಾನವ ಸರಪಳಿಯ ಭಾಗವಾಗಿ ತುಮಕೂರಿನ ಸ್ವಾತಂತ್ರ್ಯ ಚೌಕದಿಂದ ಟೌನ್ ಹಾಲ್ ವೃತ್ತದ ತನಕ ನಡೆದ ಮಾನವ ಸರಪಳಿಯನ್ನು ರಚಿಸಲಾಗಿತ್ತು. ಚಿಂತಕರಾದ ದೊರೈರಾಜು, ಸಿ.ಯತಿರಾಜು, ಮುರಳೀಧರ್, ಶೈಲಾ ನಾಗರಾಜ್, ಅಸಾದುಲ್ಲಾ ಖಾನ್ ಸರಸಿಂಹ. ಮುಜೀಬ್, ಸುಬ್ರಮಣ್ಯ ಮುಂತಾದವರು ಪಾಲ್ಗೊಂಡಿದ್ದರು.

ಗದಗ ಜಿಲ್ಲೆ ಗಜೇಂದ್ರಗಡ ನಗರದ ಕೆ.ಕೆ. ಸರ್ಕಲ್‌ನಲ್ಲಿ ಗಾಂಧಿಜೀಯವರ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಶ್ರೀ ವಿಜಯ ಮಾಹಾಂತೇಶ ಸ್ವಾಮಿಗಳು ಕುದರಿ ಮೋತಿ ಮಠ, ಫಾದರ್ ಜೋಷಫ್, ಖಾಜಾ ನಿಜಾಮ್ ಪುದ್ದಿನ್ ಟೇಕೆದ್ ಭಾವನವರು ಸೌಹಾರ್ದ ಸಂದೇಶ ನೀಡಿದರು. ಸೌಹಾರ್ದತೆಯ ಸಂದೇಶವನ್ನು ಬಿ.ಎ. ಕೆಂಚರೆಡ್ಡಿ ಅವರು ಓದಿದರು. ಸಂದೇಶ ಘೋರ್ಪಡೆ, ಮಾಜಿ ಚೇರ್ಮನ್ ಎ.ಡಿ. ಕೋಲಕಾರ್ ಅವರು ಮಾತನಾಡಿದರು. ವಕೀಲರಾದ ಎಂ ಎಸ್. ಹಡಪದ ಶರಣು ಪೂಜಾರ, ಕಳಕಯ್ಯ ಸಾಲಿಮಠ, ಫಯಾಜ್ ತೋಟದ್, ಸಾಹಿತಿ ಟಿ.ಎಸ್. ಗೊರವರ್, ಮಾರುತಿ ಚಿಟಗಿ, ಮುಂತಾದವರು ಪಾಲ್ಗೊಂಡಿದ್ದರು.

ದಾವಣಗೆರೆ ಜಿಲ್ಲೆಯಲ್ಲಿ ದಾವಣಗೆರೆ ಮತ್ತು ಹರಿಹರದಲ್ಲಿ ಸೌಹಾರ್ದ ಮಾನವ ಸರಪಳಿ ಕಾರ್ಯಕ್ರಮ ನಡೆದಿದೆ. ದಾವಣಗೆರೆಯಲ್ಲಿ ಸುಮಾರು 200 ಜನ ಭಾಗವಹಿಸಿದ್ದರು, ಹರಿಹರದಲ್ಲಿ ಸುಮಾರು 150 ಜನ ಭಾಗವಹಿಸಿದ್ದರು,

ದಾವಣಗೆರೆಯಲ್ಲಿ ಮಾನವ ಬಂದುತ್ವ ವೇದಿಕೆಯ ಎ.ಬಿ. ರಾಮಚಂದ್ರಪ್ಪ, ವಕೀಲರ ಸಂಘದ ಅಧ್ಯಕ್ಷರಾದ ಎಲ್.ಹೆಚ್. ಅರುಣ್ ಕುಮಾರ್, ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಎ.ಐ.ಯು.ಟಿ.ಯು.ಸಿ., ಜನಶಕ್ತಿ, ಕರುಣಾಜೀವ ಟ್ರಸ್ಟ್, ನೆರಳು ಬೀಡಿ, ದಲಿತ ಸಂಘಟನೆಗಳ ಮುಖಂಡರು, ಪ್ರಗತಿಪರರು ಭಾಗವಹಿಸಿದ್ದರು. ಹರಿಹರದಲ್ಲಿ ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಎ.ಗೋವಿಂದರೆಡ್ಡಿ, ಜೆ. ಕಲೀಂಬಾಷಾ, ಹೆಚ್.ಕೆ ಕೊಟ್ರಪ್ಪ ಮುಂತಾದವರು ಪಾಲ್ಗೊಂಡಿದ್ದರು.

ಹಾಸನ ನಗರದ ಹೇಮಾವತಿ ಪ್ರತಿಮೆ ಬಳಿ ಬಹಿರಂಗ ಸಭೆ ಮತ್ತು ಮಾನವ ಸರಪಳಿ ನಡೆದಿದೆ. ಸುಮಾರು 300 ಜನರು ಪಾಲ್ಗೊಂಸಿದ್ದಾರೆ. ಸಾಹಿತಿ ರೂಪ ಹಾಸನ, ಹೆಚ್.ಆರ್.ಸ್ವಾಮಿ, ಪರ್ತಕರ್ತ ವೆಂಕಟೇಶ್, ಚಿತ್ರ ಕಲಾವಿದ ಕೆ.ಟಿ.ಶಿವಪ್ರಸಾದ್, ಅಜಾದ್ ಟಿಪ್ಪು ಸಂಘರ್ಷ ಸಮಿತಿಯ ಮೊಬಶೀರ್ ಅಹಮದ್, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್‌ವಾದ)ದ ಅಂಬುಗ ಮಲ್ಲೇಶ್, ದರ್ಮೇಶ್, ಪೃಥ್ವಿ, ನವೀನ್, ಪುಷ್ಪ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬೆಳಗಾಂನಲ್ಲಿ ಮೊದಲಿಗೆ ಕನ್ನಡ ಸಾಹಿತ್ಯ ಭವನದಲ್ಲಿ ಸುಮಾರು 250 ಜನರು ಪಾಲ್ಗೊಂಡ ಸೌಹಾರ್ದ ಸಭೆ, ಚೆನ್ನಮ್ಮ ಸರ್ಕಲ್‌ನಲ್ಲಿ ಮಾನವ ಸರಳಪಳಿ ನಡೆದಿದೆ. ಸಾಹಿತಿಗಳಾದ ಸರಜೂ ಕಾಟ್ಕರ್, ವೈ.ಬಿ. ಹಿಮ್ಮಡಿ, ಬೆಳಗಾಂನ ಕಾರಂಜಿ ಮಠದ ಶ್ರೀ ಗುರುಸಿದ್ದ ಸ್ವಾಮಿಗಳು, ಇಸ್ಲಾಮ್ ಧರ್ಮಗುರುಗಳಾದ ಮೌಲಾನಾ ಮುಷ್ತಾಕ್ ಅಹಮದ್ ಅಶ್ರಫಿ, ಕ್ರೈಸ್ತಧರ್ಮಗುರುಗಳಾದ ಫಾದರ್ ಡಾ. ಮೆನಿನೋ ಗೊನ್ಸಾಲ್ ಲ್ವಿಸ್, ಮಾನವ ಬಂಧುತ್ವ ವೇದಿಕೆಯ ಜಿಲ್ಲಾ ಮುಖಂಡರಾದ ಶಂಕರ್, ಗೈಬು ಜೈನೇಖಾನ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕೊಡಗು ಜಿಲ್ಲೆ ವಿರಾಜಪೇಟೆ ತಾಲ್ಲೂಕಿನ ಸಿದ್ದಾಪುರದಲ್ಲಿ ಸುಮಾರು ಮುನ್ನೂರಕ್ಕೂ ಹೆಚ್ಚು ಜನರ ಪಾಲ್ಗೊಂಡ ಮಾನವ ಸರಪಳಿ ನಡೆದಿದೆ. ಮಾನವ ಬಂಧುತ್ವ ವೇದಿಕೆಯ ಮಂಗಳೂರು ವಿಭಾಗ ಸಂಚಾಲಕರಾದ ಕೆ.ಎಸ್. ಸತೀಶ್ ಕುಮಾರ್, ಶಾಲಾ ಟ್ರಸ್ಟಿ ಮುಸ್ತಾಫ ಹಾಜಿ, ಸಾತಿ ಸೈಯದ್ ಡಾ. ದುರ್ಗಾ ಪ್ರಸಾದ್, ಎಚ್.ಬಿ.ರಮೇಶ್, ಸಿದ್ದಾಪುರ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಪ್ರೇಮಾ ಗೋಪಾಲ್, ಉಪಾಧ್ಯಕ್ಷೆ ಪಳನಿ ಸ್ವಾಮಿ, ನೆಲ್ಯಹುದಿಕೇರಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಧನಲಕ್ಷ್ಮಿ, ಮಾಲ್ದಾರೆ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಮಾಲತಿ, ಸಾಮಾಜಿಕ ಕಾರ್ಯಕರ್ತರಾದ ಜೋಕಿಮ್, ಸಿದ್ದಾಪುರ ಸೌಹಾರ್ದ ವೇದಿಕೆಯ ಅಧ್ಯಕ್ಷ ಎನ್.ಡಿ. ಕುಟ್ಟಪ್ಪ,ಕಾರ್ಯದರ್ಶಿ ಪಿ.ಆರ್. ಭರತ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಯಾದಗೀರ್ ಜಿಲ್ಲೆಯ ಶಾಪುರದ ಬಸವೇಶ್ವರ ಚೌಕದಲ್ಲಿ ಸುಮಾರು ಇನ್ನೂರು ಜನರು ಪಾಲ್ಗೊಂಡ ಸಭೆ ನಡೆದಿದೆ. ಬೆಂಗಳೂರು-ಬೀದರ್ ಹೆದ್ದಾರಿಯಲ್ಲಿ ಮಾನವ ಸರಪಳಿ ರಚಿಸಲಾಗಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಸಿದ್ದಲಿಂಗಪ್ಪ ಆನೆಗುಂದಿ, ಪತ್ರಕರ್ತರಾದ ವಿಶ್ವರಾಜ್ ಸತ್ಯಂಪೇಟೆ, ಶಿವಣ್ಣ ಇಜೇರಿ, ಡಿ.ಎಸ್.ಎಸ್.(ಭೀಮವಾದ)ದ ಮುಖಂಡರಾದ ನಾಗಣ್ಣ ಬಡಿಗೇರ, ರಾಜ್ಯ ರೈತ ಸಂಘದ ಮಹೇಶ್ ಸುಬೇದಾರ್, ಚೆನ್ನಪ್ಪ ಆನೇಗುಂದಿ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಬಳ್ಳಾರಿಯಲ್ಲಿ ಗಾಂಧಿಭವನದಲ್ಲಿ ಸೌಹಾರ್ದ ಸಭೆ ನಡೆದು, ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ನಂತರ ಮಾನವ ಸರಪಳಿ ರಚಿಸಲಾಗಿದೆ. ಬಸವೇಶ್ವರ ಪ್ರತಿಮೆವರೆಗೆ ಮೆರವಣಿಗೆಯನ್ನು ನಡೆಲಾಗಿದೆ. ಧಾರ್ಮಿಕ ಅಲ್ಪಸಂಖ್ಯಾತ ಸಮುದಾಯದ ಬಿಷಪ್ ಪಿಂಟೋ, ಡಾ. ಜೈನುದ್ದೀನ್, ಹುಮಾಯೂನ್ ಖಾನ್, ಜೈನ ಸಮುದಾಯದ ಪ್ರತಿನಿಧಿಗಳು, ಪಿಂಜಾರ ಸಮುದಾಯದ ಪ್ರತಿನಿಧಿಗಳು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ನಿಷ್ಠಿ ರುದ್ರಪ್ಪ, ಸತ್ಯಬಾಬು, ಸಾಹಿತಿ ಪಿ.ಆರ್.ವೆಂಕಟೇಶ್, ಮಾನವ ಬಂಧುತ್ವ ವೇದಿಕೆಯ ವಿಜಯ ಕುಮಾರ್, ಡಿ.ಎಸ್.ಎಸ್.ನ ಹುಸೇನಪ್ಪ, ಗಾಜಾಲಿಂಗ ಮುಂತಾದವರು ಪಾಲ್ಗೊಂಡಿದ್ದರು. ಸೊಂಡೂರಿನಲ್ಲಿ ಸಿರುಗುಪ್ಪದಲ್ಲಿ ತಲಾ ನೂರು ಜನರು ಪಾಲ್ಗೊಂಡ ಮಾನವ ಸರಪಳಿಗಳು ನಡೆದಿವೆ.

ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಗಾಂಧಿ ಪ್ರತಿಮೆಗೆ ಮಾಪಾರ್ಪಣೆ ಮಾಡಿ ಆಂಜನೇಯ ಗುಡಿ, ಚರ್ಚ್, ಮಸೀದಿ, ಗಾಂಧಿ ಪ್ರತಿಮೆ ಈ ಎಲ್ಲವನ್ನು ಒಳಗೊಳ್ಳುವಂತೆ ಮಾನವ ಸರಪಳಿ ರಚಿಸಲಾಗಿದೆ. ಸುಮಾರು 600 ಜನರು ಪಾಲ್ಗೊಂಡಿದ್ದಾರೆ. ಹಗರಿ ಬೊಮ್ಮನಹಳ್ಳಿಯಲ್ಲಿ ಸುಮಾರು 250 ಜನರು ಪಾಲ್ಗೊಂಡ ಮಾನವ ಸರಪಳಿ ನಡೆದಿದೆ. ಮಂಗಳೂರಿನ ಮೌಲ್ವಿ ಅಬೂಬಕರ್ ಸಿದ್ದಿಕಿ, ಸಾಹಿತಿ ಹುರಕಡ್ಲಿ ಶಿವಕುಮಾರ, ಕೃಷಿಕ ಸಮಾಜದ ಅಧ್ಯಕ್ಷರಾದ ದೇವರಾಜ್, ಮಾಳಮ್ಮ, ಜಗನ್ನಾಥ್ ಮುಂತಾದವರು ಪಾಲ್ಗೊಂಡಿದ್ದಾರೆ.

ಹಂಪಿ ವಿಶ್ವವಿದ್ಯಾಲಯದಲ್ಲಿಯೂ ಸಾಂಕೇತಿಕ ಮಾನವ ಸರಪಳಿ ಕಾರ್ಯಕ್ರಮ ನಡೆದಿದೆ.

ಬೀದರ್‌ನಲ್ಲಿ ಅಂದಾಜು ಆರುನೂರರಷ್ಟು ವಿದ್ಯಾರ್ಥಿಗಳು ಸೇರಿದಂತೆ ಸುಮಾರು ಒಂದು ಸಾವಿರದಷ್ಟು ಜನರು ಐ.ಬಿ. ಆವರಣದಿಂದ ಅಂಬೇಡ್ಕರ್ ವೃತ್ತದ ಮೆರವಣಿಗೆ ನಡೆಸಿ ಅಲ್ಲಿ ಮಾನವ ಸರಪಳಿ ರಚಿಸಲಾಯಿತು. ಶಾಲಾ ಪ್ರಾಂಶುಪಾಲರಾದ ಅಫ್ರಾನ್, ಅಂಬುಬಾಯಿ ಮುಂತಾದವರು ಮಾತನಾಡಿದರು.



ವಿಜಯಪುರದಲ್ಲಿ ಅಂಬೇಡ್ಕರ್ ಪ್ರತಿಮೆ ಬಳಿ ಸಾಂಕೇತಿಕ ಮಾನವ ಸರಪಳಿ ರಚಿಸಲಾಗಿದೆ. ಸುಮಾರು 50 ಜನರು ಪಾಲ್ಗೊಂಡಿದ್ದರು. ಅಣ್ಣಾರಾಯ ಈಳಗೇರ, ಡಿ.ಎಸ್.ಎಸ್.(ಅಂಬೇಡ್ಕರ್‌ವಾದ)ನ ಜಿಲ್ಲಾ ಸಂಚಾಲಕ ಸಂಜು ಕಂಬಾಗಿ ಮುಂತಾದವರು ಪಾಲ್ಗೊಂಡಿದ್ದರು. (ಇನ್ನಷ್ಟು ವಿವರಗಳು ಮುಂದಿನ ವಾರಕ್ಕೆ) -ಆರ್.ಕೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE February 5-11, 2024 Price: Rs. 10/- Date of Publication: 2 February 2024 RNI No. KARKAN /2006/17926 Posted on 5-02-2024
Posted at BG PSO, BG - 560026 **Posted at Periodical Rate -** Rs. 2

'ದ್ವೇಷ ಬಿಟ್ಟು ದೇಶ ಕಟ್ಟು' ಸಂದೇಶದೊಂದಿಗೆ ಕೈ ಕೈ ಹಿಡಿದು ನಿಂತ ಜನರು

ರಾಜ್ಯವ್ಯಾಪಿ ಮಾನವ ಸರಪಳಿ-ಸೌಹಾರ್ದ ಸಭೆಗಳು ನೂರಕ್ಕೂ ಹೆಚ್ಚು ಕೇಂದ್ರಗಳಲ್ಲಿ ಕಾರ್ಯಕ್ರಮಗಳು ಸಹಸ್ರಾರು ಜನರು ಭಾಗಿ

ಕರ್ನಾಟಕ ರಾಜ್ಯವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿಯೇ ಉಳಿಸಿಕೊಳ್ಳುತ್ತೇವೆ ಎಂಬ ಘೋಷಣೆಯೊಂದಿಗೆ ನೂರಾರು-ಸಹಸ್ರಾರು ಜನರು ರಾಜ್ಯವ್ಯಾಪಿಯಾಗಿ ಸೌಹಾರ್ದ ಮಾನವ ಸರಪಳಿ ಮತ್ತು ವೈವಿಧ್ಯಮಯ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ವರದಿಗಳು ಬಂದಿವೆ.

ಮೈಸೂರು ನಗರದಲ್ಲಿ ಸುಮಾರು 700 ಜನರು ಪಾಲ್ಗೊಂಡ ಮಾನವ ಸರಪಳಿ ನಡೆದಿದೆ. ಕೋಟೆ ಆಂಜನೇಯ ದೇವಸ್ಥಾನದಿಂದ ಲಷ್ಕರ್ ಪೊಲೀಸ್ ಠಾಣೆಯ ವರೆಗೆ ಹಾಗೂ ಸೇಂಟ್ ಫಿಲೋಮಿನಾ ಚರ್ಚ್‌ನಿಂದ ಆಜಂ ಮಸೀದಿಯವರೆಗೆ ಮಾನವ ಸರಪಳಿ ಏರ್ಪಡಿಸಲಾಗಿತ್ತು.

ಸಾಹಿತಿ ದೇವನೂರು ಮಹಾದೇವ, ಸುಮಿತ್ರಬಾಯಿ, ಅರವಿಂದ ಮಾಲಗತ್ತಿ, ಸಿ.ಬಸವಲಿಂಗಯ್ಯ, ಜನ್ನಿ, ಕೆ.ಎಸ್.ಭಗವಾನ್, ರಾಮೇಶ್ವರಿ ವರ್ಮಾ, ದಲಿತ ಸಂಘರ್ಷ ಸಮಿತಿಯ ಮುಖಂಡರುಗಳಾದ ಬೆಟ್ಟಯ್ಯ ಕೋಟೆ, ಹರಿಹರಾನಂದ ಸ್ವಾಮಿ, ಆಲ್ಗೂಡು ಶಿವಕುಮಾರ್, ರಾಜ್ಯ ರೈತ ಸಂಘದ ಹೊಸಕೋಟೆ ಬಸವರಾಜು, ಪರ್ತಕರ್ತರಾದ ಜಿ.ಪಿ. ಬಸವರಾಜು, ಟಿ.ಗುರುರಾಜ್, ಕೃಷ್ಣಪ್ರಸಾದ್, ಡಾ. ಲಕ್ಷ್ಮೀನಾರಾಯಣ, ಪ್ರೊ. ಲಕ್ಷ್ಮಿನಾರಾಯಣ, ರತಿರಾವ್, ಪ್ರೊ.ಕಾಳ ಚನ್ನೇಗೌಡ, ಸವಿತಾ ಮಲ್ಲೇಶ್. ವರದಯ್ಯ, ನೂರ್ ಅಹಮದ್ ಮರ್ಚೆಂಟ್, ಇನ್ಸಾಫ್‌ನ ಖಲೀಂ, ಜಗದೀಶ್ ಸೂರ್ಯ, ಎಲ್.ಜಗನ್ನಾಥ್, ಸುನಂದ್, ಬಸವರಾಜ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಸುಮಾರು ಒಂದು ಸಾವಿರ ಜನರು ಪಾಲ್ಗೊಂಡ ಮಾನವ ಸರಪಳಿಯು ಪ್ರಸಿದ್ಧ ರಂಗನಾಥ ದೇವಾಲಯದಿಂದ ಜಾಮಾ ಮಸೀದಿಯವರೆಗೆ ನಡೆದಿದೆ. ಚಿಂತಕ ಕೋಟಿಗಾನಹಳ್ಳಿ ರಾಮಯ್ಯ, ಜಿ.ಎನ್.ನಾಗರಾಜ್, ರಾಜ್ಯ ರೈತ ಸಂಘದ ಬಡಗಲಪುರ ನಾಗೇಂದ್ರ, ಕೆಂಪುಗೌಡ, ಇಲಿಯಾಸ್, ದಲಿತ ಸಂಘರ್ಷ ಸಮಿತಿಯ ವೆಂಕಟಗಿರಿಯಯ್ಯ, ಸೋಮವರದ, ಟಿ.ಎಲ್.ಕೃಷ್ಣೇಗೌಡ, ಪುಟ್ಟಮಾದು, ಸಿ. ಕುಮಾರಿ, ದೇವಿ, ಭರತರಾಜ್ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಶಿರೂರುವಿನಿಂದ ಉಡುಪಿಯವರೆಗೆ ಒಟ್ಟು 11 ಕಡೆಗಳಲ್ಲಿ ಯಶಸ್ವಿ ಮಾನವ ಸರಪಳಿಗಳು ನಡೆದಿವೆ. ಒಟ್ಟಾರೆ ಸುಮಾರು ಎರಡೂವರೆ ಸಾವಿರ ಜನರು ಈ ಮಾನವ ಸರಪಳಿಯಲ್ಲಿ ಪಾಲ್ಗೊಂಡಿದ್ದರು. ಉಡುಪಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ಫಣಿರಾಜ್, ಮಾಜಿ ಸಚಿವರಾದ ವಿನಯ ಕುಮಾರ ಸೊರಕೆ, ಬಾಲಕೃಷ್ಣ ಶೆಟ್ಟಿ, ಉಡುಪಿ ಹಾಗೂ ಕಣಜಾರ್‌ಗಳ ಚರ್ಚುಗಳ ಧರ್ಮಗುರುಗಳು, ಮುಸ್ಲಿಂ ಧರ್ಮಗುರುಗಳು, ಸಿ.ಐ.ಟಿ.ಯು., ಜನವಾದಿ ಮಹಿಳಾ ಸಂಘಟನೆ ಮುಂತಾದ ಸಂಘಟನೆಗಳ ಮುಖಂಡರು, ಶಶಿಧರ್, ಕವಿರಾಜ್, ಉಮೇಶ್ ಕುಂದರ್, ಕುಂದಾಪುರದಲ್ಲಿ ಚಿಂತಕರಾದ ರಾಮಕೃಷ್ಣ ಹೇರಳೆ, ವಿನೋದ್ ಕ್ರಾಸ್ತಾ, ಮಹಮದ್ ರಫೀಕ್, ರಿಯಾಜ್ ಕೋಡಿ, ಕೆ.ಶಂಕರ್, ಎಚ್. ನರಸಿಂಹ, ಸುರೇಶ್ ಕಲ್ಲಾಗರ್ ಮುಂತಾದವರು ಪಾಲ್ಗೊಂಡಿದ್ದರು.


ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿ ಸುಮಾರು 500 ಜನರು ಪಾಲ್ಗೊಂಡ ಮಾನವ ಸರಪಳಿ ನಡೆದಿದೆ. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಅಧ್ಯಕ್ಷ ಕೋಡಿ ರಂಗಪ್ಪ, ತಾಲ್ಲೂಕು ಅಧ್ಯಕ್ಷ ಸೊಣ್ಣೇಗೌಡ, ಕ್ರಿಶ್ಚಿಯನ್ ಅಲ್ಪಸಂಖ್ಯಾತ ಸಮುದಾಯದ ಹೆನ್ರಿ, ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯದ ಇನಾಯತ್ ಉಲ್ಲಾ, ರಾಜ್ಯ ರೈತ ಸಂಘ ಪುಟ್ಟಣ್ಣಯ್ಯ ಬಣದ ಲಕ್ಷ್ಮಿ ನಾರಾಯಣ ರೆಡ್ಡಿ, ಕೋಡಿಹಳ್ಳಿ ಚಂದ್ರಶೇಖರ್ ಬಣದ ರಾಮನಾಥ ರೆಡ್ಡಿ, ಮಾನವ ಹಕ್ಕುಗಳ ಹೋರಾಟ ಸಮಿತಿಯ ರಾಮಕೃಷ್ಣಪ್ಪ, ಶಿಕ್ಷಕ ಕೆ.ಎಂ. ರೆಡ್ಡಪ್ಪ ಎಂ.ಪಿ. ಮುನಿವೆಂಕಟಪ್ಪ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ.

ಬಾಗೇಪಲ್ಲಿಯಲ್ಲಿ ನ್ಯಾಷನಲ್ ಕಾಲೇಜಿನಿಂದ ಬಸ್ ನಿಲ್ದಾಣವನ್ನು ದಾಟಿ ಮುಂದೆ ಹೋದ, ಸುಮಾರು 2 ಕಿ.ಮೀ.ನಷ್ಟು ಉದ್ದದ ಮಾನವ ಸರಪಳಿ ರಚಿಸಲಾಗಿತ್ತು. ಸುಮಾರು ಒಂದೂವರೆ ಸಾವಿರ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 2200 ಕ್ಕೂ ಹೆಚ್ಚು ಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ವಕೀಲರಾದ ಜಿ.ಸುಧಾಕರ್, ನರಸಿಂಹಮೂರ್ತಿ, ಡಾ. ಅನಿಲ್ ಕುಮಾರ್, ರಾಜ್ಯರೈತ ಸಂಘ(ನಂಜುಂಡಸ್ವಾಮಿ)ದ ನಾರಾಯಣಸ್ವಾಮಿ, ಮುಂತಾದವರು ಪಾಲ್ಗೊಂಡಿದ್ದಾರೆ. ಗೌರಿಬಿದನೂರಿನಲ್ಲಿ ಸುಮಾರು 500 ಜನರು ಪಾಲ್ಗೊಂಡ ಮಾನವ ಸರಪಳಿ ನಡೆದಿದೆ. ಡಿ.ಎಸ್.ಎಸ್.ನ ಗಂಗಪ್ಪ, ಹಾನೂಡಿ ನಾಗರಾಜು, ಸಿ.ಸಿ. ಅಶ್ವಥ್, ಅಂಗನವಾಡಿಯ ವೆಂಕಟಲಕ್ಷ್ಮಮ್ಮ, ಬಿಸಿಯೂಟ ನೌಕರರ ಸಂಘಟನೆಯ ರಾಜಮ್ಮ ಮುಂತಾದವರು ಪಾಲ್ಗೊಂಡಿದ್ದಾರೆ. ಗುಡಿಬಂಡೆಯಲ್ಲಿ ಸುಮಾರು 250 ಜನರು ಪಾಲ್ಗೊಂಡ ಮಾನವ ಸರಪಳಿ ನಡೆದಿದೆ. ಜಯರಾಮರೆಡ್ಡಿ, ಡಿ.ಎಸ್.ಎಸ್.ನ ಈಶ್ವರಪ್ಪ ಮುಂತಾದವರು ಪಾಲೊಂಡಿದ್ದಾರೆ.

ಕೋಲಾರ ಜಿಲ್ಲಾ ಕೇಂದ್ರದಲ್ಲಿ ಸುಮಾರು ನೂರು ಜನರು ಪಾಲ್ಗೊಂಡ ಮಾನವ ಸರಪಳಿ ನಡೆದಿದೆ ಸೌಹಾರ್ದ ಸಭೆ ನಡೆದಿದೆ. ರೋಟರಿ ಕ್ಲಬ್‌ನ ಓಂ ಪ್ರಕಾಶ್, ವಕೀಲರಾದ ಸತೀಷ್, ಮಹಿಳಾ ಒಕ್ಕೂಟದ ಶಾಂತಮ್ಮ, ನಗರ ಸಭೆಯ ಮಾಜಿ ಸದಸ್ಯರುಗಳಾದ ಅಫ್ರೋಜ್ ಪಾಷಾ, ಸಲಾವುದ್ದೀನ್ ಬಾಬು, ಗಾಂಧಿನಗರ ನಾರಾಯಣ ಸ್ವಾಮಿ, ಗೀತಾ ಮುಂತಾದವರು ಪಾಲ್ಗೊಂಡಿದ್ದಾರೆ. ಮುಳಬಾಗಿಲಿನಲ್ಲಿ ಸುಮಾರು 500 ವಿದ್ಯಾರ್ಥಿಗಳು, ಶ್ರೀನಿವಾಸಪುರದಲ್ಲಿ ಸುಮಾರು 1000 ವಿದ್ಯಾರ್ಥಿಗಳು ಪಾಲ್ಗೊಂಡ ಮಾನವ ಸರಪಳಿಗಳು ನಡೆದಿವೆ. ಬಂಗಾರಪೇಟೆಯಲ್ಲಿ ಸುಮಾರು ನೂರು ಜನ, ಮಾಲೂರಿನಲ್ಲಿ ಸುಮಾರು ಅರವತ್ತು ಜನರು ಪಾಲ್ಗೊಂಡ ಮಾನವ ಸರಪಳಿಗಳು ನಡೆದಿವೆ.


ಮೈಸೂರ

ಕಲಬುರಗಿ ಜಿಲ್ಲೆಯ ಮೂರು ಕಡೆಗಳಲ್ಲಿ ಮಾನವ ಸರಪಳಿ ನಡೆದಿದೆ. ಕಲಬುರಗಿ ನಗರದ ಗಂಜ್ ಸರ್ಕಲ್‌ನಿಂದ ಹುಮ್ನಾಬಾದ್ ನಾಕಾವರೆಗೆ ಸುಮಾರು 2200 ಜನರು ಹಾಗೂ ಕೇಂದ್ರೀಯ ವಿಶ್ವವಿದ್ಯಾಲಯದ ಎದುರು ಸುಮಾರು 70 ಜನರು ಪಾಲ್ಗೊಂಡ ಮಾನವ ಸರಪಳಿಗಳು ನಡೆದಿವೆ. ಅಳಂದದಲ್ಲಿ ಸುಮಾರು 100 ಜನರು ಮಾನವ ಸರಪಳಿ ರಚಿಸಿದ್ದಾರೆ. ಕಲಬುರಗಿಯಲ್ಲಿ ಚಿತ್ರಕಲಾವಿದರು ನೂರು ಮೀಟರ್ ಅಗಲದ ಸೌಹಾರ್ದ ಕಲಾ ಚಿತ್ರಗಳನ್ನು ಬಿಡಿಸಿ ಸೌಹಾರ್ದ ಸಂದೇಶ ನೀಡಿದರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷೆ ಮೀನಾಕ್ಷಿ ಬಾಳಿ ಹಾಗೂ ಕೆ. ನೀಲಾ, ವಿಶ್ವವಿದ್ಯಾಲಯದ ನಂದಪ್ಪ ಮುಂತಾದವರು ಕಾರ್ಯಕ್ರಮಗಳಲ್ಲಿ ಜನರನ್ನುದ್ದೇಶಿಸಿ ಮಾತನಾಡಿದ್ದಾರೆ. ಅಂಗನವಾಡಿ, ಅಕ್ಷರ ದಾಸೋಹ ನೌಕರರ ಸಂಘಟನೆ, ಪ್ರಾಂತ ರೈತ ಸಂಘ, ದಲಿತ ಹಕ್ಕು ಸಮಿತಿ ಮುಂತಾದ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಕೆಂಗೇರಿ ವಲಯದಲ್ಲಿ ಒಟ್ಟು ಆರು ಕಡೆ ಮಾನವ ಸರಪಳಿ ನಡೆದಿದೆ. ಶಾಲಾ ವಿದ್ಯಾರ್ಥಿಗಳು, ಕೈಗಾರಿಕಾ ಕಾರ್ಮಿಕರು, ರೈತರು ಎಲ್ಲರೂ ಸೇರಿ ಸುಮಾರು 1500 ಜನರು ಮಾನವ ಸರಪಳಿಯಲ್ಲಿ ಕೈಜೋಡಿಸಿದ್ದಾರೆ.

ಶಾಂತಿನಗರ ಪ್ರದೇಶದಲ್ಲಿ ಮೂರು ಕಡೆ ಮಾನವ ಸರಪಳಿಗಳು ನಡೆದಿದ್ದು ಒಟ್ಟಾರೆ ಸುಮಾರು 800 ಜನರು ಪಾಲ್ಗೊಂಡಿದ್ದಾರೆ

ಆನೇಕಲ್ ವಲಯದಲ್ಲಿ ಚಂದಾಪುರದಿಂದ ಹೆಬ್ಬಗೋಡಿ ನಡುವೆ ಒಟ್ಟು 5 ಕಡೆ ಮಾನವ ಸರಪಳಿ ರಚಿಸಲಾಗಿದೆ. ದಲಿತ ಚಳುವಳಿಯ ಕಾರ್ಯಕರ್ತರು, ಕಾರ್ಮಿಕರು, ವಿದ್ಯಾರ್ಥಿಗಳು, ಆಟೋ ಚಾಲಕರು, ಬೀದಿ ಬದಿ ವ್ಯಾಪಾರಸ್ಥರು ಸೇರಿ ಸುಮಾರು ಒಂದು ಸಾವಿರದ ಇನ್ನೂರು ಜನರು ಮಾನವ ಸರಪಳಿಯಲ್ಲಿ ಕೈಜೋಡಿಸಿದ್ದಾರೆ. ಅದೇ ರೀತಿ ಜಯನಗರ-ಬಸವನ ಗುಡಿ ಪ್ರದೇಶದಲ್ಲಿ ಒಟ್ಟು 8 ಕಡೆ ಮಾನವ ಸರಪಳಿಗಳು ನಡೆದಿದ್ದು ಸುಮಾರು ಏಳುನೂರರಷ್ಟು ಜನರು ಮಾನವ ಸರಪಳಿಯಲ್ಲಿ ಪಾಲ್ಗೊಂಡಿದ್ದಾರೆ. ಮಡಿವಾಳ ವಲಯದಲ್ಲಿ ಒಟ್ಟು ಮೂರು ಕಡೆ ಮಾನವ ಸರಪಳಿ ನಡೆದಿದ್ದು, ಸುಮಾರು 800 ಕ್ಕೂ ಹೆಚ್ಚು ಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ. ಮಾನವ ಸರಪಳಿಯ ನಂತರ ಎಚ್.ಎಸ್.ಆರ್. ಬಡಾವಣೆಯಲ್ಲಿ 'ಗಾಂಧಿ ಹತ್ಯೆ-ತೆರೆಯ ಹಿಂದಿನ ಕರಾಳತೆ' ಎಂಬ ವಿಷಯದ ಕುರಿತು ಕಾರ್ಯಕ್ರಮ ನಡೆದಿದ್ದು, ಹಿರಿಯ ಕಾಂಗ್ರೆಸ್ ಮುಖಂಡರಾದ ವಿ.ಎಸ್.ಉಗ್ರಪ್ಪ, ಕೆ.ಪ್ರಕಾಶ್‌ರವರು ಈ ಕಾರ್ಯಕ್ರಮದಲ್ಲಿ ಮಾತನಾಡಿದ್ದಾರೆ. ವಿದ್ಯಾರ್ಥಿಗಳಿಗೆ ಸೌಹಾರ್ದ ಗೀತೆಗಳ ಸ್ಪರ್ಧೆಯನ್ನು ಏರ್ಪಡಿಸಿ ಬಹುಮಾನ ನೀಡಲಾಯಿತು.

ಬೆಂಗಳೂರು ಉತ್ತರದಲ್ಲಿ ದಾಸರಹಳ್ಳಿ ಮೆಟ್ರೊ ಬಳಿ ಜಾಲಹಳ್ಳಿ ಕ್ರಾಸ್ ಕಡೆಗೆ ಸುಮಾರು 300 ಜನರ ಮಾನವ ಸರಪಳಿ ನಡೆದಿದೆ. ಸಭೆ ನಡೆಸಿ ಸಂವಿಧಾನದ ಪ್ರಸ್ತಾವನೆ ಓದಿ ಪ್ರತಿಜ್ಞೆ ಸ್ವೀಕರಿಸಲಾಗಿದೆ. ಬೆಂಗಳೂರು ಪೂರ್ವವಲಯದ ಕೆ.ಆರ್.ಪುರಂ ವಲಯದಲ್ಲಿ ಬಿಬಿಎಂಪಿ ಕಚೇರಿಯಿಂದ ಮಾರ್ಕೆಟ್ ಕಡೆಗೆ ಸುಮಾರು 250 ಜನರು ಪಾಲ್ಗೊಂಡ ಮಾನವ ಸರಪಳಿ ನಡೆಸಲಾಗಿದೆ.

ಬೆಂಗಳೂರು ಗ್ರಾಮಾಂತರದ ದೊಡ್ಡಬಳ್ಳಾಪುರದಲ್ಲಿ ಮಹಾತ್ಮಗಾಂಧಿ ಪ್ರತಿಮೆಗೆ ಮಾಪಾರ್ಪಣೆ ಮಾಡಿ, ನಗರದ ಪ್ರಮುಖ ಬೀದಿಗಳಲ್ಲಿ ಸೌಹಾರ್ದ ಸಂದೇಶ ಸಾರುವ ಮೆರವಣಿಗೆ ನಡೆಸಿ ತಾಲ್ಲೂಕು ಕಚೇರಿ ವೃತ್ತದಲ್ಲಿ ಮಾನವ ಸರಪಳಿ ರಚಿಸಲಾಗಿದೆ. ಪ್ರಾಧ್ಯಾಪಕ ಪ್ರಕಾಶ್ ಮಂಟೇದ, ಕನ್ನಡ ಹೋರಾಟಗಾರ ಜಗದೀಶ್, ಚಂದ್ರ ತೇಜಸ್ವಿ, ಸಂವಿಧಾನ ರಕ್ಷಣೆಗಾಗಿ ನಾಗರೀಕರ ವೇದಿಕೆಯ ರಾಜು ಸಣ್ಣಕ್ಕಿ ಸೇರಿದಂತೆ ನೂರಾರು ಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಹೊಸಕೋಟೆಯಲ್ಲಿ ಕೆ.ಇ.ಬಿ. ವೃತ್ತದಿಂದ ತಾಲ್ಲೂಕು ಕಚೇರಿವರೆಗೆ ಸೌಹಾರ್ದ ಸಾರುವ ಮೆರವಣಿಗೆ ನಡೆಸಿ ಅಲ್ಲಿ ಮಾನವ ಸರಪಳಿ ರಚಿಸಲಾಗಿದೆ. ಸುಮಾರು ಮನ್ನೂರಕ್ಕೂ ಹೆಚ್ಚು ಜನರು ಪಾಲ್ಗೊಂಡ ಸೌಹಾರ್ದ ಸಭೆಯನ್ನುದ್ದೇಶಿಸಿ ಅಖಿಲ ಭಾರತ ವಕೀಲ ಸಂಘದ ರಾಜ್ಯ ಅಧ್ಯಕ್ಷರಾದ ಹರೀಂದ್ರ, ಡಿ.ಎಸ್.ಎಸ್.(ಅಂಬೇಡ್ಕರ್‌ವಾದ)ದ ಮುಖಂಡರಾದ ಚಿನ್ನಸ್ವಾಮಿ, ರೈತ ಮುಖಂಡರಾದ ಪ್ರಭುದೇವಯ್ಯ, ರಾಜ್ಯ ರೈತ ಸಂಘದ ಅಕ್ಕಲೇಗೌಡ, ಹೈದರ್ ಬೇಗ್ ಮುಂತಾದವರು ಮಾತನಾಡಿದ್ದಾರೆ.

ರಾಮನಗರದಲ್ಲಿ ಸುಮಾರು 100 ಜನರು ಪಾಲ್ಗೊಂಡ ಮಾನವ ಸರಪಳಿ ಬೆಂಗಳೂರು-ಮೈಸೂರು

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027 Editor : **NITYANANDASWAMI**